## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِہٖ وَاَمْرِہٖ


بِسْمِ اللهِ الرَّحْمٰنِ الرَّحِيْمِ نَحْمَدُہٗ وَنُصَلِّیْ عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 06

ಸಂಚಿಕೆ: 07–08

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**13–20 ಫೆಬ್ರವರಿ 2025, 13–20 ತಬ್ಲೀಗ್ 1403 ಹಿಜರಿ ಶಮ್‌ಸಿ, 14–21 ಶಅ್‌ಬಾನ್ 1445 ಹಿಜರಿ ಖಮರಿ.**


## ಅಲ್ಲಾಹನ ಉಪದೇಶ

وَالَّذِيْنَ اسْتَجَابُوْا لِرَبِّهِمْ
وَاَقَامُوا الصَّلٰوةَ ۖ وَاَمْرُهُمْ شُوْرٰى
بَيْنَهُمْ ۖ وَمِمَّا رَزَقْنٰهُمْ يُنْفِقُوْنَ

**(ಅಶ್ಶೂರಾ: 39)**

ಅಂದರೆ: . ತಮ್ಮ ಪ್ರಭುವಿನ ಕರೆಗೆ ಅವರು ಓಗೊಡುತ್ತಾರೆ; ನಮಾಝನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೆ; ಪರಸ್ಪರ ಸಮಾಲೋಚನೆ ಮಾಡಿ ತಮ್ಮ ಕಾರ್ಯಗಳನ್ನು ತೀರ್ಮಾನಿಸುತ್ತಾರೆ ಮತ್ತು ನಾವು ಅವರಿಗೆ ದಯಪಾಲಿಸಿದವುಗಳಿಂದ ವೆಚ್ಚ ಮಾಡುತ್ತಾರೆ.

## ಹಝ್ರತ್ ಮುಸ್ಲಿಹ್ ಮೌಊದ (ರಝಿಯಲ್ಲಾಹು ಅನ್‌ಹು) ರವರ ಬಗ್ಗೆ ಭವಿಷ್ಯವಾಣಿ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:**

“**ಬಿಇಲ್ಹಾಮಿಲ್ಲಾಹಿ ತಆಲಾ ವ ಇಲಾಮಿಹೀ ಅಝ್ಝವಜಲ್ಲ** ಕರುಣಾಮಯಿ ಹಾಗೂ ಗೌರವಾನ್ವಿತ ಹಾಗೂ ಶ್ರೇಷ್ಠ ಮತ್ತು ಎಲ್ಲಾ ವಿಷಯಗಳಲ್ಲಿಯು ಬಲಿಷ್ಠನಾದ ಅಲ್ಲಾಹನು (**ಜಲ್ಲ ಶನುಹೂ ವ ಅಝ್ಝ ಇಸ್‌ಮುಹೂ**) ನನಗೆ ತನ್ನ ದಿವ್ಯವಾಣಿಯ ಮೂಲಕ ಸಂಬೋಧಿಸಿ ಹೀಗೆ ನುಡಿದಿದ್ದಾನೆ: ನಾನು ನಿನಗೆ ನೀನು ನನ್ನೊಂದಿಗೆ ಬೇಡಿಕೊಂಡ ಹಾಗೆ ಒಂದು ಕರುಣೆಯ ಕುರುಹು ನೀಡುವೆನು. ನಾನು ನಿನ್ನ ವಿನಮ್ರತೆಯ ಪ್ರಾರ್ಥನೆಗಳನ್ನು (**ತಝರ್ರುಆತ್**) ಆಲಿಸಿ ತನ್ನ ಅನುಗ್ರಹದೊಂದಿಗೆ ಸ್ವೀಕೃತಿ ನೀಡಿದೆನು ಮತ್ತು ನಿನ್ನ ಪ್ರಯಾಣವನ್ನು (ಹೊಶ್ಯಾರ್‌ಪುರ ಮತ್ತು ಲುಧ್ಯಾನದ ಪ್ರಯಾಣ) ನಿನಗಾಗಿ ಶುಭಕರಗೊಳಿಸಿರುವೆನು. ಆದ್ದರಿಂದ ದೈವಶಕ್ತಿಯ ಮತ್ತು ಕರುಣೆ ಹಾಗೂ ಸಾಮಿಪ್ಯದ ಕುರುಹು ನಿನಗೆ ನೀಡಲಾಗುತ್ತಿದೆ. ಅನುಗ್ರಹ ಮತ್ತು ಉಪಕಾರದ ಕುರುಹು ನಿನಗೆ ನೀಡಲಾಗುತ್ತಿದೆ ಮತ್ತು ಗೆಲುವು(ಫತಹ್) ಹಾಗೂ ಸಫಲತೆಯ(ಝಫರ್) ಕೀಲಿಗೈ ನಿನಗೆ ಸಿಗುತ್ತಿದೆ. ಎಲ್ಲೈ ಮುಝಫ್ಫರ್! ನಿನ್ನ ಮೇಲೆ ಶಾಂತಿ ಇರಲಿ. ಅಲ್ಲಾಹನು ಹೀಗೆ ಹೇಳಲು ಕಾರಣ ಜೀವಿಸಲು ಬಯಸುವವರು ಮೃತ್ಯುವಿನ ದವಡೆಯಿಂದ ಮುಕ್ತಿ ಪಡೆಯಲಿ ಮತ್ತು ಗೋರಿಗಳಲ್ಲಿ ಹೂತಲ್ಪಟ್ಟವರು ಹೊರ ಬರಲಿ ಮತ್ತು ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ(ಪವಿತ್ರ ಖುರ್‌ಆನ್) ಪದವಿ ಜನರ ಮೇಲೆ ಸ್ಪಷ್ಟವಾಗಲಿ. ಹೀಗೆ ಸತ್ಯವು ತನ್ನ ಎಲ್ಲ ಅನುಗ್ರಹಗಳೊಂದಿಗೆ ಬರುವಂತಾಗಲಿ ಹಾಗೂ ಮಿಥ್ಯವೂ ತನ್ನ ಎಲ್ಲ ಅಪಶಕುನದೊಂದಿಗೆ ಪಲಾಯನ ಮಾಡಲಿ. ಹೀಗೆ ಜನರು ತಿಳಿಯುವರು ನಾನು ಎಲ್ಲಾ ಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದೇನೆ (ಖಾದಿರ್). ನಾನು ಬಯಸಿದನ್ನೆಲ್ಲ ಮಾಡಬಲ್ಲೆನು ಮತ್ತು ನಾನು ನಿನ್ನೊಂದಿಗಿದ್ದೇನೆ ಎಂದು ಅವರಿಗೆ ಮನವರಿಕೆ ಆಗಲಿ ಮತ್ತು ಯಾರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವರೊ, ಅಲ್ಲಾಹ್ ಮತ್ತು ಅಲ್ಲಾಹನ ಧರ್ಮ, ಅವನ ಗ್ರಂಥ ಮತ್ತು ಅವನ ಪ್ರವಾದಿಯಾದ ಮುಹಮ್ಮದ್ ಮುಸ್ತಫಾ ಸಲಲ್ಲಾಹು ಅಲೈಹಿವಸಲ್ಲಮರನ್ನು ನಿರಾಕರಿಸುತ್ತಾರೆ ಮತ್ತು ಧಿಕ್ಕರಿಸುವ ದೃಷ್ಟಿಯಿಂದ ನೋಡುವವರೋ ಅವರಿಗಾಗಿ ಒಂದು ಸ್ಪಷ್ಟವಾದ ಮಾರ್ಗ ದೊರೆಯುವಂತಾಗಲಿ ಮತ್ತು ಅಪರಾಧಿಗಳ ಮಾರ್ಗವು ಬಹಿರಂಗವಾಗಲಿ.

ಆದ್ದರಿಂದ ನಿನಗೆ ಶುಭವಾರ್ತೆ ಇದೆ. ಓರ್ವ ಗೌರವಾನ್ವಿತ ಹಾಗೂ ಪರಿಶುದ್ಧ ಬಾಲಕ ನಿನಗೆ ನೀಡಲಾಗುವುದು. ಓರ್ವ ಪವಿತ್ರ ದಾಸ(ಬಾಲಕ) ನಿನಗೆ ದಯಪಾಲಿಸಲಾಗುವುದು. ಆ ಬಾಲಕನು ನಿನ್ನ ಅಂಶದಿಂದಲೇ (ಬೀಜ) ನಿನ್ನ ವಂಶ ಹಾಗೂ ಜನಾಂಗದಿಂದಾಗುವುದು. ಸುಂದರವಾದ ಮತ್ತು ಪವಿತ್ರ ಬಾಲಕ ನಿಮ್ಮ ಅತಿಥಿಯಾಗಿ ಬರುವನು ಅವನ ಹೆಸರು **ಅನ್‌ಮವಾಯೀಲ್** ಮತ್ತು ಬಶೀರ್ ಸಹ ಆಗಿರುವುದು. ಅವನಿಗೆ ಪರಿಶುದ್ಧ ಆತ್ಮ ನೀಡಲಾಗಿದೆ ಮತ್ತು ಅವನು ಕೊಳಕಿನಿಂದ ಪರಿಶುದ್ಧನಾಗಿದ್ದಾನೆ. ಅವನು ಅಲ್ಲಾಹನ ಪ್ರಕಾಶ ಆಗಿದ್ದಾನೆ. ಆ ಸೌಭಾಗ್ಯನು ಆಕಾಶದಿಂದ ಬರುವನು. ಅಲ್ಲಾಹನ ಕೃಪೆ ಅವನೊಂದಿಗೆ ಇದೆ ಅದು ಅವನೊಂದಿಗೆ ಬರುವುದು. ಅವನ ವ್ಯಕ್ತಿತ್ವವು ಅದ್ಭುತ, ಶ್ರೇಷ್ಠ ಹಾಗೂ ಸಂಪತ್ಭರಿತವಾಗಿರುತ್ತದೆ. ಅವನು ಲೋಕಕ್ಕೆ ಪಾದರ್ಪಣೆ ಮಾಡುವನು ಮತ್ತು ತನ್ನ ಮಸೀಹನ ಆತ್ಮದೊಂದಿಗೆ ಮತ್ತು **‘ರೂಹುಲ್‌ಹಖ್ಖಿನೊಂದಿಗೆ’** ಜಿಬ್ರೀಲ್‌ನ ಅನುಗ್ರಹಗಳಿಂದ ಹಲವರನ್ನು ರೋಗಗಳಿಂದ ಮುಕ್ತಗೊಳಿಸುವನು. ಅವನು **‘ಕಲಿಮತುಲ್ಲಾಹ್’** ಅಲ್ಲಾಹನ ದಿವ್ಯವಾಣಿ ಆಗಿದ್ದಾನೆ ಏಕೆಂದರೆ ಅಲ್ಲಾಹನ ಕರುಣೆ ಮತ್ತು ಮಹಾಸ್ವಾಭಿಮಾನವು ಅವನನ್ನು **ಕಲಿಮ ತಮ್‌ಜೀದಿನ** ಪವಿತ್ರ ಆತ್ಮದೊಂದಿಗೆ ಕಳುಹಿಸಿದ್ದಾನೆ. ಅವನು ಅತ್ಯಂತ ಬುದ್ಧಿವಂತನೂ ಮತ್ತು ವಿವೇಕಶಾಲಿಯು ಆಗಿರುವನು ಮತ್ತು ಹೃದಯವೈಶಾಲ್ಯ ಹೊಂದಿರುವನು ಹಾಗೂ ಲೌಕಿಕ ಹಾಗೂ ಆಂತರಿಕ ಜ್ಞಾನದಿಂದ ಪರಿಪೂರ್ಣನಾಗಿರುವನು. ಅವನು ಮೂರನ್ನು ನಾಲ್ಕು ಮಾಡುವನಾಗಿರುವನು (ಇದರ ಅರ್ಥ ತಿಳಿದುಬರಲಿಲ್ಲ) ದೊಶುಂಬ(ಸೋಮವಾರ) ಶುಭಕರ ದೋಶುಂಬ(ಸೋಮವಾರ)ವಾಗಿದೆ. ಆತ್ಮೀಯ ಮಗು ಪ್ರೀಯ ಮಗು **ಮಝ್‌ಹರುಲ್ ಅವ್ವಲಿ ವಲ್ ಆಖಿರೆ– ಮಝ್‌ಹರುಲ್ ಹಖ್ಖೆ ವಲ್‌ಅಲಾಎ– ಕಅನ್ನಲ್ಲಹ ನಝಲ ಮಿನಸ್ಸಮಾಯಿ.** ಅವನ ಆಗಮನವೂ ಬಹಳ ಅನುಗ್ರಹದಾಯಕವಾಗಿದೆ ಮತ್ತು ಅಲ್ಲಾಹನ ಪ್ರತಾಪ ಕಾಣಲು ಕಾರಣವಾಗಿದೆ. ಪ್ರಕಾಶವು ಆಗಮಿಸುತ್ತದೆ ಪ್ರಕಾಶವ ನೋಡಿರಿ. ಅವನನ್ನು ಅಲ್ಲಾಹನು ತನ್ನ ಸಂಪ್ರೀತಿಯ ಸುಗಂಧದಿಂದ ಸಮ್ಮಿಲಿತಗೊಳಿಸಿದ್ದಾನೆ. ನಾವು ಅವನಲ್ಲಿ ತನ್ನ ಆತ್ಮವನ್ನು ಹಾಕುವೆನು, ಅಲ್ಲಾಹನ ನೆರಳು ಅವನ ಶಿರದ ಮೇಲೆ ಇರುವುದು. ಅವನು ಅತಿ ಅತಿ ವೇಗವಾಗಿ ಬೆಳೆಯುವನು ಮತ್ತು ಕೈದಿಗಳನ್ನು ಬಿಡುಗಡಗೊಳಿಸಲು ಕಾರಣವಾಗುವನು ಮತ್ತು ಭೂಮಿಯ ಅಂಚುಗಳವರೆಗೆ ಖ್ಯಾತಿ ಪಡೆಯುವನು ಹಾಗೂ ಜನಾಂಗಗಳು ಇವನಿಂದ ಅನುಗ್ರಹ ಪಡೆಯುವರು. ಆಗ ತನ್ನ ಆತ್ಮ ಬಿಂದು ಆಕಾಶದೆಡೆ ಎತ್ತಲ್ಪಡುವುದು **ವಕಾನ ಅಮ್‌ರಮ್ಮಖ್ಝೀಯ.**”

**(ಮಜ್‌ಮೂಆ ಇಶ್ತಿಹಾರಾತ್, ಸಂಪುಟ–1, ಪುಟ–100, ಇಶ್ತಿಹಾರ್ 20 ಫೆಬ್ರವರಿ 1886)**

# ಖುತ್‌ಬ ಜುಮುಅ

ಯಾ ರಸೂಲಲ್ಲಾಹ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ), ಒಂದು ಕಾಲವಿತ್ತು. ಆಗ ನನಗೆ ಪೂರ್ತಿ ಲೋಕದಲ್ಲಿ ನಿಮ್ಮೊಂದಿಗೆ, ನಿಮ್ಮ ದೀನಿನೊಂದಿಗೆ, ನಿಮ್ಮ ಪಟ್ಟಣದೊಂದಿಗೆ ಅತ್ಯಂತ ಹೆಚ್ಚಿನ ಹಗೆಯಿತ್ತು. ಆದರೆ ಈಗ ನನಗೆ ನೀವು, ನಿಮ್ಮ ದೀನ್ ಮತ್ತು ನಿಮ್ಮ ಪಟ್ಟಣ ಅತ್ಯಂತ ಹೆಚ್ಚು ಪ್ರಿಯವಾಗಿ ಬಿಟ್ಟಿದೆ.

## ಖುರ್‌ತಾ ಯುದ್ಧದ ಸಂದರ್ಭಗಳು ಮತ್ತು ಘಟನೆಗಳ ವಿವರಾತ್ಮಕ ಪ್ರಸ್ತಾವನೆ

ಮಾನ್ಯ ಅಬ್ದುಲ್ ಲತೀಫ್ ಖಾನ್ ಸಾಹಿಬ್ ಆಫ್ ಯುಕೆ, ಮಾನ್ಯ ತೈಯಬ್ ಅಹ್ಮದ್ ಸಾಹಿಬ್ ಶಹೀದ್, ಅಝೀಝುಮ್ ಮುಹನ್ನದ್ ಮಯಯ್ಯದ್ ಅಬು ಅವಾದ್ ಸಾಃಇನ್, ಮೌಲವಿ ಅಯ್ಯೂಬ್ ಬಟ್ ಸಾಹಿಬ್ ದರ್ವೇಶ್ ಖಾದಿಯಾನ್, ಮಾನ್ಯ ಡಾ|| ಮಸ್‌ಊದ್ ಅಹ್ಮದ್ ಮಲಿಕ್ ಸಾಹಿಬ್ ಆಫ್ ಅಮೇರಿಕ ಮತ್ತು ಮಾನು ಶಬ್ಬೀರ್ ಅಹ್ಮದ್ ಲೋಧಿ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಮತ್ತು ನಮಾಝೆ ಜನಾಝ ಗ್ವಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **13–12–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಪೈಗಂಬರ್(ಸ)ರ ಜೀವಿತಕ್ಕೆ ಸಂಬಂಧಪಟ್ಟ ಒಂದು ಯುದ್ಧದ ಬಗ್ಗೆ ಇಂದು ನಾನು ಪ್ರಸ್ತಾಪಿಸುತ್ತೇನೆ. ಈ ಯುದ್ಧವನ್ನು ಸರಿಯ ಖುರ್‌ತಾ ಎಂದು ಕರೆಯಲಾಗುತ್ತದೆ. ಈ ಯುದ್ಧ ಹಿಜರೀ 6, ಮುಹರ್ರಮ್ 6ರಲ್ಲಿ ನಡೆದಿತು. ಹಝ್ರತ್ ಪೈಗಂಬರ್(ಸ) ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ(ರ)ರನ್ನು ಮೂವತ್ತು ಸವಾರರ ಜೊತೆಗೆ ಖುರ್‌ತಾ ಎಂಬ ಪ್ರದೇಶಕ್ಕೆ ಕಳುಹಿಸಿದರು.

ಖುರ್‌ತಾ ಬನು ಬಕರ್ ಬಿನ್ ಕಿಲಾಬ್‌ನ ಒಂದು ಶಾಖೆಯಾಗಿದ್ದು, ಅವರು ಝರಿಯ್ಯದ ಹೊರವಲಯದಲ್ಲಿರುವ ಬಕ್ರಾತ್ ಎಂಬ ಸ್ಥಳದಲ್ಲಿ ವಾಸಿಸುತ್ತಿದ್ದರು. ಬಕ್ರಾತ್ ಮದೀನಾದಿಂದ ಏಳು ರಾತ್ರಿಗಳ ಪ್ರಯಾಣವಾಗಿತ್ತು. ಮತ್ತು ಝರಿಯ್ಯ ಬನು ಕಿಲಾಬ್‌ನ ಪ್ರಾಚೀನ ನಗರವಾಗಿತ್ತು. ಪ್ರಾಚೀನ ಇತಿಹಾಸದಲ್ಲಿ ಕಂಡುಬರುವ ವರದಿಗಳ ಪ್ರಕಾರ, ಇದು ಮದೀನಾದಿಂದ ಏಳು ರಾತ್ರಿಗಳ ದೂರದಲ್ಲಿತ್ತು. ಇತ್ತೀಚಿನ ದಿನಗಳಲ್ಲಿ, ದೂರವನ್ನು ಕಡಿತಗೊಂಡಿರಬೇಕು. ಒಂದು ವರದಿಯ ಪ್ರಕಾರ ಝರಿಯ್ಯವು ಮದೀನಾದಿಂದ ಒಂದು ಅಥವಾ ಎರಡು ರಾತ್ರಿಗಳ ಪ್ರಯಾಣವಾಗಿತ್ತು ಎಂದು ಹೇಳಲಾಗುತ್ತದೆ.

(ಅತ್ತಬಖಾತುಲ್ ಕುಬ್ರ ಲಿಇಬ್‌ನೆ ಸಅದ್, ಸಂಪುಟ–2, ಪುಟ–60, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ (ರ.ಅ), ಪುಟ 663–664 ) (ಫರ್ಹಾಂಗ್ ಸೀರತ್, ಪುಟ 60, 233. ಝುವಾರ ಅಕಾಡೆಮಿ ಕರಾಚಿ) (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–6, ಪುಟ–71, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್)

ಈ ಮೂವತ್ತು ಸಹಾಬಗಳಲ್ಲಿ ಹಝ್ರತ್ ಅಬ್ಬಾದ್ ಬಿನ್ ಬಿಶ್ರ್[ರ], ಹಝ್ರತ್ ಸಲಾಮ ಬಿನ್ ಸಲಾಮ[ರ] ಮತ್ತು ಹಝ್ರತ್ ಹಾರಿಸ್ ಬಿನ್ ಖುಝ್ಮ[ರ] ಸೇರಿದ್ದಾರೆ. ಹಝ್ರತ್ ಪೈಗಂಬರ್(ಸ)ರು ಈ ಗುಂಪಿಗೆ ರಾತ್ರಿಯಲ್ಲಿ ಪ್ರಯಾಣಿಸಲು ಮತ್ತು ಹಗಲಿನಲ್ಲಿ ಅಡಗಿಕೊಂಡು ಶರ್ಬಾ ಎಂಬ ಸ್ಥಳದಲ್ಲಿ ಅವರನ್ನು ತಲುಪುವವರೆಗೆ ಹಠಾತ್ತನೆ ದಾಳಿ ಮಾಡಲು ಆದೇಶಿಸಿದರು. (ಶರ್ಬಾ ನಜದ್‌ನಲ್ಲಿ ಒಂದು ಸ್ಥಳವಾಗಿತ್ತು) ಆಗ ಅವರಿಗೆ ಕೆಲವು ಸವಾರಿಗಳು ಸಿಕ್ಕವು. ಹಝ್ರತ್ ಮುಹಮ್ಮದ್ ಬಿನ್ ಮಸ್ಲಮಾ[ರ] ಅವರು ಯಾರು ಎಂದು ಕೇಳಲು ತಮ್ಮ ಸಹಚರರಲ್ಲಿ ಒಬ್ಬರನ್ನು ಕಳುಹಿಸಿದರು. ಅವರು ಹೋಗಿ ಹಿಂತಿರುಗಿ ಬಂದು ಅವರು ಮುಹಾರಿಬ್ ಗೋತ್ರದವರು ಎಂದು ಹೇಳಿದರು. ಅವರು ಹತ್ತಿರದಲ್ಲೇ ಬೀಡುಬಿಟ್ಟು ಮತ್ತು ತಮ್ಮ ಪ್ರಾಣಿಗಳನ್ನು ಮೇಯಲು ಬಿಟ್ಟಿದ್ದರು. ಮುಸ್ಲಿಮರು ಅವರಿಗೆ ನೀರಿನ ಸುತ್ತಲೂ ಕುಳಿತುಕೊಳ್ಳಲು ಸಾಕಷ್ಟು ಸಮಯ ನೀಡಿದರು, ಮತ್ತು ನಂತರ ಮುಸ್ಲಿಮರು ಅವರ ಮೇಲೆ ದಾಳಿ ಮಾಡಿದರು. ಅವರಲ್ಲಿ ಕೆಲವರು ಕೊಲ್ಲಲ್ಪಟ್ಟರು ಮತ್ತು ಉಳಿದವರು ಓಡಿಹೋದರು. ಓಡಿಹೋದವರನ್ನು ಹಿಂಬಾಲಿಸಲಿಲ್ಲ. ಸಹಾಬಗಳು ಒಂಟೆಗಳು ಮತ್ತು ಮೇಕೆಗಳನ್ನು ಓಡಿಸಿದರು ಮತ್ತು ಮಹಿಳೆಯರಿಗೆ ಏನೂ ಹೇಳಲಿಲ್ಲ. ನಂತರ ಅವರು ಅಲ್ಲಿಂದ ಹೊರಟರು ಮತ್ತು ಬನು ಬಕರ್ ಅವರನ್ನು ನೋಡಬಹುದಾದ ಸ್ಥಳವನ್ನು ತಲುಪಿದಾಗ, ಹಝ್ರತ್ ಮುಹಮ್ಮದ್ ಬಿನ್ ಮಸ್ಲಮಾ[ರ] ಅವರು ಹಝ್ರತ್ ಆಯಿದ್ ಬಿನ್ ಬುಸ್ರ್[ರ] ಅವರನ್ನು ಪರಿಸ್ಥಿತಿಯ ಬಗ್ಗೆ ವಿಚಾರಿಸಲು ಬನು ಬಕರ್ ಕಡೆಗೆ ಕಳುಹಿಸಿದರು. ಹಝ್ರತ್ ಆಯಿದ್[ರ] ಹಿಂದಿರುಗಿ ಬಂದು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮಾ[ರ] ರವರಿಗೆ ಪರಿಸ್ಥಿತಿಯ ಬಗ್ಗೆ ತಿಳಿಸಿದರು. ನಂತರ ಹಝ್ರತ್ ಮುಹಮ್ಮದ್ ಬಿನ್ ಮಸ್ಲಮಾ[ರ] ತಮ್ಮ ಸಹಾಬರೊಂದಿಗೆ ಹೊರಟು ಬನು ಬಕರ್ ಮೇಲೆ ದಾಳಿ ಮಾಡಿದರು. ಅವರು ಹತ್ತು ಜನರನ್ನು ವಧಿಸಿ, ಒಂಟೆಗಳು ಮತ್ತು ಮೇಕೆಗಳನ್ನು ಓಡಿಸಿ, ಮದೀನಾ ಕಡೆಗೆ ಧಾವಿಸಿದರು. ಹಝ್ರತ್ ಮುಹಮ್ಮದ್ ಬಿನ್ ಮಸ್ಲಮಾ[ರ] ತಮ್ಮ ಕೆಲವು ಸಹಚರರನ್ನು ಮೇಕೆಗಳೊಂದಿಗೆ ಬಿಟ್ಟು ಒಂಟೆಗಳನ್ನು ಓಡಿಸಿಕೊಂಡು ಮದೀನಾದಲ್ಲಿರುವ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದರು. ತದನಂತರ, ಮೇಕೆಗಳು ಸಹ ಬಂದವು. ಹಝ್ರತ್ ಪೈಗಂಬರ್(ಸ) ಅದರಲ್ಲಿ ಐದನೇ ಒಂದು ಭಾಗವನ್ನು ತೆಗೆದುಕೊಂಡು ಉಳಿದ ಭಾಗವನ್ನು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮಾ[ರ] ರವರ ಸಹಚರರಲ್ಲಿ ಹಂಚಿದರು. ಒಂದು ಒಂಟೆಯನ್ನು ಹತ್ತು ಮೇಕೆಗಳಿಗೆ ಸಮಾನವೆಂದು ಪರಿಗಣಿಸಲಾಗುತ್ತಿತ್ತು.

(ಮೂಲ: ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–6, ಪುಟ–71, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಫರ್ಹಾಂಗ್ ಸೀರತ್, ಪುಟ–217, ಝುವಾರಾ ಅಕಾಡೆಮಿ, ಕರಾಚಿ)

ಈ ಸಂಪೂರ್ಣ ವರದಿಯು ಒಂದು ಇತಿಹಾಸ ಪುಸ್ತಕದಲ್ಲಿದೆ, ಆದ್ದರಿಂದ ಯಾವುದೇ ವಿವರವಿಲ್ಲದ ಕಾರಣ ಇಷ್ಟೊಂದು ದೊಡ್ಡ ಅನ್ಯಾಯ ನಡೆದಿದೆ ಎಂದು ತೋರುತ್ತದೆ. ಇದನ್ನು ಸಹ ನಂತರ ವಿವರಿಸಲಾಗುವುದು. ಒಟ್ಟು 150 ಒಂಟೆಗಳು ಮತ್ತು 3,000 ಮೇಕೆಗಳು ಇದ್ದವು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–2, ಪುಟ–60, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಯುದ್ಧಕ್ಕಾಗಿ ಹಝ್ರತ್ ಮುಹಮ್ಮದ್ ಬಿನ್ ಮಸ್ಲಮಾ(ರ.ಅ) ಅವರು ಹತ್ತೊಂಬತ್ತು ರಾತ್ರಿಗಳು ಮದೀನದಿಂದ ಹೊರಗೆ ಇದ್ದರು. ಹಿಜರೀ 6, ಮುಹರ್ರಮ್ 29ರಂದು ಅವರು ಮದೀನಕ್ಕೆ ಮರಳಿ ಬಂದರು.

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–6, ಪುಟ–71, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್)

ಇದರ ವಿವರಣೆಯಲ್ಲಿ ಅನೇಕ ಗ್ರಂಥಗಳಿಂದ ಮತ್ತು ಚರಿತ್ರೆಗಳಿಂದ ಉಲ್ಲೇಖಿಸಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆದಿರುವರು: ಹಿಜರೀ 6ರ ಆರಂಭದಲ್ಲೇ ಎಂದರೆ, ಚಂದ್ರಮಾನ ವರ್ಷದ ಮೊದಲ ತಿಂಗಳು ಆದ ಮುಹರ್ರಮ್‌ನ ಆರಂಭದ ದಿನಾಂಕಗಳಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ನಜದ್ ನಿವಾಸಿಗಳಿಂದ ಅಪಾಯದ ಮಾಹಿತಿಗಳು ಲಭಿಸಿದುವು. ಈ ಅಪಾಯ ಖುರ್‌ತಾ ಗೋತ್ರದ ಕಡೆಯಿಂದ ಆಗಿತ್ತು. ಅದು ಬನೂ ಬಕರ್ ಗೋತ್ರದ ಶಾಖೆಯಾಗಿತ್ತು ಮತ್ತು ಅದು ನಜದಿನ ಪ್ರದೇಶದ ಝರಿಯ್ಯ ಎಂಬ ಸ್ಥಳದಲ್ಲಿ ನೆಲೆಸಿತು. ಅದು ಮದೀನದಿಂದ ಏಳು ದಿನಗಳ ಯಾತ್ರೆಯನ್ನು ಮಾಡುವಷ್ಟು ದೂರದಲ್ಲಿ ಇತ್ತು. ಈ ಸುದ್ದಿಯನ್ನು ಕೇಳಿದ ಕೂಡಲೇ, ಹಝ್ರತ್ ಪೈಗಂಬರ್(ಸ)ರು ಸಹಾಬರಲ್ಲಿ ಒಬ್ಬರಾದ ಮುಹಮ್ಮದ್ ಬಿನ್ ಮಸ್ಲಮಾ ಅನ್ಸಾರಿ(ರ) ಅವರ

ನೇತೃತ್ವದಲ್ಲಿ ಮೂವತ್ತು ಕುದುರೆ ಸವಾರರ ಚಿಕ್ಕ ದಳವನ್ನು ನಜದ್ ಕಡೆಗೆ ಕಳುಹಿಸಿದರು. ಆದರೆ, ಸರ್ವಶಕ್ತನಾದ ಅಲ್ಲಾಹನು ಸತ್ಯನಿಷೇಧಿಗಳ ಹೃದಯಗಳಲ್ಲಿ ಎಂತಹ ಭಯ ಸೃಷ್ಟಿಸಿದನು ಎಂದರೆ ಅವರು ಸ್ವಲ್ಪ ಪ್ರತಿರೋಧವನ್ನು ಸಹ ವಿರೋಧಿಸಲು ಸಾಧ್ಯವಾಗದೆ ಓಡಿಹೋದರು, ಮತ್ತು ಆ ಕಾಲದ ಯುದ್ಧ ವಿಧಾನಗಳ ಪ್ರಕಾರ, ಮುಸ್ಲಿಮರಿಗೆ ಶತ್ರುಗಳ ಮಹಿಳೆಯರು ಮತ್ತು ಮಕ್ಕಳನ್ನು ಸೆರೆಹಿಡಿಯಲು ಇದು ಒಂದು ಅವಕಾಶವಾಗಿತ್ತು ಏಕೆಂದರೆ ಶತ್ರುಗಳು ಅವರನ್ನು ಕೈಬಿಟ್ಟು ಓಡಿಹೋದರು, ಮುಹಮ್ಮದ್ ಬಿನ್ ಮಸ್ಲಾಮಾ(ರ) ಮಹಿಳೆಯರು ಮತ್ತು ಮಕ್ಕಳಿಗೆ ಯಾವುದೇ ಹಾನಿ ಮಾಡಲಿಲ್ಲ. ಅವರು ಒಂಟೆಗಳು ಮತ್ತು ಮೇಕೆಗಳನ್ನು ಒಳಗೊಂಡ ಸಾಮಾನ್ಯ ಯುದ್ಧ ಸಂಪತ್ತಿನೊಂದಿಗೆ ಮದೀನಕ್ಕೆ ಮರಳಿದರು."

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ.ಅ) ಎಂ.ಎ, ಪುಟಗಳು 662–663)

ಅದು ಶತ್ರು ಸಮುದಾಯವಾಗಿತ್ತು ಎಂದೂ ಮದೀನದ ಮೇಲೆ ದಾಳಿ ನಡೆಸಲು ಯೋಜನೆ ಮಾಡುತ್ತಿತ್ತು ಎಂದೂ ಅದನ್ನು ತಡೆಯಲು ಹಝ್ರತ್ ಪೈಗಂಬರ್(ಸ) ಸೇನೆಯನ್ನು ಕಳುಹಿಸಿದರು ಎಂದೂ ವಿವರಿಸಲಾಗಿದೆ. ಅಲ್ಲೂ ಮಹಿಳೆಯರಿಗೂ ಮತ್ತು ಮಕ್ಕಳಿಗೂ ಯಾವುದೇ ಹಾನಿ ಉಂಟುಮಾಡದೇ ಸೌಮ್ಯವಾಗಿ ವರ್ತಿಸಲಾಯಿತು.

ಈ ವೇಳೆ ಸುಮಾಮ ಬಿನ್ ಉಸಾಲ್‌ರನ್ನು ಬಂಧಿಸಲಾದ ಬಗ್ಗೆ ಮತ್ತು ಅವರು ಇಸ್ಲಾಂ ಸ್ವೀಕಾರ ಮಾಡಿದ ಬಗ್ಗೆ ಪ್ರಸ್ತಾಪವಿದೆ. ಇದರ ವಿವರಣೆಯಲ್ಲಿ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆಯಲಾಗಿದೆ. ಸರಿಯ ಖುರ್ತಾ ಯುದ್ಧದಿಂದ ಮರಳಿ ಬರುವಾಗ ಸುಮಾಮ ಬಿನ್ ಉಸಾಲ್‌ರನ್ನು ಬಂಧಿಸಲಾದ ಘಟನೆ ಉಂಟಾಯಿತು. ಒಮ್ಮೆ ಹಝ್ರತ್ ಪೈಗಂಬರ್(ಸ)ರ ಒಬ್ಬ ದೂತ ಆತನ ಪ್ರದೇಶಕ್ಕೆ ಹೋದಾಗ ಆತನು ಯುದ್ಧದ ಎಲ್ಲ ಕಾನೂನುಗಳನ್ನು ಕಡೆಗಣಿಸಿ ದೂತನನ್ನು ವಧಿಸಲು ಯೋಜನೆ ಹಾಕಿದನು. ಮಾತ್ರವಲ್ಲ ಆತನು ಒಮ್ಮೆ ಹಝ್ರತ್ ಪೈಗಂಬರ್(ಸ)ರನ್ನು ಕೂಡ ವಧಿಸಲು ತೀರ್ಮಾನಿಸಿದ್ದನು. ಮುಹಮ್ಮದ್ ಬಿನ್ ಮಸ್ಲಮ(ರ)ರ ಸಂಘ ಸುಮಾಮನನ್ನು ಬಂಧಿಸಿ ತಂದಾಗ ಸಂಘದವರಿಗೆ ಆತನು ಯಾರೆಂದು ಗೊತ್ತಿರಲಿಲ್ಲ. ಅವರು ಕೇವಲ ಸಂದೇಹದ ಕಾರಣದಿಂದ ಆತನನ್ನು ಬಂಧಿಸಿದ್ದರು. ಆತನು ಬಹಳ ಬುದ್ಧಿವಂತಿಕೆಯಿಂದ ತನ್ನನ್ನು ಯಾರೂ ಗುರುತಿಸದಂತೆ ನೋಡಿಕೊಂಡಿದ್ದನು ಎಂದು ತಿಳಿದುಬರುತ್ತದೆ. ಏಕೆಂದರೆ ತಾನು ಇಸ್ಲಾಮಿನ ವಿರುದ್ಧ ಅಪಾಯಕಾರಿ ಅಪರಾಧಗಳನ್ನು ಮಾಡಿರುವೆನು ಎಂದೂ ತಾನು ಯಾರೆಂದು ಇಸ್ಲಾಮಿನ ಈ ಅಭಿಮಾನಿ ಸೈನಿಕರಿಗೆ ಗೊತ್ತಾದರೆ ಬಹುಶಃ ಅವರು ತನ್ನೊಂದಿಗೆ ಕಠಿಣವಾಗಿ ವರ್ತಿಸುವರು ಅಥವಾ ವಧಿಸುವರು ಎಂದೂ ಆತನಿಗೆ ಗೊತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಆತನೊಂದಿಗೆ ಉತ್ತಮವಾಗಿ ವರ್ತಿಸುವರು ಎಂದು ಆತನಿಗೆ ಪ್ರತೀಕ್ಷೆಯಿತ್ತು. ಹೀಗೆ ಮದೀನಕ್ಕೆ ಮರಳುವ ತನಕ ಮುಹಮ್ಮದ್ ಬಿನ್ ಮಸ್ಲಮ(ರ)ರ ಸಂಘಕ್ಕೆ ಆತನು ಯಾರೆಂದು ಗೊತ್ತಿರಲಿಲ್ಲ.

ಮದೀನಕ್ಕೆ ತಲುಪಿ ಸುಮಾಮನನ್ನು ಹಝ್ರತ್ ಪೈಗಂಬರ್(ಸ)ರ ಮುಂದೆ ತರಲಾದಾಗ ಹಝ್ರತ್ ಪೈಗಂಬರ್(ಸ) ಆತನನ್ನು ನೋಡಿದೊಡನೆ ಗುರುತಿಸಿದರು. 'ಇದು ಯಾರೆಂದು ಗೊತ್ತೇ? ಎಂದು ಮುಹಮ್ಮದ್ ಬಿನ್ ಮಸ್ಲಮ(ರ) ಮತ್ತು ಅವರ ಸಂಘದವರೊಡನೆ ಹಝ್ರತ್ ಪೈಗಂಬರ್(ಸ) ಕೇಳಿದರು. ಅವರು ಗೊತ್ತಿಲ್ಲವೆಂದು ಹೇಳಿದಾಗ ಆತನು ಯಾರೆಂದು ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಿಕೊಟ್ಟರು. ಅನಂತರ ಹಝ್ರತ್ ಪೈಗಂಬರ್(ಸ) ತನ್ನ ಅಭ್ಯಾಸದಂತೆ ಸುಮಾಮನೊಂದಿಗೆ ಉತ್ತಮವಾಗಿ ವರ್ತಿಸಲು ಆದೇಶ ನೀಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಮನೆಯೊಳಗೆ ಹೋಗಿ ಹೀಗೆ ಹೇಳಿದರು: ಊಟಕ್ಕಾಗಿ ತಯಾರಾಗಿ ಇರುವುದನ್ನು ಸುಮಾಮನಿಗಾಗಿ ಕಳುಹಿಸಿರಿ. ಅನಂತರ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೀಗೆಯೂ ನಿರ್ದೇಶಿಸಿದರು: 'ಸುಮಾಮರನ್ನು ಯಾವುದಾದರೂ ಮನೆಯಲ್ಲಿ ಇರಿಸುವುದಕ್ಕೆ ಬದಲಿಗೆ ಮಸ್ಜಿದ್ ನಬವಿಯ ಅಂಗಣದಲ್ಲಿಯೇ ಯಾವುದಾದರೂ ಕಂಬದೊಂದಿಗೆ ಕಟ್ಟಿ ಬಂಧನದಲ್ಲಿ ಇರಿಸಿರಿ.' ಹಝ್ರತ್ ಪೈಗಂಬರ್(ಸ)ರ ಸಭೆಗಳು ಮತ್ತು ಮುಸ್ಲಿಮರ ನಮಾಝ್‌ಗಳು ಸುಮಾಮನು ಕಾಣುವಂತಾಗಲಿ ಮತ್ತು ಆತನ ಹೃದಯ ಈ ಆಧ್ಯಾತ್ಮಿಕ ದೃಶ್ಯಗಳಿಂದ ಪ್ರಭಾವಿತಗೊಂಡು ಇಸ್ಲಾಮಿನ ಕಡೆಗೆ ವಾಲುವಂತಾಗಲಿ ಎಂಬ ಉದ್ದೇಶದಿಂದ ಹಝ್ರತ್ ಪೈಗಂಬರ್(ಸ) ಹೀಗೆ ನಿರ್ದೇಶಿಸಿದ್ದರು."

ಹಾಗಾಗಿ ಅವರನ್ನು ಹಾಗೆಯೇ ಕಟ್ಟಿಹಾಕಲಾಯಿತು. ಅವರು ಪ್ರಭಾವಿತನಾಗದ ಮತ್ತು ಕೋಪಗೊಳ್ಳದ ರೀತಿಯಲ್ಲಿ ಅವರನ್ನು ಕಟ್ಟಿಹಾಕಲಾಗುತ್ತಿತ್ತು ಎಂದಲ್ಲ, ಬದಲಾಗಿ ಅವರನ್ನು ಒಬ್ಬ ಖೈದಿಯು ತನ್ನ ತೋಳುಗಳನ್ನು ಚಲಿಸುವಂತೆ ಮತ್ತು ಕಾಲುಗಳನ್ನು ಮೃದುವಾಗಿ ಮತ್ತು ಆರಾಮದಾಯಕವಾಗಿ ಕಟ್ಟಿಹಾಕಲಾಗುತ್ತಿತ್ತು.

ಆ ದಿನಗಳಲ್ಲಿ ಹಝ್ರತ್ ಪೈಗಂಬರ್(ಸ) ಪ್ರತಿದಿನ ಬೆಳಿಗ್ಗೆ ಸುಮಾಮನ ಸಮೀಪಕ್ಕೆ ಹೋಗಿ ಆತನ ಕ್ಷೇಮವನ್ನು ವಿಚಾರಿಸಿದ ನಂತರ ಹೀಗೆ ಕೇಳುತ್ತಿದ್ದರು: 'ಸುಮಾಮ, ಈಗ ನಿನ್ನ ಉದ್ದೇಶವೇನು ಎಂದು ಹೇಳು.' ಆಗ ಸುಮಾಮ ಹೀಗೆ ಉತ್ತರಿಸುತ್ತಿದ್ದನು: 'ಹೇ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ), ನೀವು ನನ್ನನ್ನು ವಧಿಸುವುದಾದರೆ ನಿಮಗೆ ಅದರ ಅಧಿಕಾರವಿದೆ. ಏಕೆಂದರೆ ನನ್ನ ವಿರುದ್ಧ ಕೊಲೆ ಆರೋಪವಿದೆ. ಆದರೆ ನೀವು ಔದಾರ್ಯ ತೋರಿಸುವುದಾದರೆ ನೀವು ನನ್ನನ್ನು ಕೃತಜ್ಞತೆಯುಳ್ಳವನಾಗಿ ಕಾಣುವಿರಿ. ನೀವು ನನ್ನಿಂದ ಪರಿಹಾರ ಧನವನ್ನು ಪಡೆಯಲು ಬಯಸುವುದಾದರೆ ನಾನು ಪರಿಹಾರ ಧನವನ್ನು ನೀಡಲು ಕೂಡ ತಯಾರಿದ್ದೇನೆ.' ಮೂರು ದಿನಗಳ ತನಕ ಇದೇ ಪ್ರಶ್ನೋತ್ತರ ನಡೆಯುತ್ತಿತ್ತು. ಕೊನೆಗೆ ಮೂರನೇ ದಿನ ಸುಮಾಮನ ಕಟ್ಟು ಬಿಚ್ಚಿ ಸ್ವತಂತ್ರಗೊಳಿಸಲು ಹಝ್ರತ್ ಪೈಗಂಬರ್(ಸ) ಸ್ವತಃ ಸಹಾಬಿಯರೊಡನೆ ಹೇಳಿದರು. ಸಹಾಬಿಯರು ಬೇಗನೇ ಆತನನ್ನು ಸ್ವತಂತ್ರಗೊಳಿಸಿದರು ಮತ್ತು ಸುಮಾಮ ಬೇಗ ಬೇಗನೆ ಮಸೀದಿಯಿಂದ ಹೊರಟು ಹೊರಗೆ ಹೋದನು. ಈಗ ಆತನು ಸ್ವದೇಶಕ್ಕೆ ಮರಳಿ ಹೋಗುವನು ಎಂದು ಬಹುಶಃ ಸಹಾಬಿಯರು ಭಾವಿಸಿರಬಹುದು. ಆದರೆ ಸುಮಾನನ ಹೃದಯವನ್ನು ಗೆಲ್ಲಲಾಗಿದೆ ಮತ್ತು ಈಗ ಆತನ ಮೇಲೆ ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಶಕ್ತಿಯ ಪ್ರಭಾವ ಉಂಟಾಗಿದೆ ಎಂದು ಹಝ್ರತ್ ಪೈಗಂಬರ್(ಸ) ತಿಳಿದಿದ್ದರು. ಫಲಿತಾಂಶ ಇದೇ ಆಗಿತ್ತು. ಆತನು ಸಮೀಪದ ಒಂದು ತೋಟಕ್ಕೆ ಹೋಗಿ ಅಲ್ಲಿಂದ ಸ್ನಾನ ಮಾಡಿ ಮರಳಿ ಬಂದನು. ಬಂದ ಕೂಡಲೇ ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಬೈಅತ್ ಮಾಡಿಕೊಂಡನು. ಅನಂತರ ಆತನು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದನು:

ಯಾ ರಸೂಲಲ್ಲಾಹ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ), ಒಂದು ಕಾಲವಿತ್ತು. ಆಗ ನನಗೆ ಪೂರ್ತಿ ಲೋಕದಲ್ಲಿ ನಿಮ್ಮೊಂದಿಗೆ, ನಿಮ್ಮ ದೀನಿನೊಂದಿಗೆ, ನಿಮ್ಮ ಪಟ್ಟಣದೊಂದಿಗೆ ಅತ್ಯಂತ ಹೆಚ್ಚಿನ ಹಗೆಯಿತ್ತು. ಆದರೆ ಈಗ ನನಗೆ ನೀವು, ನಿಮ್ಮ ದೀನ್ ಮತ್ತು ನಿಮ್ಮ ಪಟ್ಟಣ ಅತ್ಯಂತ ಹೆಚ್ಚು ಪ್ರಿಯವಾಗಿ ಬಿಟ್ಟಿದೆ.

ಆ ಸಂಜೆ, ವಾಡಿಕೆಯಂತೆ ಸುಮಾಮಾಗೆ ಆಹಾರ ಬಂದಾಗ, ಅವರು ಸ್ವಲ್ಪ ತಿಂದು ಹೊರಟುಹೋದರು. ಸುಮಾಮ ಅವರು ಬೆಳಗಿನವರೆಗೂ ತುಂಬಾ ಊಟ ಮಾಡುತ್ತಿದ್ದರು ಆದರೆ ಈಗ ಬಹಳ ಕಡಿಮೆ ತಿಂದಿದ್ದಾರೆ ಎಂದು ಸಹಾಬಗಳು ಆಶ್ಚರ್ಯಚಕಿತರಾದರು." ಅವನನ್ನು ಬಂಧಿಸಿ ಕಟ್ಟಿಹಾಕಿರುವುದು ಅವನಿಗೆ ತಿನ್ನಲು ಮತ್ತು ಕುಡಿಯಲು ಸಾಧ್ಯವಾಗುವ ರೀತಿಯಲ್ಲಿ ಬಂಧಿಸಲಾಗಿತ್ತು ಮತ್ತು ಅವನನ್ನು ಹಾಗೆ ಕಟ್ಟಿಹಾಕಲಾಗಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ. ಅವನು ತಿನ್ನಬಹುದಿತ್ತು ಮತ್ತು ಅವನ ಆಹಾರವು ಚೆನ್ನಾಗಿ ನಿಯಂತ್ರಿಸಲ್ಪಟ್ಟಿತ್ತು. ಹೇಗೂ, ಅವನು ಸ್ವಲ್ಪ ತಿನ್ನುತ್ತಿದ್ದನು ಮತ್ತು ಮೊದಲು ಬಹಳಷ್ಟು ತಿನ್ನುತ್ತಿದ್ದನು, ಮತ್ತು ಅವನು ಹೊಟ್ಟೆಬಾಕನಂತೆ ಕಾಣುತ್ತಿದ್ದನು, ಆದರೆ ಈಗ ಅವನು ತುಂಬಾ ಕಡಿಮೆ ತಿಂದಿದ್ದಾನೆ. "ಈ ವಿಷಯವು ಹಝ್ರತ್ ಪೈಗಂಬರ್(ಸ) ರವರಿಗೆ ತಲುಪಿದಾಗ ಅವರು ಹೇಳಿದರು: "ಬೆಳಗಿನವರೆಗೂ, ಸುಮಾಮ ಅವಿಶ್ವಾಸಿಯಂತೆ ತಿನ್ನುತ್ತಿದ್ದನು, ಮತ್ತು ಈಗ ಅವನು ಮುಸ್ಲಿಮರಂತೆ ತಿನ್ನುತ್ತಿದ್ದಾನೆ." ಮತ್ತು ಹಝ್ರತ್ ಪೈಗಂಬರ್(ಸ) ಇದನ್ನು ಈ ಕೆಳಗಿನಂತೆ ವಿವರಿಸಿದರು: "ಒಬ್ಬ ಅವಿಶ್ವಾಸಿ ಏಳು ಕರುಳಿನಲ್ಲಿ ಆಹಾರವನ್ನು ತಿನ್ನುತ್ತಾನೆ, ಆದರೆ ಒಬ್ಬ ಸತ್ಯವಿಶ್ವಾಸಿಯು (ಮುಸ್ಲಿಂ) ಒಂದೇ ಕರುಳಿನಲ್ಲಿ ಆಹಾರವನ್ನು ತಿನ್ನುತ್ತಾನೆ." ಇದರಿಂದ ಅವರು ಅರ್ಥೈಸಿದ್ದು ಏನೆಂದರೆ, ಅವಿಶ್ವಾಸಿಯು ಲೌಕಿಕ ಸುಖಗಳಲ್ಲಿ ಮುಳುಗಿದಂತೆ ತೋರುತ್ತಾನೆ, ಆದರೆ ನಿಜವಾದ ಸತ್ಯವಿಶ್ವಾಸಿಯು (ಮುಸ್ಲಿಂ) ತನ್ನ ದೈಹಿಕ ಅಗತ್ಯಗಳನ್ನು ಜೀವನ ನಿರ್ವಹಣೆಗೆ ಅಗತ್ಯವಾದದ್ದಕ್ಕೆ ಮಾತ್ರ ಸೀಮಿತಗೊಳಿಸುತ್ತಾನೆ. ಏಕೆಂದರೆ ಅವನು ನಿಜವಾದ ಆನಂದವನ್ನು ಧರ್ಮದಲ್ಲಿ ಮಾತ್ರ ಕಂಡುಕೊಳ್ಳುತ್ತಾನೆ." ಇಲ್ಲಿ ಏಳು ಸಂಖ್ಯೆಯು ಅಂಕಗಣಿತದ ಸಂಖ್ಯೆಯನ್ನು ಉಲ್ಲೇಖಿಸುವುದಿಲ್ಲ ಎಂಬುದನ್ನು ಸಹ ಗಮನಿಸಬೇಕು, ಬದಲಿಗೆ, ಅರೇಬಿಕ್ ಭಾಷಾವೈಶಿಷ್ಟ್ಯಗಳ ಪ್ರಕಾರ, ಏಳು ಸಂಖ್ಯೆಯನ್ನು ಸಮೃದ್ಧಿ ಮತ್ತು ಪೂರ್ಣತೆಯನ್ನು ವ್ಯಕ್ತಪಡಿಸಲು ಸಹ ಬಳಸಲಾಗುತ್ತದೆ. ಅವಿಶ್ವಾಸಿಯು ಲೌಕಿಕ ಸುಖಗಳಲ್ಲಿ ಮುಳುಗಿರುತ್ತಾನೆ ಮತ್ತು ಅವನ ಸಂಪೂರ್ಣ ಗಮನವು ಪ್ರಪಂಚದ ಮೇಲೆ ಕೇಂದ್ರೀಕೃತವಾಗಿರುತ್ತದೆ ಎಂಬುದು ಇದರ ಅರ್ಥ ಎಂದು ತೋರುತ್ತದೆ, ಆದರೆ ಒಬ್ಬ ಸತ್ಯವಿಶ್ವಾಸಿಯು ಲೌಕಿಕ ಸುಖಗಳಿಂದ ತನ್ನನ್ನು ತಾನು ನಿರ್ಬಂಧಿಸಿಕೊಳ್ಳುತ್ತಾನೆ ಮತ್ತು ನಿಜವಾದ ಅವಶ್ಯಕತೆಯ ಮಿತಿಗಳನ್ನು ಮೀರಿ ಹೋಗುವುದಿಲ್ಲ ಏಕೆಂದರೆ ಅವನ ನಿಜವಾದ ಸುಖಗಳು ಕ್ಷೇತ್ರ

ವಿಭಿನ್ನವಾಗಿದೆ. ಈ ಬೋಧನೆಯು ಹಝ್ರತ್ ಪೈಗಂಬರ್(ಸ) ರವರ ನೈಸರ್ಗಿಕ ಪ್ರವೃತ್ತಿಗಳು ಮತ್ತು ಅವರ ವೈಯಕ್ತಿಕ ವ್ಯಕ್ತಿತ್ವದ ನಿಜವಾದ ಪ್ರತಿಬಿಂಬವಾಗಿದೆ.

ಮುಸ್ಲಿಮನಾದ ನಂತರ ಸುಮಾಮ ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದನು: ಯಾ ರಸೂಲಲ್ಲಾಹ್, ನಿಮ್ಮ ಜನರು ನನ್ನನ್ನು ಬಂಧಿಸಿದ ವೇಳೆ ನಾನು ಕಅ್‌ಬ ಭವನಕ್ಕೆ ಉಮ್ರ ಮಾಡಲಿಕ್ಕಾಗಿ ಹೋಗುತ್ತಿದ್ದೆ. ಈಗ ನನಗೆ ನಿಮ್ಮ ಆದೇಶವೇನು? ಹಝ್ರತ್ ಪೈಗಂಬರ್(ಸ) ಉಮ್ರ ಮಾಡಲು ಅನುಮತಿ ಕೊಟ್ಟರು ಮತ್ತು ಆತನಿಗಾಗಿ ದುಆ ಮಾಡಿದರು. ಅನಂತರ ಸುಮಾಮ ಮಕ್ಕದ ಕಡೆಗೆ ಹೊರಟರು. ಅಲ್ಲಿಗೆ ತಲುಪಿ ಸುಮಾಮ ವಿಶ್ವಾಸದ ಆವೇಶದಲ್ಲಿ ಖುರೈಶಿಯರಿಗೆ ಬಹಿರಂಗವಾಗಿಯೇ ತಬ್ಲೀಗ್ ಮಾಡಲು ಆರಂಭಿಸಿದನು. ಖುರೈಶಿಯರು ಈ ದೃಶ್ಯವನ್ನು ನೋಡಿದಾಗ ಅವರಿಗೆ ತುಂಬಾ ಕೋಪಬಂತು ಮತ್ತು ಅವರು ಸುಮಾಮನನ್ನು ಹಿಡಿದು ವಧಿಸಲು ನಿರ್ಧರಿಸಿದರು. ಆದರೆ ಆತನು ಯಮಾಮದ ಸರದಾರ ಆಗಿರುವನು ಮತ್ತು ಯಮಾಮದೊಂದಿಗೆ ಮಕ್ಕಕ್ಕೆ ಗಾಢವಾದ ವ್ಯಾಪಾರ ಸಂಬಂಧಗಳು ಇತ್ತು ಎಂಬ ಕಾರಣದಿಂದ ಈ ನಿರ್ಧಾರದಿಂದ ಹಿಂದೆ ಸರಿದರು ಮತ್ತು ಆತನನ್ನು ಬೈದು ಬಿಟ್ಟರು. ಆದರೆ ಸುಮಾಮನಿಗೆ ತುಂಬಾ ಆವೇಶವಿತ್ತು ಮತ್ತು ಖುರೈಶಿಯರು ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರೊಡನೆ ಮಾಡುತ್ತಿದ್ದ ದೌರ್ಜನ್ಯಗಳೆಲ್ಲವೂ ಸುಮಾಮನ ಕಣ್ಣುಗಳ ಮುಂದೆ ಇದ್ದುವು. ಆತನು ಮಕ್ಕಾದಿಂದ ಹೊರಡುವಾಗ ಖುರೈಶಿಯರೊಡನೆ ಹೀಗೆ ಹೇಳಿದರು:

"ಅಲ್ಲಾಹನಾಣೆ, ಇನ್ನು ಮುಂದೆ ಹಝ್ರತ್ ಪೈಗಂಬರ್(ಸ) ಅನುಮತಿ ಕೊಡುವ ತನಕ ನಿಮಗೆ ಯಮಾಮದಿಂದ ಧಾನ್ಯದ ಒಂದು ಕಾಳು ಕೂಡ ಬರದು."

ತನ್ನ ದೇಶಕ್ಕೆ ತಲುಪಿದ ನಂತರ ಸುಮಾಮ ಮಕ್ಕಾದ ಕಡೆಗೆ ಹೋಗುವ ಯಾತ್ರಾ ಸಂಘಗಳನ್ನು ತಡೆದನು. ಮಕ್ಕಾದ ಆಹಾರದ ಹಿರಿಯ ಪಾಲು ಯಮಾಮದ ಕಡೆಯಿಂದ ಬರುತ್ತಿತ್ತು. ಆದ್ದರಿಂದ ಈ ವ್ಯಾಪಾರ ನಿಂತು ಹೋದಾಗ ಮಕ್ಕದ ಖುರೈಶಿಯರು ಕಠಿಣವಾದ ವಿಪತ್ತಿಗೆ ತುತ್ತಾದರು. ದೀರ್ಘ ಕಾಲವಾಗುವುದಕ್ಕೆ ಮುಂಚೆಯೇ ಅವರು ಗಾಬರಿಗೊಂಡು ಹಝ್ರತ್ ಪೈಗಂಬರ್(ಸ)ರಿಗೆ ಹೀಗೆ ಪತ್ರ ಬರೆದರು: ನೀವು ಸದಾ ಸಂಬಂಧಿಕರೊಡನೆ ಕರುಣೆದೋರಲು ಆದೇಶ ನೀಡುತ್ತೀರಿ. ನಾವು ನಿಮ್ಮ ಸಹೋದರರು ಮತ್ತು ಸಂಬಂಧಿಕರು ಆಗಿರುವೆವು. ನಮ್ಮನ್ನು ಈ ವಿಪತ್ತಿನಿಂದ ಪಾರು ಮಾಡಿರಿ. ಆ ವೇಳೆ ಮಕ್ಕಾದ ಖುರೈಶಿಯರು ಎಷ್ಟು ಗಾಬರಿಗೊಂಡಿದ್ದರು ಎಂದರೆ, ಅವರು ಈ ಪತ್ರವನ್ನು ಮಾತ್ರ ಸಾಕೆಂದು ಭಾವಿಸದೇ ತಮ್ಮ ಸರದಾರ ಅಬೂಸುಫ್‌ಯಾನ್ ಬಿನ್ ಹರಬನ್ನು ಕೂಡ ಹಝ್ರತ್ ಪೈಗಂಬರ್(ಸ)ರ ಬಳಿಗೆ ಕಳುಹಿಸಿದರು. ಆತನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಹೋಗಿ ಬಹಳಷ್ಟು ರೋದಿಸಿದರು ಮತ್ತು ತಮ್ಮ ಕಷ್ಟಗಳನ್ನು ವಿವರಿಸಿ ದಯೆದೋರಲು ಅಂಗಲಾಚಿದನು. ಆಗ ಮಕ್ಕಾ ನಿವಾಸಿಗಳ ಆಹಾರ ಸಾಮಾನುಗಳಿರುವ ವ್ಯಾಪಾರ ತಂಡಗಳನ್ನು ತಡೆಯದಿರಲು ಹಝ್ರತ್ ಪೈಗಂಬರ್(ಸ) ಸುಮಾಮ ಬಿನ್ ಉಸಾಲ್‌ನಿಗೆ ನಿರ್ದೇಶನವನ್ನು ಕಳುಹಿಸಿದರು. ಹೀಗೆ ಈ ವ್ಯಾಪಾರ ಪುನಃ ಜಾರಿಯಾಯಿತು ಮತ್ತು ಮಕ್ಕಾ ನಿವಾಸಿಗಳಿಗೆ ಈ ವಿಪತ್ತಿನಿಂದ ಮುಕ್ತಿ ಲಭಿಸಿತು. ಈ ಘಟನೆಯು ಹಝ್ರತ್ ಪೈಗಂಬರ್(ಸ) ರವರ ಅಪ್ರತಿಮ ಕರುಣೆ ಮತ್ತು ಕ್ಷಮೆಗೆ ಸ್ಪಷ್ಟ ಪುರಾವೆಯಾಗಿದ್ದರೂ, ಹಝ್ರತ್ ಪೈಗಂಬರ್(ಸ) ಅವರು ಖುರೈಷಿಗಳ ವ್ಯಾಪಾರ ತಂಡಗಳನ್ನು ನಿಲ್ಲಿಸುವ ಪ್ರಕ್ರಿಯೆಯನ್ನು ಆರಂಭದಲ್ಲಿ ಪ್ರಾರಂಭಿಸಿದ್ದರು ಎಂಬುದನ್ನು ಸಹ ಇದು ಸಾಬೀತುಪಡಿಸುತ್ತದೆ. ನಿಜವಾದ ಉದ್ದೇಶ ಕ್ಷಾಮವನ್ನು ಉಂಟುಮಾಡುವ ಮೂಲಕ ಖುರೈಷಿಗಳನ್ನು ನಾಶಮಾಡುವುದು ಅಲ್ಲ, ಬದಲಾಗಿ, ಮದೀನಾ ಸುತ್ತಮುತ್ತಲಿನ ಪ್ರದೇಶವನ್ನು ಖುರೈಷಿಗಳ ಬೆದರಿಕೆಯಿಂದ ರಕ್ಷಿಸುವುದು ಅದರ ನಿಜವಾದ ಉದ್ದೇಶವಾಗಿತ್ತು. ಈ ಘಟನೆಯು ಇಸ್ಲಾಮಿನ ಬೋಧನೆಗಳ ಪ್ರಕಾರ, ಮಿಲಿಟರಿ ಶತ್ರು ತನ್ನ ದೈನಂದಿನ ಬ್ರೆಡ್ ಅನ್ನು ಸಹ ಕಳೆದುಕೊಳ್ಳುವ ಮಟ್ಟಿಗೆ ತನ್ನ ಸಂವಹನ ಮತ್ತು ಸಂದೇಶಗಳನ್ನು ಕಡಿತಗೊಳಿಸುವುದು ಅಪೇಕ್ಷಣೀಯವಲ್ಲ ಎಂದು ಸಾಬೀತುಪಡಿಸುತ್ತದೆ. ರೊಟ್ಟಿ ನೀರು ಸಿಗಬಾರದು. ಆಹಾರದಿಂದ ವಂಚಿತರಾಗಬೇಕು. "ಹೌದು, ಯುದ್ಧ ಸಾಮಗ್ರಿಗಳ ಸಾಗಣೆ ಅಥವಾ ಅಗತ್ಯ ಆಹಾರ ಮತ್ತು ಪಾನೀಯಗಳನ್ನು ಹೊರತುಪಡಿಸಿ ಇತರ ಸರಕುಗಳ ರಫ್ತು ಮತ್ತು ಆಮದನ್ನು ಯುದ್ಧದ ಅವಶ್ಯಕತೆಗಳ ಅಡಿಯಲ್ಲಿ ನಿಲ್ಲಿಸಬಹುದು."

ಆದರೆ ಇಂದಿನ ಜಗತ್ತು ಒಂದು ವಿಚಿತ್ರ ದೃಶ್ಯವನ್ನು ಸೃಷ್ಟಿಸಿದೆ, ಅದರಲ್ಲಿ ಯುದ್ಧದ ಸಮಯದಲ್ಲಿ ಅವರು ಬಡವರಿಗೆ ಮತ್ತು ವಂಚಿತರಿಗೆ ಆಹಾರವನ್ನು ತಲುಪಲು ಸಹ ಬಿಡುವುದಿಲ್ಲ, ಮತ್ತು ನಂತರ ಅವರು ಭಯೋತ್ಪಾದಕರು ಅಥವಾ ಇಂತಿಂಥವರು ಇದ್ದಾರೆ ಎಂದು ನೆಪಗಳನ್ನು ನೀಡುತ್ತಾರೆ. ಆದರೆ, ಇದು ಲೌಕಿಕ ವ್ಯಕ್ತಿಗಳ ಕೆಲಸವಾಗಿದೆ, ಆದರೆ ಇದು ಇಸ್ಲಾಂ ಧರ್ಮದ ಬೋಧನೆಯಲ್ಲ. "ಮತ್ತು ಶತ್ರುಗಳು ಮುಸ್ಲಿಮರಿಗೆ ಆಹಾರ ಸಿಗದಂತೆ ತಡೆದರೆ ಎಂಬ ಪರಿಸ್ಥಿತಿವುಂಟಾದರೆ, ಪವಿತ್ರ ಖುರ್‌ಆನ್‌ನ ಮೂಲ ಬೋಧನೆ ಹೀಗಿದೆ: **ಜಝಾಉ ಸೈಯಿಅತಿನ್ ಸೈಯಿಅತುಮ್ಮಿಸ್‌ಲುಹಾ–** ಈ ಆಜ್ಞೆಯು ಅಡಿಯಲ್ಲಿ ಈ ಘಟನೆಗಳ ಸರಪಣಿಯನ್ನು ನಿಲ್ಲಿಸಲು ಅನುಮತಿ ಇದೆ.

"ಮೇಲೆ ಹೇಳಿದಂತೆ, ಸುಮಾಮಾ ಬಿನ್ ಉಸಾಲ್ ತಮ್ಮ ಪ್ರದೇಶದ ಪ್ರಭಾವಿ ಮುಖ್ಯಸ್ಥರಾಗಿದ್ದರು. ಅವರ ಉತ್ಸಾಹಭರಿತ ಧರ್ಮೋಪದೇಶದ ಮೂಲಕ, ಯಮಾಮಾದ ಅನೇಕ ಜನರು ಇಸ್ಲಾಂಗೆ ಮತಾಂತರಗೊಂಡರು. ನಂತರ, ಹಝ್ರತ್ ಪೈಗಂಬರ್(ಸ) ರವರ ಮರಣದ ಸಮಯದಲ್ಲಿ ಮತ್ತು ಹಝ್ರತ್ ಅಬೂಬಕರ್(ರ) ರವರ ಖಲೀಫತ್ ಪ್ರಾರಂಭದ ಸಮಯದಲ್ಲಿ, ಸುಳ್ಳು ಪ್ರವಾದಿತ್ವದ ದಾವೆದಾರನಾದ ಮುಸೈಲಮಾ ಕಝ್ಝಾಬ್ ಯಮಾಮಾದ ಅನೇಕ ಗೋತ್ರದ ಜನರನ್ನು ಇಸ್ಲಾಂ ಧರ್ಮವನ್ನು ತ್ಯಜಿಸುವಂತೆ ಮಾಡಿದನು, ಆದರೆ ಸ್ವತಃ ಸುಮಾಮಾ ಬಹಳ ದೃಢತೆಯಿಂದ ಇಸ್ಲಾಂನಲ್ಲಿ ಸ್ಥಿರವಾಗಿ ಉಳಿದರು, ಅದಲ್ಲದೆ ತಮ್ಮ ಧೈರ್ಯಶಾಲಿ ಹೋರಾಟದ ಮೂಲಕ, ಅವರು ಅನೇಕ ಜನರನ್ನು ಮುಸೈಲಿಮಾದ ದುಷ್ಟತನದಿಂದ ರಕ್ಷಿಸಿದರು, ಅವರನ್ನು ಇಸ್ಲಾಂನ ಧ್ವಜದ ಅಡಿಯಲ್ಲಿ ಒಂದುಗೂಡಿಸಿದರು ಮತ್ತು ಅತ್ಯುತ್ತಮ ಸೇವೆಗಳನ್ನು ಸಲ್ಲಿಸಿದರು.

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟಗಳು 663 ರಿಂದ 666)

ಇದು ಈ ಯುದ್ಧದ ಸಂಪೂರ್ಣ ಉಲ್ಲೇಖವಾಗಿದೆ. ನಾನು ಇವತ್ತು ಕೆಲವು ಜನಾಝಗಳನ್ನು ನಿರ್ವಹಿಸುವೆನು.

ಒಂದು ಹಾಝಿರ್ ಜನಾಝ ಇದೆ. [ಈ ಹಂತದಲ್ಲಿ, ಹುಝೂರ್(ಅತಬಿಅ) ಅವರು ಜನಾಝ ಬಂದಿದೆಯೇ ಎಂದು ವಿಚಾರಿಸಿದರು. ತದನಂತರ, ಸಕಾರಾತ್ಮಕ ಉತ್ತರವನ್ನು ಪಡೆದ ನಂತರ, ಅವರು ಹೇಳಿದರು:]

ಮಿಡ್ಲ್‌ಸೆಕ್ಸ್‌ನ ಪ್ರಾದೇಶಿಕ ಅಮೀರ್ ಆಗಿದ್ದ ದಿವಂಗತ ಅಬ್ದುಲ್ ಲತೀಫ್ ಖಾನ್ ಸಾಹಿಬ್ ಅವರ ಜನಾಝವಾಗಿದೆ. ಅವರು ಡಿಸೆಂಬರ್ 11 ರಂದು ಎಂಬತ್ತೈದನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿಯಾದ ಹಝ್ರತ್ ಮುಹಮ್ಮದ್ ಝುಹೂರ್ ಖಾನ್ ಸಾಹಿಬ್ ಪಟಿಯಾಲ್ವಿ(ರ) ರವರ ಪುತ್ರರಾಗಿದ್ದರು ಮತ್ತು ಹಝ್ರತ್ ಮುಸ್ಲೆಹ್ ಮೌಊದ್(ರ) ರವರ ವೈದ್ಯರಾಗಿದ್ದ ಹಝ್ರತ್ ಡಾ. ಹಶ್ಮತುಲ್ಲಾ ಖಾನ್ ಸಾಹಿಬ್(ರ) ರವರ ಸೋದರಳಿಯರಾಗಿದ್ದರು. ಡಾ. ಹಶ್ಮತುಲ್ಲಾ ಖಾನ್ ಸಾಹಿಬ್ ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ರವರ ವೈದ್ಯರಾಗಿದ್ದರು. ಅಬ್ದುಲ್ ಲತೀಫ್ ಖಾನ್ ಸಾಹಿಬ್ ಅವರು ಯುಕೆ ಜಮಾಅತ್‌ನ ಆರಂಭಿಕ ಸದಸ್ಯರಲ್ಲಿ ಒಬ್ಬರಾಗಿದ್ದರು. ಐವತ್ತೈದು ವರ್ಷಗಳ ಕಾಲ, ಅವರು ಸ್ಥಳೀಯ ಮತ್ತು ಕೇಂದ್ರ ಮಟ್ಟಗಳಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಹೌನ್ಸ್ಲೋ ಜಮಾಅತ್‌ನ ಮೊದಲ ಅಧ್ಯಕ್ಷರಾಗಿದ್ದರು. ಇದಲ್ಲದೆ, ಅವರು ಸೆಕ್ರೇಟರಿ ವಸಾಯಾ, ಸೆಕ್ರೇಟರಿ ತಬ್ಲೀಗ್, ಸೆಕ್ರೇಟರಿ ರಿಶ್ತಾನಾತಾ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರಾದೇಶಿಕ ಅಮೀರ್ ಆಗಿ ಸೇವೆ ಸಲ್ಲಿಸಿದರು.

ದಿವಂಗತರು ನಮಾಝ್ ಮತ್ತು ಉಪವಾಸ ನಿರ್ವಹಣೆಗೆ ಬದ್ಧರಾಗಿದ್ದರು. ಅವರು ಉತ್ತಮ ನೈತಿಕತೆ ಹೊಂದಿದ್ದರು. ಅವರು ಕರುಣಾಳು, ಸಮಾಜಮುಖಿ, ವಾಗ್ಮಿ, ಕಠಿಣ ಪರಿಶ್ರಮಿ, ವಿಧೇಯ, ಒಳ್ಳೆಯ ಸ್ವಭಾವದ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಖಿಲಾಫತ್‌ನೊಂದಿಗೆ ಬಹಳ ಆಳವಾದ ಮತ್ತು ದೃಢವಾದ ಸಂಪರ್ಕವೂ ಇತ್ತು, ಅದು ಭಕ್ತಿಯ ಸಂಬಂಧವಾಗಿತ್ತು. ಜಮಾಅತ್‌ನ ಸೇವೆಗೆ ಯಾವಾಗಲೂ ಸಿದ್ಧವಾಗಿರುತ್ತಿದ್ದರು. ತಮ್ಮ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿರುವ ಎಲ್ಲಾ ಮಸೀದಿಗಳಿಗೆ ಚಂದ ಸಂಗ್ರಹಿಸುವಲ್ಲಿ ಅವರು ಬಹಳ ಮುಖ್ಯವಾದ ಪಾತ್ರವನ್ನು ವಹಿಸಿದರು. ಅವರಿಗೆ ತಬ್ಲೀಗ್ ಬಗ್ಗೆಯೂ ಅಪಾರ ಉತ್ಸಾಹವಿತ್ತು. ಹೌನ್ಸ್ಲೋನ ಹಿಂದೂಗಳು ಮತ್ತು ಸಿಖ್ಖರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು ಮತ್ತು ಅವರನ್ನು ಯಾವಾಗಲೂ ಜಮಾಅತ್‌ನ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕರೆತರುತ್ತಿದ್ದರು. ದಿವಂಗತರು ಮೂಸಿಯಾಗಿದ್ದರು. ಅವರು ಇಬ್ಬರು ಹೆಣ್ಣುಮಕ್ಕಳು ಮತ್ತು ನಾಲ್ವರು ಗಂಡು ಮಕ್ಕಳನ್ನು ಅಗಲಿದ್ದಾರೆ. ಅವರ ಪುತ್ರರು ಕೂಡ ಜಮಾಅತ್‌ನ ಕೆಲಸ ಮಾಡುತ್ತಿದ್ದಾರೆ. ಮತ್ತು ಅನೇಕ ಮೊಮ್ಮಕ್ಕಳು ಮರಿಮೊಮ್ಮಕ್ಕಳು ಇದ್ದಾರೆ. ಅವರಿಗೆ ಒಳ್ಳೆಯ ಕುಟುಂಬವಿದೆ. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕ್ಷಮಿಸಲಿ ಮತ್ತು ಅವರ ಮೇಲೆ ಕರುಣೆ ತೋರಲಿ ಮತ್ತು

ಅವರ ಮಕ್ಕಳು ಮತ್ತು ಅವರ ವಂಶಸ್ಥರು ಖಿಲಾಫತ್ ಮತ್ತು ಜಮಾಅತ್‌ನೊಂದಿಗೆ ನಿಷ್ಠೆಯ ಸಂಬಂಧ ಹೊಂದಿರಲಿ.

ಎರಡನೇ ಜನಾಝ ಗ಼ಾಯಿಬ್, ಅದು ರಾವಲ್ಪಿಂಡಿಯ ರಾಜನ್‌ಪುರದ ತೈಯಬ್ ಅಹ್ಮದ್ ಸಾಹಿಬ್ ಶಹೀದ್ ಇಬ್ನ್ ಮಂಝೂರ್ ಅಹ್ಮದ್ ಸಾಹಿಬ್ ಅವರದ್ದಾಗಿದೆ. ಡಿಸೆಂಬರ್ 5 ರಂದು ರಾವಲ್ಪಿಂಡಿಯಲ್ಲಿ ಓರ್ವ ಅಹ್ಮದಿಯ್ಯತ್‌ನ ಶತ್ರು ಕೊಡಲಿಯ ದಾಳಿಯಿಂದ ತೈಯಬ್ ಅಹ್ಮದ್ ಸಾಹಿಬ್ ಅವರನ್ನು ಹುತಾತ್ಮಗೊಳಿಸಿದನು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**– ವಿವರಗಳ ಪ್ರಕಾರ, ತೈಯಬ್ ಅಹ್ಮದ್ ಶಹೀದ್ ಕೆಲವು ದಿನಗಳ ಮುಂಚೆ ತನ್ನ ಸಹೋದರ ತಾಹಿರ್ ಅಹ್ಮದ್ ಖಮರ್ ಅವರಿಗೆ ವ್ಯವಹಾರದಲ್ಲಿ ಸಹಾಯ ಮಾಡಲು ರಾಜನ್‌ಪುರದಿಂದ ರಾವಲ್ಪಿಂಡಿಗೆ ಬಂದಿದ್ದರು. ಹುತಾತ್ಮನು ತನ್ನ ದಿವಂಗತ ಸಹೋದರನ ಅಂಗಡಿಯಲ್ಲಿ ಕುಳಿತಿದ್ದಾಗ ಒಬ್ಬ ವ್ಯಕ್ತಿ ಅಲ್ಲಿಗೆ ಬಂದು ಹುತಾತ್ಮನೊಂದಿಗೆ ಜಗಳವಾಡಲು ಪ್ರಾರಂಭಿಸಿದನು. ಮೃತ ಹುತಾತ್ಮನು ಮೇಲೆ ತಿಳಿಸಿದ ವ್ಯಕ್ತಿಗೆ, "ನೀನು ನನ್ನ ಜೊತೆ ಏಕೆ ವಾದಿಸುತ್ತಿದ್ದೀರಿ? ನಾನು ಇಲ್ಲಿ ಅತಿಥಿಯಾಗಿದ್ದೇನೆ ಎಂದು ಹೇಳಿದರು, ಆದರೂ ದಾಳಿಕೋರನು ಅದನ್ನು ಲೆಕ್ಕಿಸದೆ ಅವರ ತಲೆ, ಕುತ್ತಿಗೆ ಮತ್ತು ಬೆನ್ನಿನ ಮೇಲೆ ಕೊಡಲಿಯಿಂದ ಹಲ್ಲೆ ಮಾಡಿ ತೈಯಬ್ ಅಹ್ಮದ್ ಸಾಹಿಬ್ ಸ್ಥಳದಲ್ಲೇ ಸಾವನ್ನಪ್ಪಿದರು. ಸ್ವಲ್ಪ ದೂರದಲ್ಲಿದ್ದ ತಾಹಿರ್ ಅಹ್ಮದ್ ಕಮರ್ ತನ್ನ ಸಹೋದರನಿಗೆ ಸಹಾಯ ಮಾಡಲು ಧಾವಿಸಿದರು, ಆದರೆ ದಾಳಿಕೋರನು ಕೊಡಲಿಯೊಂದಿಗೆ ಅವರ ಬಳಿಗೆ ಬಂದನು. ಆದಾಗ್ಯೂ, ಅವರು ಬಹಳ ಕಷ್ಟಪಟ್ಟು ತನ್ನ ಜೀವವನ್ನು ಉಳಿಸಿಕೊಂಡನು ಮತ್ತು ಘಟನೆಯ ಉದ್ದಕ್ಕೂ, ಹಂತಕ ಜಮಾಅತ್ ವಿರೋಧಿ ಘೋಷಣೆಗಳನ್ನು ಕೂಗುತ್ತಲೇ ಇದ್ದನು. "ಖಾದಿಯಾನಿಗಳು! ನೀವು ಜನರಿಗೆ ಈ ಪ್ರದೇಶ ಬಿಟ್ಟು ಹೋಗುವಂತೆ ಹಲವು ಬಾರಿ ಹೇಳಿದ್ದೇನೆ ಎಂದು ಕೂಗುತ್ತಿದ್ದನು ಮತ್ತು ಆದಾಗ್ಯೂ, ಇರಿತದ ಘಟನೆಯ ನಂತರ ಅವರು ತಪ್ಪಿಸಿಕೊಂಡರು. ತದನಂತರ ಪೊಲೀಸರು ಕೊಲೆಗಾರನನ್ನು ಬಂಧಿಸಿದರು. ಈಗ ಪ್ರಕರಣ ಎಲ್ಲಿಗೆ ಹೋಗಿ ಮುಟ್ಟುತ್ತದೆ ನೋಡೋಣ.

ಮೃತರ ಸಹೋದರ ತಾಹಿರ್ ಅಹ್ಮದ್ ಮತ್ತು ಇತರ ಕುಟುಂಬ ಸದಸ್ಯರು ವ್ಯಾಪಾರ ಉದ್ದೇಶಗಳಿಗಾಗಿ ರಾವಲ್ಪಿಂಡಿಯಲ್ಲಿ ನೆಲೆಸಿದ್ದಾರೆ ಮತ್ತು ಕಳೆದ ವರ್ಷದಲ್ಲಿ, ಕುಟುಂಬವು ಪ್ರತಿಕೂಲ ಸಂದರ್ಭಗಳು ಮತ್ತು ಬೆದರಿಕೆಗಳಿಂದಾಗಿ ನಾಲ್ಕು ಬಾರಿ ತಮ್ಮ ವ್ಯವಹಾರದ ಸ್ಥಳವನ್ನು ಬದಲಾಯಿಸಬೇಕಾಯಿತು ಎಂದು ಹೇಳುತ್ತಾರೆ. ಮೂರು ತಿಂಗಳ ಮುಂಚೆ ಅವರ ಮನೆಯನ್ನು ಖಾಲಿ ಮಾಡುವಂತೆ ಒತ್ತಾಯಿಸಲಾಯಿತು. ಹಲವಾರು ಸಂದರ್ಭಗಳಲ್ಲಿ, ಅವರು ವಿರೋಧಿಗಳಿಂದ ಕಲ್ಲು ತೂರಾಟ ಮತ್ತು ವ್ಯವಹಾರ ನಷ್ಟವನ್ನು ಎದುರಿಸಿದರು. ಅವರ ವಿರುದ್ಧದ ಅರ್ಜಿಗಳ ಮೇರೆಗೆ ಪೊಲೀಸರು ಅವರನ್ನು ಕರೆಸಿ, ಆಧಾರರಹಿತ ಆರೋಪಗಳನ್ನು ಮಾಡಿದ್ದರು. ಅವರು ಈ ಎಲ್ಲಾ ಸನ್ನಿವೇಶಗಳನ್ನು ಬಹಳ ಧೈರ್ಯದಿಂದ ಎದುರಿಸಿದರು.

ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ಮುತ್ತಜ್ಜ ಖಾದಿಯನ್‌ನ ಉಮರ್‌ದೀನ್ ಸಾಹಿಬ್ ಅವರ ಮೂಲಕ ಬಂದಿತು. ದಿವಂಗತ ಹುತಾತ್ಮರ ಅಜ್ಜ ಅಹ್ಮದ್ ದಿನ್ ಸಾಹಿಬ್, ಮಿನಾರತುಲ್ ಮಸೀಹ್ ನಿರ್ಮಾಣದಲ್ಲಿ ಮೇಸ್ತ್ರಿಯಾಗಿ ಭಾಗವಹಿಸುವ ಭಾಗ್ಯವನ್ನು ಪಡೆದರು. ಫುರ್ಖಾನ್ ಬೆಟಾಲಿಯನ್‌ನಲ್ಲಿ ಸೇವೆ ಸಲ್ಲಿಸುವ ಅವಕಾಶವೂ ಲಭಿಸಿತು. ಪಾಕಿಸ್ತಾನ ಸ್ಥಾಪನೆಯ ಸಮಯದಲ್ಲಿ ವಲಸೆ ಹೋದಾಗ ಅವರು ಖಲೀಫತುಲ್ ಮಸೀಹ್ ಸಾನಿ(ರ) ಅವರ ಕಾರವಾನ್‌ನ ಭಾಗವಾಗಿದ್ದರು. ಅವರು ಪಾಕಿಸ್ತಾನಕ್ಕೆ ಬಂದು ರಹೀಮ್ ಯಾರ್ ಖಾನ್ ಜಿಲ್ಲೆಯ ಬಸ್ತಿ ಕಂದಹರ ಸಿಂಗ್‌ನಲ್ಲಿ ಜಮಾಅತ್ ಅನ್ನು ಸ್ಥಾಪಿಸಿದರು ಮತ್ತು ಜಮಾಅತ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಭಾಗ್ಯವನ್ನು ಪಡೆದರು ಮತ್ತು ಅಹ್ಮದಿಯಾ ಬೈತುಲ್ ಝಿಕ್ರ್ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಅನಾರೋಗ್ಯದ ಕಾರಣ ಹುತಾತ್ಮನಿಗೆ ಶಿಕ್ಷಣ ಸಿಗಲಿಲ್ಲ, ಆದರೆ ಅವರಿಗೆ ಓದುವುದು ಮತ್ತು ಬರೆಯುವುದು ತಿಳಿದಿತ್ತು. ಅವರು ಸರಳ ಸ್ವಭಾವ ಹೊಂದಿದ್ದರು. ಅವರು ಕೃಷಿ ಮತ್ತು ಕಠಿಣ ಪರಿಶ್ರಮದೊಂದಿಗೆ ಸಂಬಂಧ ಹೊಂದಿದ್ದರು. ಹುತಾತ್ಮರು ಐದು ಹೊತ್ತಿನ ನಮಾಝ್ ಮತ್ತು ತಹಜ್ಜುದ್‌ಗೆ ಬದ್ಧರಾಗಿದ್ದರು. ಅವರು ಕುಟುಂಬದ ಪ್ರತಿಯೊಬ್ಬರಿಗೂ ನಮಾಝ್ ನಿರ್ವಹಿಸಲು ಪ್ರೋತ್ಸಾಹಿಸುತ್ತಿದ್ದರು. ಅವರಿಗೆ ಖಲೀಫರ ಮೇಲೆ ಅಪಾರ ಪ್ರೀತಿ ಇತ್ತು ಮತ್ತು ಅವರು ತಮ್ಮ ಪೋಷಕರಿಗೆ ತುಂಬಾ ಸೇವೆ ಸಲ್ಲಿಸುತ್ತಿದ್ದರು. ಸಂಬಂಧಿಕರ ಸಹಾನುಭೂತಿ ಗಮನಾರ್ಹವಾಗಿತ್ತು. ಅವರು ಜುಮುಆ ನಮಾಝನ್ನು ನಿರ್ವಹಿಸಲು ವಿಶೇಷ ವ್ಯವಸ್ಥೆಗಳನ್ನು ಮಾಡುತ್ತಿದ್ದರು. ಅವರು ಸಮಯಕ್ಕೆ ಸರಿಯಾಗಿ ಮಸೀದಿಯನ್ನು ತಲುಪುತ್ತಿದ್ದರು. ಮೃತರ ತಂದೆ ಮಂಝೂರ್ ಅಹ್ಮದ್ ಹೇಳಿದರು: ತಮ್ಮ ಬಾಲ್ಯದಲ್ಲಿ ಒಮ್ಮೆ ಹುತಾತ್ಮರು ಇಶಾ ನಮಾಝ್ ನಿರ್ವಹಿಸದೆ ನಿದ್ರಿಸಿದ್ದರು. ಅವರು ತಮ್ಮ ಕನಸಿನಲ್ಲಿ ಯಾರೋ ಅವರನ್ನು ಒರಟಾಗಿ ಎತ್ತಿ ಏಕೆ ನಮಾಝ್ ನಿರ್ವಹಿಸಿಲ್ಲ ಎಂದು ಕೇಳುತ್ತಿರುವುದನ್ನು ನೋಡಿದರು. ಇದಾದ ನಂತರ, ಹುತಾತ್ಮರು ಯಾವುದೇ ನಮಾಝನ್ನು ತಪ್ಪಿಸಲಿಲ್ಲ, ಅದಲ್ಲದೆ ತಹಜ್ಜುದ್ ನಮಾಝ್ ನಿರ್ವಹಿಸಲು ಬದ್ಧರಾಗಿದ್ದರು ಎಂದು ಹೇಳಲಾಗುತ್ತದೆ. ಅವರ ಪತ್ನಿ ಗಝಾಲಾ ಸಾಹಿಬಾ ಹೇಳುವಂತೆ, ಅವರು ಐದು ಅಥವಾ ಆರು ವರ್ಷಗಳ ಹಿಂದೆ ವಿವಾಹವಾದರು, ಮತ್ತು ಅವರು ಯಾವಾಗಲೂ ನನಗೆ ನಿರ್ದಿಷ್ಟವಾಗಿ ಸಲಹೆ ನೀಡುತ್ತಿದ್ದ ಒಂದು ವಿಷಯವೆಂದರೆ ನಿಯಮಿತವಾಗಿ ನಮಾಜ್ ನಿರ್ವಹಿಸುವುದು.

ಜಿಲ್ಲಾ ಮುರಬ್ಬಿಯಾಗಿರುವ ಮಹಮೂದ್ ಅಹ್ಮದ್ ರಿಂಡ್ ಸಾಹಿಬ್ ಹೇಳುತ್ತಾರೆ: ಮೃತ ಹುತಾತ್ಮರೊಂದಿಗಿನ ತಮ್ಮ ಮೊದಲ ಭೇಟಿಯ ಸಮಯದಲ್ಲಿ, ಸಮುದಾಯ ಸೇವೆಗೆ ತಾವು ಯಾವಾಗಲೂ ಲಭ್ಯವಿರುವುದಾಗಿ ಹೇಳಿದ್ದರು. ದಿವಂಗತ ಹುತಾತ್ಮರು ಸರಳ ಮತ್ತು ಶಾಂತ ಸ್ವಭಾವ ವ್ಯಕ್ತಿಯಾಗಿದ್ದು, ವಾಖಿಫೀನೆ ಝಿಂದಗಿಯವರನ್ನು ತುಂಬಾ ಪ್ರೀತಿಸುತ್ತಿದ್ದರು. ಅವರು ಮಸೀದಿಗೆ ಬಂದಾಗ, ಸುನ್ನತ್‌ಗಳನ್ನು ನಿರ್ವಹಿಸಿದ ನಂತರ ದೇವರ ಸ್ಮರಣೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಮೃತರು ತಂದೆ, ತಾಯಿ ಮಕ್ಸೂದಾ ಬೀಬಿ ಸಾಹಿಬಾ, ಪತ್ನಿ ಗಜಲಾ ಸಾಹಿಬಾ ಮತ್ತು ಇಬ್ಬರು ಸಹೋದರರನ್ನು ಅಗಲಿದ್ದಾರೆ. ಅವರ ಒಬ್ಬ ಸಹೋದರ ವಖ್‌ಫೆ ಜದೀದ್‌ನ ಮುಅಲ್ಲಿಮ್ ಆಗಿದ್ದಾರೆ. ಮೃತರಿಗೆ ಮಕ್ಕಳಿರಲಿಲ್ಲ. ಅದೇ ರೀತಿ, ಮೃತರಿಗೆ ಇಬ್ಬರು ಒಡಹುಟ್ಟಿದವರು ಕೂಡ ಇದ್ದಾರೆ. ಸರ್ವಶಕ್ತನಾದ ಅಲ್ಲಾಹನು ಮೃತ ಹುತಾತ್ಮರ ಶ್ರೇಣಿಯನ್ನು ಉನ್ನತೀಕರಿಸಲಿ ಮತ್ತು ಹಿಂದುಳಿದ ಎಲ್ಲರಿಗೂ ತಾಳ್ಮೆಯನ್ನು ನೀಡಲಿ.

ಎರಡನೇ ಜನಾಝ ಗ಼ಾಯಿಬ್, ಅದು ಪ್ಯಾಲಟೈನ್‌ನ ಗಝಾದ ಅಝೀಝುಮ್ ಮುಹನ್ನದ್ ಮು'ಅಯ್ಯಿದ್ ಅಬು ಅವಾದ್ ಅವರದ್ದಾಗಿದೆ. ಇಪ್ಪತ್ತನೇ ವಯಸ್ಸಿನಲ್ಲಿ ಡ್ರೋನ್ ದಾಳಿಯಲ್ಲಿ ಅವರು ಹುತಾತ್ಮರಾದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**–

ಶರೀಫ್ ಔದಾ ಸಾಹಿಬ್ ಅಮೀರ್ ಕಬಾಬಿರ್ ಬರೆಯುತ್ತಾರೆ, ಮುಹನ್ನದ್ ಮು'ಅಯ್ಯಿದ್ ಅಬು ಅವಾದ್ ಯುದ್ಧದ ಪರಿಸ್ಥಿತಿಗಳ ಹೊರತಾಗಿಯೂ ಇಪ್ಪತ್ತು ವರ್ಷ ವಯಸ್ಸಿನ ನಾಚಿಕೆ ಸ್ವಭಾವದ, ಶಾಂತ ಮತ್ತು ಉತ್ತಮ ಉಡುಗೆ ತೊಟ್ಟ ಯುವಕರಾಗಿದ್ದರು. ಅವರು ದಕ್ಷಿಣ ಗಾಜಾದ ಖಾನ್ ಯೂನಿಸ್ ಬಳಿಯ ಹ್ಯುಮ್ಯಾನಿಟಿ ಫಸ್ಟ್ ಶಿಬಿರದಲ್ಲಿ ತಮ್ಮ ಪೋಷಕರೊಂದಿಗೆ ಟೆಂಟ್‌ನಲ್ಲಿ ವಾಸಿಸುತ್ತಿದ್ದರು ಮತ್ತು ಹ್ಯುಮ್ಯಾನಿಟಿ ಫಸ್ಟ್‌ಗಾಗಿಯೂ ಕೆಲಸ ಮಾಡುತ್ತಿದ್ದರು. ಅವರು ಅಲ್ಲಿನ ಜನರಿಗೆ ಸೇವೆ ಸಲ್ಲಿಸಿದರು, ಸ್ವತಃ ಶಿಬಿರದಲ್ಲಿ ವಾಸಿಸುತ್ತಿರಲಿಲ್ಲ, ಆದರೆ ಮಾನವೀಯತೆ ಮರೆದ ಜನರು ಅವರು ನಮಗೆ ತುಂಬಾ ಒಳ್ಳೆಯ ಕೆಲಸಗಾರರಾಗಿದ್ದರು ಎಂದು ಹೇಳುತ್ತಾರೆ. ಅವರ ಕುಟುಂಬದಲ್ಲಿ ಅಹ್ಮದೀಯತ್ ಅವರ ತಂದೆ ಮುಯೀದ್ ಸಾಹಿಬ್ ಮೂಲಕ ಬಂದಿತು. ಅವರು ಬಹುಶಃ 2009 ಅಥವಾ 2010 ರಲ್ಲಿ ತನ್ನ ಕುಟುಂಬದೊಂದಿಗೆ ಬೈಅತ್ ಮಾಡಿದರು. ನಾನು ಮೊದಲೇ ಹೇಳಿದಂತೆ, ದಿವಂಗತ ಮುಹನ್ನದ್ ಅವರಿಗೆ ಹ್ಯುಮ್ಯಾನಿಟಿ ಫಸ್ಟ್ ತಂಡದಲ್ಲಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸುವ ಸೌಭಾಗ್ಯ ದೊರೆಯಿತು. ಅವರು ತುಂಬಾ ಸಕ್ರಿಯ ಸದಸ್ಯರಾಗಿದ್ದರು. ಮುಹನ್ನದ್ ತನ್ನ ಕುಟುಂಬದಲ್ಲಿ ಕಷ್ಟ ಮತ್ತು ಅಗತ್ಯಗಳನ್ನು ಮತ್ತು ಆಸೆಗಳನ್ನು ಅರಿತುಕೊಂಡಿದ್ದನು ಮತ್ತು ಅವುಗಳನ್ನು ಪೂರೈಸಲು ಶ್ರಮಿಸುತ್ತಿದ್ದರು. ಈ ಪ್ರದೇಶದಲ್ಲಿ ತಿನ್ನಲು ಏನೂ ಇರಲಿಲ್ಲ. ಆದ್ದರಿಂದ, ಎಲ್ಲಿಂದಲಾದರೂ ಒಂದು ತುತ್ತು ಆಹಾರ ಸಿಗುವುದು ಒಂದು ಅನುಗ್ರಹಕ್ಕಿಂತ ಕಡಿಮೆಯಿರಲಿಲ್ಲ. ಇಂದು ಅಲ್ಲಿನ ಪರಿಸ್ಥಿತಿ ತುಂಬಾ ಕೆಟ್ಟದಾಗಿದೆ. ಇಸ್ರೇಲ್ ಸರ್ಕಾರ ಆಹಾರ ನಿಷೇಧ ಹೇರಿದೆ. ಅಲ್ಲಿಗೆ ಹೋಗುವ ಸಹಾಯ ಟ್ರಕ್‌ಗಳನ್ನು ನಿಲ್ಲಿಸಲಾಗುತ್ತದೆ. ಹುತಾತ್ಮರಾಗುವ ಕೆಲವು ದಿನಗಳ ಮೊದಲು, ಮುಹನ್ನದ್ ಆಹಾರ ಹುಡುಕುತ್ತಾ ದಕ್ಷಿಣ ಗಾಜಾದ ರಫಾ ಪ್ರದೇಶಕ್ಕೆ ಹೋದರು. ಆಹಾರ ಸಾಮಗ್ರಿಗಳನ್ನು ತುಂಬಿದ ಟ್ರಕ್‌ಗಳು ಈ ಪ್ರದೇಶದ ಮೂಲಕ ಹಾದು ಹೋಗುತ್ತವೆ, ಆದರೆ ಅವುಗಳ ಮೇಲೆ ಆಗಾಗ್ಗೆ ದಾಳಿ ಮಾಡಿ ನಾಶಪಡಿಸಲಾಗುತ್ತದೆ ಅಥವಾ ಲೂಟಿ ಮಾಡಲಾಗುತ್ತದೆ. ಅದಕ್ಕಾಗಿಯೇ ಕೆಲವು ಯುವಕರು ಈ ಪ್ರದೇಶಕ್ಕೆ ಹೋಗುತ್ತಾರೆ, ನಾಶವಾದ ಅವಶೇಷಗಳಲ್ಲಿ ಎಲ್ಲೋ ಸ್ವಲ್ಪ ಆಹಾರ ಸಿಗುತ್ತದೆ ಎಂದು ಆಶಿಸುತ್ತಾರೆ. ಕೆಲವೊಮ್ಮೆ ಜೇಡಿಮಣ್ಣಿನೊಂದಿಗೆ ಬೆರೆಸಿದ ಹಿಟ್ಟು ಇಲ್ಲಿ ಕಂಡುಬರುತ್ತದೆ. ಅದು ಮಣ್ಣಿನೊಂದಿಗೆ ಬೆರೆತು ಕಂಡುಬಂದರೂ, ಅದು ಅವರಿಗೆ ಅಸಾಧಾರಣ ಅನುಗ್ರಹವಾಗುತ್ತದೆ. ಒಮ್ಮೆ, ಮುಹನ್ನದ್ ಅಲ್ಲಿಗೆ ಹೋದಾಗ, ಅದೃಷ್ಟವಶಾತ್ ಅಲ್ಲಿ ತನ್ನ ಕುಟುಂಬ ಮತ್ತು ನೆರೆಹೊರೆಯವರಿಗೆ ಸ್ವಲ್ಪ ಹಿಟ್ಟು ಸಿಕ್ಕಿತು, ಅದನ್ನು ಅವನು ಮನೆಗೆ ತಂದನು. ಇದು ಅನೇಕ ಜನರ ಬದುಕುಳಿಯಲು ಸಹಾಯ ಮಾಡುತ್ತದೆ ಎಂದು ತಾಯಿಯೂ ಸಂತೋಷಪಟ್ಟರು, ಆದರೆ ಆಕೆಯ ತಂದೆ ಅವನನ್ನು ಮತ್ತೆ ಹೋಗಬೇಡಿ ಏಕೆಂದರೆ ಅಲ್ಲಿಂದ ಹಿಂತಿರುಗುವುದು ಪವಾಡಕ್ಕಿಂತ

ಕಡಿಮೆಯಿಲ್ಲ ಎಂದು ಗದರಿಸಿದರು. ನೀವು ಇನ್ನೂ ಚಿಕ್ಕವರು ಮತ್ತು ಜೀವನದಲ್ಲಿ ಮಾಡಲು ಬಹಳಷ್ಟಿದೆ. ಆದ್ದರಿಂದ, ಕೆಲವು ಕಿಲೋಗ್ರಾಂಗಳಷ್ಟು ಹಿಟ್ಟಿಗಾಗಿ ಅಲ್ಲಿಗೆ ಹೋಗಿ ನಿಮ್ಮ ಜೀವವನ್ನು ಪಣಕ್ಕಿಡುವುದು ಸಮಂಜಸವಾದ ನಿರ್ಧಾರವಲ್ಲ. ಆದಾಗ್ಯೂ, ಡಿಸೆಂಬರ್ 3 ರಂದು, ಅವನು ತನ್ನ ಇಬ್ಬರು ಸಹಚರರೊಂದಿಗೆ ಆಹಾರವನ್ನು ಹುಡುಕುತ್ತಾ ಮತ್ತೆ ಅಲ್ಲಿಗೆ ಹೋದರು. ಅವರು ಆ ಪ್ರದೇಶಕ್ಕೆ ಹೋದಾಗ, ಅಲ್ಲಿ ಒಬ್ಬ ಪ್ಯಾಲೆಸ್ಟೀನಿಯನ್ ಸಹೋದರನ ಶವವನ್ನು ನೋಡಿದೆ. ಹತ್ತಿರದಲ್ಲಿ ಕೆಲವು ಬೀದಿ ನಾಯಿಗಳು ದೇಹವನ್ನು ಕೆರೆದುಕೊಳ್ಳುತ್ತಿದ್ದವು, ಈ ದೃಶ್ಯವು ಅವರಿಗೆ ತುಂಬಾ ದುಃಖಿತರನ್ನಾಗಿ ಮಾಡಿತು. ಅವರು ಮೂಲ ಉದ್ದೇಶವನ್ನು ಮರೆತು ಶವವನ್ನು ಎತ್ತಿಕೊಂಡು ಆಂಬ್ಯುಲೆನ್ಸ್‌ಗೆ ಸಾಗಿಸಿ ಸಮಾಧಿ ಮಾಡಲು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ಯಲು ಸಾಧ್ಯವಾಯಿತು. ಈ ಸಮಯದಲ್ಲಿ, ಗಾಯಗೊಂಡ ಮಹಿಳೆ ಮತ್ತು ಆಕೆಯ ಮಗಳು ಸಹಾಯಕ್ಕಾಗಿ ಕೂಗುತ್ತಿರುವುದನ್ನು ಅವರು ಕೇಳಿದರು, ಅವರೂ ಗಾಯಗೊಂಡಿದ್ದರು. ಅವರು ಮೂವರೂ ಶವವನ್ನು ಆಂಬ್ಯುಲೆನ್ಸ್‌ಗೆ ಹೊತ್ತುಕೊಂಡು, ಸ್ಟ್ರೆಚರ್ ತೆಗೆದುಕೊಂಡು, ಗಾಯಗೊಂಡ ತಾಯಿ ಮತ್ತು ಮಗಳನ್ನು ಕರೆದುಕೊಂಡು ಹೋಗಲು ಹಿಂತಿರುಗಿದರು. ಅವರು ಗಾಯಗೊಂಡ ವ್ಯಕ್ತಿಯನ್ನು ಹೊತ್ತೊಯ್ಯುತ್ತಿದ್ದಾಗ ಇಸ್ರೇಲಿ ವಿಮಾನವೊಂದು ಇದ್ದಕ್ಕಿದ್ದಂತೆ ಅವರ ಮೇಲೆ ಕ್ಷಿಪಣಿಯನ್ನು ಹಾರಿಸಿತು. ಅವರ ಸಹಚರರಲ್ಲಿ ಒಬ್ಬರಾದ ಮುಹನ್ನದ್ ಮತ್ತು ಇಬ್ಬರು ಗಾಯಗೊಂಡ ಮಹಿಳೆಯರು ಸ್ಥಳದಲ್ಲೇ ಹುತಾತ್ಮರಾದರು, ಆದರೆ ಮೂರನೇ ಸಹಚರ ಬದುಕುಳಿದರು. ಅವರು ಈ ಸಂಪೂರ್ಣ ನೋವಿನ ಕಥೆಯನ್ನು ಹೇಳಿದರು. ಮತ್ತು ಮುಹನ್ನದ್ ಮತ್ತು ಅವನ ಸಹಚರರ ಶವಗಳನ್ನು ಎತ್ತಲು ಹೋದವರು ಕೂಡ ಅಲ್ಲಿ ಕೊಲ್ಲಲ್ಪಟ್ಟರು ಎಂಬುದು ತುಂಬಾ ವಿಷಾದಕರ ಎಂದು ಅವರು ಹೇಳುತ್ತಾರೆ. ಕೊನೆಗೂ, ನಿನ್ನೆ ಮೊನ್ನೆ ಅವರ ಶವ ಆಸ್ಪತ್ರೆಯಲ್ಲಿ ಪತ್ತೆಯಾಗಿದೆ.

ಹುತಾತ್ಮರ ತಂದೆ ಮೊಯೀದ್, ಜಮಾಅತ್‌ನ ಅತ್ಯಂತ ಪ್ರಾಮಾಣಿಕ ಮತ್ತು ವಿನಮ್ರ ಸದಸ್ಯರಾಗಿದ್ದಾರೆ. ಅವರು ಯಾವಾಗಲೂ ಜಮಾಅತ್ತಿನ ಸೇವೆ ಸಲ್ಲಿಸಲು ಕೆಲಸ ಹುಡುಕುತ್ತಿರುತ್ತಾರೆ. ಇಲ್ಲಿ ಹ್ಯುಮ್ಯಾನಿಟಿ ಫಸ್ಟ್ ಶಿಬಿರದಲ್ಲಿ, ನಮಾಝ್‌ಗಾಗಿ ಗೊತ್ತುಪಡಿಸಿದ ಪ್ರದೇಶವನ್ನು ಸ್ವಚ್ಛಗೊಳಿಸಲು ಅವರು ಯಾರಿಗೂ ಬಿಡುತ್ತಿರಲಿಲ್ಲ ಅವರು ಸ್ವತಃ ಅದನ್ನು ಸ್ವಚ್ಛಗೊಳಿಸುತ್ತಿದ್ದರು. ಯಾವಾಗಲೂ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದರು.

ಅಹ್ಮದಿಯ್ಯತ್ ಸ್ವೀಕರಿಸಿದ ನಂತರ ಅವರ ತಂದೆ ಕೂಡ ಬಹಳಷ್ಟು ಕಷ್ಟಗಳನ್ನು ಎದುರಿಸಿದರು, ಮತ್ತು ಅವರು ತುಂಬಾ ಧೈರ್ಯಶಾಲಿಯಾಗಿರುವುದರಿಂದ, ಅವರು ವಿವಿಧ ಮಸೀದಿಗಳಿಗೆ ಹೋಗಿ ಮಸೀಹ್ ಆಗಮಿಸಿದ್ದಾರೆ ಎಂದು ಬಹಳ ದೃಢತೆಯಿಂದ ಘೋಷಿಸುತ್ತಿದ್ದರು. ಈ ಕಾರಣಕ್ಕಾಗಿಯೇ ಅವರು ಆಗಾಗ್ಗೆ ಹೊಡೆತಗಳನ್ನು ಎದುರಿಸುತ್ತಿದ್ದರು, ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮೇಲೆ ವಿಶ್ವಾಸ ಹೊಂದಿದ್ದ ಕಾರಣದಿಂದಲೂ ಸಹ, ಸ್ಥಳೀಯ ಸರ್ಕಾರವು ಅವರ ಮೇಲೆ ಧರ್ಮಭ್ರಷ್ಟತೆಯ ಆರೋಪ ಹೊರಿಸಿ ಹಲವಾರು ವಾರಗಳ ಕಾಲ ಜೈಲಿನಲ್ಲಿ ಇರಿಸಿತು, ಆದರೆ ಅವರು ಈ ಎಲ್ಲಾ ಕಷ್ಟಗಳಲ್ಲಿಯೂ ಬಲಶಾಲಿಯಾಗಿದ್ದರು. ಅವರ ನಂಬಿಕೆ ಸ್ವಲ್ಪವೂ ಕಡಿಮೆಯಾಗಲಿಲ್ಲ.

ಬಂಧನದ ಸಮಯದಲ್ಲಿ, ಒಬ್ಬ ವಿಚಾರಣಾಧಿಕಾರಿ ಅವನ ಕಿವಿಗೆ ಹೊಡೆದನು, ನಂತರ ಅವರಿಗೆ ಆ ಕಿವಿ ಕೇಳಿಸುತ್ತಿರಲಿಲ್ಲ. ಆದರೆ, ಮೃತ ಹುತಾತ್ಮರ ತಂದೆ ಕೂಡ ದೊಡ್ಡ ತ್ಯಾಗ ಮಾಡಿದ್ದಾರೆ. ಈ ಕುಟುಂಬವು ಸಮುದಾಯದ ಹಿತದೃಷ್ಟಿಯಿಂದ, ತಮ್ಮ ನಂಬಿಕೆಯ ಹಿತದೃಷ್ಟಿಯಿಂದ ದೊಡ್ಡ ತ್ಯಾಗಗಳನ್ನು ಮಾಡಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ಅವರನ್ನು ಭವಿಷ್ಯದಲ್ಲಿ ಎಲ್ಲಾ ದುಷ್ಟತನದಿಂದ ರಕ್ಷಿಸಲಿ ಮತ್ತು ಹುತಾತ್ಮರ ಶ್ರೇಣಿಯನ್ನು ಉನ್ನತೀಕರಿಸಲಿ.

ಮುಂದಿನ ಜನಾಝ ಗ್ಘಾಯಿಬ್ ಇತ್ತೀಚೆಗೆ 100ನೇ ವಯಸ್ಸಿನಲ್ಲಿ ಖಾದಿಯನ್‌ನಲ್ಲಿ ನಿಧನರಾದ ಖಾದಿಯನ್‌ನ ದರ್ವೇಶ್ ಆದ ಮೌಲ್ವಿ ಮುಹಮ್ಮದ್ ಅಯೂಬ್ ಬಟ್ ಸಾಗಹಿಬ್ ಅವರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರ ತಾಯಿಯಾದ ಸನ್ಮಾನ್ಯ ಕರೀಂ ಬೀಬೀ ಸಾಹಿಬರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ದಿವಂಗತರ ಸ್ವಂತ ಬರಹದ ಪ್ರಕಾರ ಅವರು ಯುವಕನಾಗಿದ್ದಾಗ ಹಝ್ರತ್ ಪೈಗಂಬರ್(ಸ) ಕುದುರೆಯಲ್ಲಿ ಸವಾರರಾಗಿದ್ದಾಗಿ ಕನಸಿನಲ್ಲಿ ಕಂಡಿದ್ದರು. ಅವರಿಗೆ ದೀನಿನ ಸೇವೆ ಮಾಡುವ ಸೌಭಾಗ್ಯ ಲಭಿಸುವುದು ಎಂದು ಈ ಕನಸನ್ನು ವ್ಯಾಖ್ಯಾನಿಸುತ್ತಾ ಅವರ ತಾಯಿ ಹೇಳಿದ್ದರು. 1939ರಲ್ಲಿ ಮೌಲವಿ ಸಾಹಿಬ್‌ರು ತನ್ನ ಜೀವಿತವನ್ನು ವಖ್ಫ್ ಮಾಡಿದರು. ಅನಂತರ ಇರಾನಿಗೆ ಹೋಗಲು ಅವರಿಗೆ ಜಮಾಅತ್ ಆದೇಶ ನೀಡಿತು. ಅಲ್ಲಿ ಐದು ವರ್ಷಗಳ ಕಾಲ ದೀನಿನ ಸೇವೆ ಮಾಡಿದರು. ಅನಂತರ ಅಫ್ಘಾನಿಸ್ತಾನಿನ ಕಾಬುಲಿಗೆ ಹೋಗಲು ಅವರಿಗೆ ಆದೇಶ ನೀಡಲಾಯಿತು. ಕಾಬುಲಿಗೆ ಹೋಗುವ ಮಾರ್ಗದಲ್ಲಿ ಕೋಯ್‌ಟಗೆ ತಲುಪಿದಾಗ, ಅವರನ್ನು ಖಾದಿಯಾನಿಗೆ ಕರೆಯಲಾಗಿದೆ ಎಂದು ಕೊಯ್‌ಟ ಜಮಾಅತಿನ ಅಮೀರ್ ಅವರೊಡನೆ ಹೇಳಿದರು. ಅದು ಭಾರತ – ಪಾಕಿಸ್ತಾನ ವಿಭಜನೆಯ ಕಾಲಘಟ್ಟವಾಗಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ಹಿಜ್ರತ್ ಮಾಡಿ ಲಾಹೋರಿನಲ್ಲಿ ಇದ್ದರು. ಮೌಲವಿ ಸಾಹಿಬ್‌ರು ಲಾಹೋರಿಗೆ ತಲುಪಿದಾಗ ಅವರೊಡನೆ ಹೀಗೆ ಹೇಳಲಾಯಿತು: 'ಖಾದಿಯಾನಿಗೆ ಹೋಗಲು ಇದು ಕೊನೆಯ ಟ್ರಕ್ ಆಗಿದೆ. ಇದರ ನಂತರ ಬಹುಶಃ ಯಾವುದೇ ಟ್ರಕ್ ಹೋಗದು. ಆದ್ದರಿಂದ ನೀವು ಖಾದಿಯಾನಿಗೆ ಹೋಗಿರಿ.' ಅಲ್ಲಿಗೆ ತಲುಪಿ ಅವರಿಗೆ ಅನೇಕ ಜಾಗಗಳಲ್ಲಿ ಸಂರಕ್ಷಣೆಯ ಡ್ಯೂಟಿಗಳನ್ನು ನೀಡಲು ಸೌಭಾಗ್ಯ ಲಭಿಸಿತು. ಅನಂತರ ಅವರಿಗೆ ಹಝ್ರತ್ ಮುಸ್ಲಿಹ್ ಮೌಊದ್(ರ)ರ ನಿರ್ದೇಶನ ಪ್ರಕಾರ ಭಾರತದಲ್ಲಿ ತಬ್ಲೀಗ್ ಮುಅಲ್ಲಿಮ್ ಎಂಬ ನೆಲೆಯಲ್ಲಿ ಉತ್ತರ ಪ್ರದೇಶದ ಜಾನ್ಸಿಗೆ ಕಳುಹಿಸಲಾಯಿತು. ಅಲ್ಲಿ ಅವರು ಅತ್ಯುತ್ತಮವಾಗಿ ತಬ್ಲೀಗ್ ಮಾಡಿದರು.

ಭಾರತದಲ್ಲಿ ಅವರಿಗೆ ಅನೇಕ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಜಮಾಅತಿನ ಸೇವೆ ಸಲ್ಲಿಸುತ್ತಿದ್ದ ಕಾಲದಲ್ಲೇ ಅವರು ಹೋಮಿಯೋಪತಿಯಲ್ಲಿ ಡಿಗ್ರಿ ಪಡೆದರು. ಅವರ ಮೂಲಕ ಅನೇಕ ಸೌಭಾಗ್ಯವಂತರಿಗೆ ಅಹ್ಮದಿಯ್ಯತ್ ಸ್ವೀಕಾರ ಮಾಡಲು ಸೌಭಾಗ್ಯ ಲಭಿಸಿತ್ತು. ಅವರ ಒಬ್ಬ ಪುತ್ರನಾದ ಡಾಕ್ಟರ್ ಮಹ್ಮೂದ್ ಅಹ್ಮದ್ ಬಟ್ ಸಾಹಿಬ್ ಮತ್ತು ಅವರ ಸೊಸೆಯಾದ ಡಾಕ್ಟರ್ ಮಂಜು ಬಟ್ ಸಾಹಿಬ ವಖ್ಫೆ ಝಿಂದಗಿ ಆಗಿರುವರು. ಅವರಿಬ್ಬರೂ ದೀರ್ಘ ಕಾಲದ ವರೆಗೆ ಘಾನದಲ್ಲಿ ಸೇವೆ ಸಲ್ಲಿಸಿದ್ದರು. ಇತ್ತೀಚಿಗೆ ಅವರಿಬ್ಬರು ಖಾದಿಯಾನಿನ ನೂರ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅದೇ ರೀತಿಯಲ್ಲಿ ಅವರ ಮತ್ತೊಬ್ಬ ಪುತ್ರ ಸಹ ಅಮೇರಿಕದಲ್ಲಿ ಡಾಕ್ಟರ್ ಆಗಿರುವರು. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಅವರ ಮಕ್ಕಳಿಗೂ ಸಂತಾನಗಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಉಲ್ಲೇಖ ಅಮೇರಿಕದ ಮಾಜಿ ನಾಇಬ್ ಅಮೀರ್ ಆದ ದಿವಂಗತ ಡಾಕ್ಟರ್ ಅಹ್ಮದ್ ಮಲಿಕ್ ಸಾಹಿಬ್ ಅವರದ್ದಾಗಿದೆ. ಅವರು ಇತ್ತೀಚೆಗೆ ಎಂಬತ್ತಾರು ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**– ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು.

ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿಯಾದ ಹಝ್ರತ್ ಅಲ್‌ಹಾಜ್ ಮೌಲ್ವಿ ಮುಹಮ್ಮದ್ ಅಬ್ದುಲ್ಲಾ ಸಾಹಿಬ್ ಅವರ ಮರಿಮೊಮ್ಮಗ ಆಗಿದ್ದರು. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು. ಮತ್ತು 2000ನೇ ಇಸವಿಯಲ್ಲಿ ಹಜ್ ಯಾತ್ರೆ ಕೈಗೊಳ್ಳುವ ಅವಕಾಶವೂ ಅವರಿಗೆ ದೊರೆಯಿತು. ಅವರು ಪಾಕಿಸ್ತಾನದಲ್ಲಿ ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿದರು. ನಂತರ ಅವರು ಅಮೇರಿಕಕ್ಕೆ ತೆರಳಿ ನೆಬ್ರಸ್ಕಾ ವಿಶ್ವವಿದ್ಯಾಲಯದಿಂದ ಪ್ರಾಣಿ ಪೋಷಣೆಯಲ್ಲಿ ಪಿಎಚ್‌ಡಿ ಮಾಡಿದರು. ನಂತರ ಅವರು ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುವುದನ್ನು ಮುಂದುವರೆಸಿದರು. ಜಮಾಅತ್ತಿಗೆ ಸಲ್ಲಿಸಿದ ಸೇವೆಯಲ್ಲಿ, ಮೃತರು 2013 ರಿಂದ ಮೃತರಾಗುವವರೆಗೂ ಅಮೇರಿಕ ಜಮಾಅತ್‌ನ ಉಪ ಅಮೀರ್ ಆಗಿ ಮತ್ತು 1988 ರಿಂದ 2013 ರವರೆಗೆ ಅಮೇರಿಕಾದ ಜಮಾಅತ್ತಿನ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಇದಲ್ಲದೆ, ಅವರು ವಿವಿಧ ಜಮಅತ್‌ಗಳಲ್ಲಿ ಜಮಾಅತ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಅವರು ವಾಷಿಂಗ್ಟನ್‌ನಲ್ಲಿ ಜಮಾಅತ್‌ನ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದರು.

ಹಝ್ರತ್ ಖಲೀಫತುಲ್ ಮಸೀಹ್ ರಬಿ(ರಹ್) ಅವರು ತಮ್ಮ ಪುಸ್ತಕ Revelution Rationality Knowledge and Truth ಗಾಗಿ ವಿವಿಧ ವೈಜ್ಞಾನಿಕ ನಿಯತಕಾಲಿಕೆಗಳಿಂದ ಉಲ್ಲೇಖಗಳನ್ನು ಹುಡುಕುವ ಕೆಲಸದಲ್ಲಿ ಅವರ ತಂಡದೊಂದಿಗೆ ಸೇವೆ ಸಲ್ಲಿಸುವ ಸೌಭಾಗ್ಯ ಅವರಿಗೆ ಲಭಿಸಿತು. ಈ ನಿಟ್ಟಿನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಸಹ ಅವರಿಂದ ಕೆಲಸ ಪಡೆದರು ಮತ್ತು ಈ ಕೆಲಸವು ಕೆಲವು ವರ್ಷಗಳ ಕಾಲ ನಡೆಯಿತು.

ಅಮೇರಿಕಾದ ಜಮಾಅತ್‌ನ ಅಮೀರ್ ಸಾಹಿಬ್ ಬರೆಯುತ್ತಾರೆ: ಡಾ. ಸಾಹಿಬ್ ಅಮೇರಿಕಾ ಜಮಾಅತ್‌ಗೆ ಹಲವು ದಶಕಗಳ ಕಾಲ ಸಂಪೂರ್ಣ ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಅವರು ಖಿಲಾಫತ್‌ಗೆ ವಿಧೇಯರಾಗಿದ್ದರು, ಆ ಕಾಲದ ಖಲೀಫರ ನಿರ್ದೇಶನಗಳಿಗೆ ಯಾವಾಗಲೂ ಸ್ಪಂದಿಸುತ್ತಿದ್ದರು, ಜಮಾಅತ್ ವ್ಯವಸ್ಥೆಯ ಬಗ್ಗೆ ಮತ್ತು ಅದರ ಮಹತ್ವವನ್ನು ಅರ್ಥಮಾಡಿಕೊಂಡಿದ್ದರು ಮತ್ತು ಯಾವಾಗಲೂ ಜಮಾಅತ್ ವ್ಯವಸ್ಥೆಗೆ ಬದ್ಧರಾಗಿದ್ದರು.

ಅವರ ಪತ್ನಿ ಫರೀದಾ ಸಾಹಿಬಾ ಹೇಳುತ್ತಾರೆ: ಮಲಿಕ್ ಸಾಹಿಬ್ ತಮ್ಮ ಹೆಚ್ಚಿನ ಸಮಯವನ್ನು ಧಾರ್ಮಿಕ ಸೇವೆಯಲ್ಲಿ ಕಳೆಯಲು ಪ್ರಯತ್ನಿಸಿದರು. ಶುಕ್ರವಾರ, ಶನಿವಾರ ಮತ್ತು ಭಾನುವಾರದಂದು ಪ್ರಧಾನ ಕಾರ್ಯದರ್ಶಿ ಕಚೇರಿಯಲ್ಲಿ ದಿನವಿಡೀ ಕೆಲಸ ಮಾಡಲು ಅವರು ವಾರದಲ್ಲಿ ನಾಲ್ಕು ದಿನ ಹತ್ತು ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು. ಹತ್ತು ಗಂಟೆಗಳ ಕಾಲ ಕೆಲಸ ಮಾಡಿದ ನಂತರ, ಅವರು ಕೆಲವೊಮ್ಮೆ ನೇರವಾಗಿ ಮಸೀದಿಗೆ ಹೋಗುತ್ತಿದ್ದರು. ಅವರು ತಡರಾತ್ರಿಯವರೆಗೂ ಕೆಲಸದಲ್ಲಿ ನಿರತರಾಗಿದ್ದರು. ಅವರು ಮುಂದೆ ಹೇಳುತ್ತಾರೆ: ಕಚೇರಿಗೆ ಹೋಗುವಾಗ ಕಾರಿನಲ್ಲಿ ಉಪಾಹಾರ ತೆಗೆದುಕೊಂಡು ಹೋಗುತ್ತಿದ್ದು, ಅದು ಸಮಯ ಉಳಿಸುತ್ತದೆ ಮತ್ತು ತನ್ನ ಪಕ್ಷದ ಕೆಲಸ ಮಾಡಲು ಅನುವು ಮಾಡಿಕೊಡುತ್ತದೆ ಎಂದು ಭಾವಿಸುತ್ತಿದ್ದರು.

ಜಮಾಅತ್‌ನ ನಿಧಿಯನ್ನು ರಕ್ಷಿಸುವಲ್ಲಿ ಮತ್ತು ಖರ್ಚು ಮಾಡುವಲ್ಲಿ ಅವರು ಬಹಳ ಜಾಗರೂಕರಾಗಿದ್ದರು. ವಾಸ್ತವವಾಗಿ, ಅವರು ಅಲ್ಲಿನ ಕಾರ್ಯಕರ್ತನಾಗಿದ್ದ ಸ್ನೇಹಿತನಿಗೆ ಅವರು ಹೇಳಿದರು: ಜಮಾಅತಿನಲ್ಲಿ ಸಮೃದ್ಧಿ ಮೂಡಿದೆ, ಆದರೆ ಕೆಲವರು ನೋವಿನಿಂದ ಖರ್ಚು ಮಾಡಬೇಕಾದ ಹಣವನ್ನು ಖರ್ಚು ಮಾಡುತ್ತಿಲ್ಲ. ಅವರು ಅನಗತ್ಯವಾಗಿ ಖರ್ಚು ಮಾಡುತ್ತಿದ್ದಾರೆ. ಜಮಾಅತಿನ ನಿಧಿಯನ್ನು ಕೆಲವೊಮ್ಮೆ ಬಳಸಬೇಕಾದ ರೀತಿಯಲ್ಲಿ ಬಳಸಲಾಗುತ್ತಿಲ್ಲ ಎಂದು ವಯಸ್ಸಾದ ಜನರು ಸಹ ತುಂಬಾ ನೋವನ್ನು ಅನುಭವಿಸುತ್ತಾರೆ. ಎಲ್ಲಾ ಹುದ್ದೆದಾರರು ಸಹ ಇದನ್ನು ಅವಲೋಕಿಸಬೇಕು.

ಮೃತರು ಯಾವಾಗಲೂ ಜಮಾಅತಿನ ಸೇವೆಯಲ್ಲಿ ನಿರತರಾಗಿರುವುದನ್ನು ನೋಡಿದ್ದಾಗಿ ಅವರ ಪುತ್ರಿ ಸಾರಾ ಹೇಳುತ್ತಾರೆ. ಅವರು ನಮ್ಮ ಮನೆಯಲ್ಲಿ ಮೇಜಿನ ಮುಂದೆ ಒಂದು ದೊಡ್ಡ ಫಲಕವಿತ್ತು, ಅದರಲ್ಲಿ ಹೀಗಿತ್ತು:

What have i done Today in the service of my jama'at ನನ್ನ ಜಮಾಅತ್ ಸೇವೆಯಲ್ಲಿ ನಾನು ಇಂದು ಏನು ಮಾಡಿದ್ದೇನೆ? ಮತ್ತು ಮೃತರು ಪ್ರತಿದಿನವೂ ನಿಜವಾದ ಬಣ್ಣಗಳಲ್ಲಿ ಜಮಾಅತ್ ಸೇವೆಯಲ್ಲಿ ತೊಡಗಿಸಿಕೊಂಡರು.

ಅವರ ಸಹೋದರ ಮಲಿಕ್ ಮುಬಾರಕ್ ಸಾಹಿಬ್ ಹೇಳುತ್ತಾರೆ: ಬೈತುಲ್-ರೆಹಮಾನ್ ನಿರ್ಮಾಣ ಪೂರ್ಣಗೊಂಡ ನಂತರ, ಅವರು ಪ್ರತಿದಿನ ಕೆಲಸದಿಂದ ನೇರವಾಗಿ ಮಸೀದಿಗೆ ಬರುತ್ತಿದ್ದರು ಮತ್ತು ತಡರಾತ್ರಿಯವರೆಗೆ ಜಮಾಅತಿನ ಕೆಲಸದಲ್ಲಿ ನಿರತರಾಗುತ್ತಿದ್ದರು ಮತ್ತು ಅವರ ಜವಾಬ್ದಾರಿಗಳು ಗಮನಾರ್ಹವಾಗಿ ಹೆಚ್ಚಾಗುತ್ತಿದ್ದವು. ವಿಶೇಷವಾಗಿ ಮಜ್ಲಿಸ್-ಎ-ಶುರಾದ ದಿನಗಳು. ನಾನು ಹೋಗುತ್ತಿದ್ದೆ. ಅನೇಕ ವಾರಗಳು ಜಮಾಅತಿನ ಕೆಲಸದಲ್ಲಿ ಬಹಳ ತಡವಾಗಿ ಕಳೆಯಬೇಕಾಗಿತ್ತು.

ಅವರ ಪರಿಚಯಸ್ಥರು ಮತ್ತು ಅನೇಕ ಜನರು ಇದನ್ನು ಬರೆದಿದ್ದಾರೆ, ನಿಮಗೆ ಜಮಾಅತ್ ವ್ಯವಸ್ಥೆಯ ಬಗ್ಗೆ ಅಪಾರ ಗೌರವ ಮತ್ತು ಮೆಚ್ಚುಗೆ ಇತ್ತು ಮತ್ತು ನಿಮ್ಮ ಮಕ್ಕಳಲ್ಲೂ ಜಮಾಅತ್ ಬಗ್ಗೆ ಪ್ರೀತಿಯನ್ನು ತುಂಬಲು ಪ್ರಯತ್ನಿಸಿದರು. ಅವರು ಸ್ವತಃ ಧರ್ಮನಿಷ್ಠೆಯ ಮಾರ್ಗವನ್ನು ಅನುಸರಿಸುತ್ತಿದ್ದರು ಮತ್ತು ತಮ್ಮ ಮಕ್ಕಳಿಗೂ ಅದನ್ನೇ ಮಾಡಲು ಸಲಹೆ ನೀಡುತ್ತಿದ್ದರು. ನಿಮ್ಮ ಹತ್ತಿರದ ಮತ್ತು ದೂರದ ಸಂಬಂಧಿಕರೊಂದಿಗಿನ ನಿಮ್ಮ ಬಲವಾದ ಬಾಂಧವ್ಯವು ನಿಮ್ಮ ದೊಡ್ಡ ಗುಣವಾಗಿತ್ತು. ಅವರು ಯಾವಾಗಲೂ ಅಗತ್ಯವಿರುವವರಿಗೆ ಸಹಾಯ ಮಾಡುತ್ತಿದ್ದರು ಮತ್ತು ರೋಗಿಗಳನ್ನು ಮೊದಲು ಭೇಟಿ ಮಾಡುವವರಾಗಿದ್ದರು. ಅವರು ತುಂಬಾ ಶ್ರಮಶೀಲ, ವಿನಮ್ರ, ಅತಿಥಿ ಸತ್ಕಾರ, ಬೌದ್ಧಿಕವಾಗಿ ಪ್ರತಿಭಾನ್ವಿತ, ಪ್ರಾಮಾಣಿಕ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ಅವರು ಪ್ರತಿಯೊಂದು ಕೆಲಸವನ್ನು ಬಹಳ ವಿವರ ಮತ್ತು ನಿಖರತೆಯಿಂದ ಮಾಡಿದವರು ಮತ್ತು ತಮ್ಮ ಜವಾಬ್ದಾರಿಗಳನ್ನು ತಿಳುವಳಿಕೆಯಿಂದ ಪೂರೈಸಿದವರು. ಅವರು ಮಸೀದಿಯಲ್ಲಿ ಸಾಧ್ಯವಾದಷ್ಟು ಸಮಯ ಕಳೆಯಲು ಪ್ರಯತ್ನಿಸಿದರು.

ಸರ್ವಶಕ್ತನಾದ ಅಲ್ಲಾಹನು ಅವರನ್ನು ಕ್ಷಮಿಸಲಿ, ಕರುಣೆ ತೋರಿಸಲಿ ಮತ್ತು ಅವರ ಶ್ರೇಣಿಯನ್ನು ಉನ್ನತೀಕರಿಸಲಿ. ಅವರ ಮಕ್ಕಳು ಮತ್ತು ಪೀಳಿಗೆಗಳು ಸಹ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲು ಅನುಗ್ರಹಿಸಲಿ.

ಮುಂದಿನ ಉಲ್ಲೇಖವು ಗೌರವಾನ್ವಿತ ಶಬ್ಬೀರ್ ಅಹ್ಮದ್ ಲೋಧಿ ಸಾಹಿಬ್ ಅವರದ್ದಾಗಿದೆ, ಅವರು ದಿವಂಗತ ಮಿಯಾನ್ ಮುಹಮ್ಮದ್ ಶಫಿ ಸಾಹಿಬ್ ಅವರ ಪುತ್ರ ಮತ್ತು ನಮ್ಮ ಮುರಬ್ಬಿಯರಲ್ಲಿ ಒಬ್ಬರಾದ ಫಾರೂಖ್ ಶಬ್ಬೀರ್ ಲೋಧಿ ಅವರ ತಂದೆಯಾಗಿದ್ದರು. ಅವರು ಇತ್ತೀಚೆಗೆ ತಮ್ಮ ಅರವತ್ತೆರಡು ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್-**

ವರ ಕುಟುಂಬದಲ್ಲಿ ಅಹ್ಮದೀಯತ್ ಅವರ ಅಜ್ಜ ಲೋಧಿ ನಂಗಲ್‌ನ ಮಿಯಾನ್ ಶಹಾಬುದ್ದೀನ್ ಸಾಹಿಬ್ ಅವರ ಮೂಲಕ ಪರಿಚಯವಾಯಿತು. ಖಲೀಫತುಲ್ ಮಸೀಹ್ ಸಾನಿ(ರ) ಅವರ ಕಾಲಘಟ್ಟದ ಆರಂಭದಲ್ಲಿಯೇ ಬೈಅತ್ ಮಾಡುವ ಮೂಲಕ ಅವರು ಜಮಾಅತ್ ಸೇರಲು ಸಾಧ್ಯವಾಯಿತು. ಮೃತರು ಮೂಸಿಯಾಗಿದ್ದರು. ಹಿರಿಯ ಪುತ್ರ ಫಾರೂಖ್ ಶಬ್ಬೀರ್ ಲೋಧಿ ಲೈಬೀರಿಯಾದಲ್ಲಿ ಮಿಷನರಿಯಾಗಿದ್ದು, ಕಳೆದ ಹಲವಾರು ವರ್ಷಗಳಿಂದ ಅಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಸಕ್ರಿಯ ಕರ್ತವ್ಯದಿಂದಾಗಿ, ಅವರು ತಮ್ಮ ತಂದೆಯ ಜನಾಝದಲ್ಲಿ ಮತ್ತು ಯದ್‌ಫೀನ್‌ನಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಫರ್ರುಖ್ ಶಬ್ಬಿರ್ ಲೋಧಿ ಮುರಬ್ಬಿ ಸಿಲ್‌ಸಿಲಾ ತಮ್ಮ ತಂದೆಯ ಬಗ್ಗೆ ಹೀಗೆ ಬರೆಯುತ್ತಾರೆ: ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಅವರು ನಿಯಮಿತವಾಗಿ ತಹಜ್ಜುದ್ ನಮಾಝ್ ನಿರ್ವಹಿಸುವವರಾಗಿದ್ದರು, ಐದು ಹೊತ್ತಿನ ನಮಾಝನ್ನು ನಿಯಮಿತವಾಗಿ ನಿರ್ವಹಿಸುವವರಾಗಿದ್ದರು, ಸಾಧ್ಯವಾದಷ್ಟು ಬಾಜಮಾಅತ್ ನಮಾಝನ್ನು ನಿರ್ವಹುವವರಾಗಿದ್ದರು, ಧರ್ಮವನ್ನು ಲೋಕಕ್ಕೆ ಆದ್ಯತೆ ನೀಡುತ್ತಿದ್ದರು, ಪವಿತ್ರ ಖುರ್‌ಆನ್ ಪಠಿಸುವವರು ಮತ್ತು ಜಮಾಅತಿನ ಸಾಹಿತ್ಯವನ್ನು ಅಧ್ಯಾಯನ ಮಾಡುವವರಾಗಿದ್ದರು. ಖಿಲಾಫತ್‌ನೊಂದಿಗೆ ಅಪಾರ ಪ್ರೀತಿಯನ್ನು ಹೊಂದಿದ್ದರು. ಖುತ್‌ಬ ಜುಮುಅಗಳನ್ನು ನಿಯಮಿತವಾಗಿ ಆಲಿಸುವವರು, ಪ್ರತಿಯೊಂದು ಅಭಿಯಾನಗಳಲ್ಲಿ ಪ್ರತಿಕ್ರಿಯಿಸುವವರು, ಕಡ್ಡಾಯ ಉಪವಾಸಗಳನ್ನು ನಿಯಮಿತವಾಗಿ ಆಚರಿಸುವವರು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವವರು, ಸಮಾಜ ಸೇವೆಗೆ ಸದಾ ಸಿದ್ಧರಿರುವವರು, ವಾಖಿಫೀನೆ ಝಿಂದಗಿಯವರ ಬಗ್ಗೆ ವಿಶೇಷ ಪ್ರೀತಿ ಹೊಂದಿರುವವರು. ಹುದ್ದೆದಾರರನ್ನು ಗೌರವಿಸುವವರು, ಜಮಾಅತ್‌ನ ವ್ಯವಸ್ಥೆಯ ಬಗ್ಗೆ ಹೆಮ್ಮೆ ಪಡುವವರು, ಪ್ರೀತಿಯಿಂದ ತರಬೇತಿ ನೀಡುವವರು, ಕ್ಷಮಿಸುವವರು, ಕಷ್ಟಗಳಲ್ಲಿ ತಾಳ್ಮೆ ಮತ್ತು ಧೈರ್ಯವನ್ನು ತೋರಿಸುವವರು, ಅಲ್ಲಾಹನಲ್ಲಿ ಸಂಪೂರ್ಣ ನಂಬಿಕೆ ಇಟ್ಟವರು, ತಮ್ಮ ಕಷ್ಟಗಳನ್ನು ನಮ್ರತೆಯಿಂದ ಅಲ್ಲಾಹನಿಗೆ ಸಲ್ಲಿಸುವವರು. ನಮ್ರತೆಯಿಂದ ಮಾತನಾಡುವವರು, ಇತರರಿಗೆ ತಮ್ಮ ಕಷ್ಟಗಳಲ್ಲಿ ಸಾಧ್ಯವಿರುವ ಎಲ್ಲ ರೀತಿಯಲ್ಲಿ ಸಹಾಯ ಮಾಡುವವರು, ಯಾರ ಮೇಲೂ ತಮ್ಮ ಹೃದಯದಲ್ಲಿ ಯಾವುದೇ ದ್ವೇಷವನ್ನು ಇಟ್ಟುಕೊಳ್ಳದವರು, ಯಾವುದೇ ಯಶಸ್ಸನ್ನು ಅಲ್ಲಾಹನ ವಿಶೇಷ ಅನುಗ್ರಹ ಎಂದು ಪರಿಗಣಿಸುವವರು, ನ್ಯಾಯವಂತರು, ಮುಕ್ತ ಮನಸ್ಸಿನವರು, ಆತಿಥ್ಯ ವಹಿಸುವವರು ಮತ್ತು ಅವರು ಉದಾರ ಆರ್ಥಿಕ ಬೆಂಬಲಿಗರಾಗಿದ್ದರು. ನಿಮ್ಮ ಸಿಬ್ಬಂದಿಯೊಂದಿಗೆ ಸೌಜನ್ಯದಿಂದ ವರ್ತಿಸುವವರು. ಇವು ಕೇವಲ ಅವರ ಪುತ್ರ ಮಾತುಗಳಲ್ಲ; ಜನರು ಇದರ ಬಗ್ಗೆ ಬರೆದಿದ್ದಾರೆ. ಅವರು ಒಳ್ಳೆಯ ಮತ್ತು ನೀತಿವಂತ ವ್ಯಕ್ತಿಯಾಗಿದ್ದರು.

ಗುಜ್ರಾನ್‌ವಾಲಾದಲ್ಲಿ ಒಂದು ಸಮಯದಲ್ಲಿ, ಕಲಿಮಾವನ್ನು ಅಳಿಸುವ ಚಳುವಳಿ ಪ್ರಾರಂಭವಾದಾಗ, ನಮ್ಮ ಕಲಿಮಾವನ್ನು ಮಸೀದಿಯಿಂದ ಅಳಿಸಿಹಾಕಲಾಯಿತು ಮತ್ತು ಪ್ರತಿ ಬಾರಿ ಕಲಿಮಾವನ್ನು ಅಳಿಸಿದಾಗಲೂ ಅದನ್ನು ಬರೆಯಬೇಕೆಂದು ಅವರಿಗೆ ಹೇಳಲಾಯಿತು. ಹಾಗಾಗಿ ಅದನ್ನು ಅಳಿಸಿದಾಗ, ಅವರು ತಕ್ಷಣ ಹೋಗಿ ಪದವನ್ನು ಪುನಃ ಬರೆಯುತ್ತಿದ್ದರು. ಆ ಸಮಯದಲ್ಲಿ ಅವರು ಬಹಳ ಧೈರ್ಯದಿಂದ ಕೆಲಸ ಮಾಡಿದರು. ನಂತರ ಅವರು ಬರೆಯುತ್ತಾರೆ, ಯಾರಾದರೂ ಅವರಿಗೆ ನೋವುಂಟುಮಾಡಿದರೂ, ಅವರು ಎಂದಿಗೂ ಪ್ರತೀಕಾರ ತೀರಿಸಿಕೊಳ್ಳುವುದಿಲ್ಲ, ಆದರೆ ತಾಳ್ಮೆ ಮತ್ತು ಧೈರ್ಯವನ್ನು ತೋರಿಸುತ್ತಿದ್ದರು ಮತ್ತು ತಮ್ಮ ವ್ಯವಹಾರಗಳನ್ನು ಸರ್ವಶಕ್ತನಾದ ಅಲ್ಲಾಹನಿಗೆ ವಹಿಸುತ್ತಿದ್ದರು ಎಂಬುದು ಅವರ ಅತ್ಯಂತ ಮಹೋನ್ನತ ಗುಣಗಳಲ್ಲಿ ಒಂದಾಗಿದೆ. ಅವರು ತಮ್ಮ ಪ್ರಾರ್ಥನೆಗಳ ಮೂಲಕ ತಮ್ಮ ಕಷ್ಟಗಳನ್ನು ಎದುರಿಸುತ್ತಿದ್ದರು.

ಅವರು ಬೋಧಿಸುತ್ತಿದ್ದ ಶಾಲೆಯಲ್ಲಿ, ಅವರ ಸಹೋದ್ಯೋಗಿಗಳು ತುಂಬಾ ವಿರೋಧಿಸುತ್ತಿದ್ದರು. ವಾಸ್ತವವಾಗಿ, ಅವರ ಕೆಲವು ಸಹೋದ್ಯೋಗಿಗಳು ಒಬ್ಬ ವಿದ್ಯಾರ್ಥಿಗೆ ನಾವು ನಿಮಗೆ ಬಹುಮಾನ ನೀಡುತ್ತೇವೆ ಎಂದು ಆ ವಿದ್ಯಾರ್ಥಿಗೆ ಗುಂಡು ಹಾರಿಸಲು ಹೇಳಿದರು. ಆದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಅವರನ್ನು ಯಾವಾಗಲೂ ಸುರಕ್ಷಿತವಾಗಿರಿಸಿದನು ಮತ್ತು ಅವರು ಅಲ್ಲಿ ಬಹಳ ಧೈರ್ಯದಿಂದ ಕೆಲಸ ಮಾಡುವುದನ್ನು ಮುಂದುವರೆಸಿದರು. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ. ಶ್ರೇಣಿಗಳನ್ನು ಹೆಚ್ಚಿಸಿ. ಅವರ ಮಕ್ಕಳಿಗೂ ರಕ್ಷಣೆ ಮತ್ತು ಬೆಂಬಲ ಸಿಗಲಿ. ನಮಾಝಿನ ನಂತರ ನಮಾಝೆ ಜನಾಝಗಳನ್ನು ಸಹ ನಿರ್ವಹಿಸಲಾಗುವುದು.

**(ಅಲ್-ಫಝಲ್ ಇಂಟರ್ನ್ಯಾಷನಲ್, ಜನವರಿ 3, 2025, ಪುಟಗಳು 2-6)**

-------------****-------------

# ಕ್ಷುಲ್ಲಕ ಕ್ಷುಲ್ಲಕ ವಿಷಯಗಳಿಗೆ ವಿಚ್ಛೇದನೆ (ಖುಲ ಮತ್ತು ತಲಾಖ್) ಪಡೆಯುವುದು ಅತ್ಯಂತ ಭಯಾನಕ ಮತ್ತು ಅನಪೇಕ್ಷಿತ ಮಾರ್ಗವಾಗಿದೆ.

(ಜೂನ್ 21, 1946)

ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:

"ಮನುಷ್ಯನ ಜೀವನದಲ್ಲಿ ಪತಿ ಮತ್ತು ಪತ್ನಿಯ ಅಂಶವು ಮುಖ್ಯವಾಗಿರುತ್ತದೆ. ಲೌಕಿಕ ಜೀವನಕ್ಕಾಗಿ ಮನುಷ್ಯನಿಗೆ ಅಗತ್ಯವಿರುವ ಮತ್ತು ಯಾವುದರ ಮೂಲಕ ಶಾಂತಿ ಹಾಗೂ ನೆಮ್ಮದಿ ಪಡೆಯಬಹುದು ಅದು ಪತಿ ಮತ್ತು ಪತ್ನಿಯ ಸಂಬಂಧಗಳ ಮೇಲೆ ನಿರ್ಭರವಾಗಿರುತ್ತದೆ. ದಾಂಪತ್ತಿಕ ಸಂಬಂಧಗಳಿಂದ ಉಂಟಾಗುವ ನೆಮ್ಮದಿ ಮತ್ತು ಶಾಂತಿಯು ಇತರ ಯಾವುದೇ ಮೂಲದಿಂದ ದೊರೆಯಲು ಸಾಧ್ಯವಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಹನು, ಈ ಜೀವಿಗಳ ಪರಸ್ಪರ ಶಾಂತಿ ಹಾಗೂ ನೆಮ್ಮದಿಗೆ ಮೂಲವೆಂದು ಪರಿಗಣಿಸಿದೆ. ಅದೇ ರೀತಿಯಲ್ಲಿ ಬೈಬಲ್‌ನಲ್ಲಿಯೂ ಹಾಗೆಯೇ ಆದಮ್ ಅಲೈಹಿಸ್ಸಲಾಮರಿರಾಗಿ ಹವ್ವಾಳನ್ನು ಸೃಷ್ಟಿಸಿದೆನೆಂದು ಬರುತ್ತದೆ. ಅದುವೆ ಆದಮನಿಗೆ ಶಾಂತಿ ನೆಮ್ಮದಿಗೆ ಕಾರಣವಾಯಿತು. ಅಂದರೆ ಹವ್ವವಿಲ್ಲದೆ ಆದಮನಿಗೆ ಬೇರೆ ರೀತಿಯ ಸೌಕರ್ಯ ಮತ್ತು ವಿಶ್ರಾಂತಿ ಇರಲಿಲ್ಲ. ಆದರೆ ಅವರಿಬ್ಬರೇ ಪರಸ್ಪರ ಶಾಂತಿಗೆ ಕಾರಣಗಳಾಗಿದ್ದರು. ಆದರೆ ಈ ಎರಡು ಅಸ್ತಿತ್ವಗಳು ಕೆಲವೊಮ್ಮೆ ಪರಸ್ಪರ ಜಗಳವಾಗಾಲು ಕಾರಣವಾಗುತ್ತದೆ. ಆದ್ದರಿಂದ ನೆಮ್ಮದಿಗೆ ಭಂಗಉಂಟಾಗುತ್ತದೆ. ಅಂದರೆ ಗಂಡನು ಪತ್ನಿಗಾಗಿ ಮತ್ತು ಪತ್ನಿಯು ಗಂಡನಿಗಾಗಿ ಹೆಚ್ಚು ಪೀಡನೆಗೆ ಕಾರಣವಾಗುತ್ತದೆ. ಸಾವಿರಾರು ಇಂತಹ ಗಂಡಂದಿರುಗಳು ತನ್ನ ಪತ್ನಿಯರಿಗಾಗಿ ಅತಿ ಹೆಚ್ಚು ನೋವಿಗೆ ಕಾರಣವಾಗುತ್ತದೆ. ಮತ್ತು ಇಂತಹ ಸಾವಿರಾರು ಪತ್ನಿಗಳಿದ್ದಾರೆ. ಅವರು ತಮ್ಮ ಗಂಡಂದಿರಿಗಾಗಿ ಅತಿ ಹೆಚ್ಚು ನೋವಿಗೆ ಕಾರಣವಾಗುತ್ತವೆ. ಇಸ್ಲಾಂ ಧರ್ಮವು ಇಂತಹ ಸನ್ನಿವೇಶಗಳಲ್ಲಿ ಅತ್ಯುತ್ತಮ ರೀತಿಯ ಮಾರ್ಗದರ್ಶನ ನೀಡಿದೆ. ವಾಸ್ತವದಲ್ಲಿ ಇಂತಹ ಉಪದೇಶಗಳಿರುವಾಗ ನಮಗೆ ಭಯಪಡುವ ಯಾವ ಅವಶ್ಯಕತೆಯೂ ಇರುವುದಿಲ್ಲ. ಆದರೆ ಪ್ರಶ್ನೆಯಿರುವುದೇನೆಂದರೆ ಇಸ್ಲಾಮಿನ ಈ ಶಿಕ್ಷಣದನ್ವಯ ನಡೆಯಲು ಎಷ್ಟು ಜನ ಸಿದ್ಧರಿದ್ದಾರೆ? ಮುಸ್ಲಿಮೇತರರಂತೂ ಮೊದಲೇ ಆಕ್ಷೇಪ ಎತ್ತುವವರಾಗಿದ್ದಾರೆ, ಇಸ್ಲಾಮಿನ ಶಿಕ್ಷಣವನ್ನು ನಂಬುವ ಮುಸ್ಲಿಮರೇ ಇಸ್ಲಾಮಿನ ಶಿಕ್ಷಣದಿಂದ ತುಂಬಾ ದೂರವಾಗಿದ್ದಾರೆ ಮತ್ತು ಖುರ್‌ಆನ್ ಶಿಕ್ಷಣದತ್ತ ಬರಲು ಹಿಂದೇಟು ಹಾಕುತ್ತಾರೆ. ಅಲ್ಲದೆ ಇತರ ನ್ಯಾಯಾಲಯಗಳಿಂದ ತನ್ನ ಸಮಸ್ಯೆಗೆ ಪರಿಹಾರ ಹುಡುಕಬಯಸುತ್ತಾರೆ. ಗಂಡ ಹೆಂಡತಿಯರ ಮಧ್ಯೆ ಜಗಳವಾದರೆ ಅದನ್ನು ಪವಿತ್ರ ಖುರ್‌ಆನ್ ಶಿಕ್ಷಣದನ್ವಯ ಬಗೆಹರಿಸಿಕೊಳ್ಳಿ ಎಂದು ಹೇಳಿದರೆ, ಅವರ ಸಂಬಂಧಿಸಿದ ಮಧ್ಯದಲ್ಲಿ ಬಂದು ಖುರ್‌ಆನ್ ಪ್ರಕಾರ ನಡೆದದ್ದಕ್ಕೆ ಜೀವನ ಸಾಗಬಹುದೆ, ನಾವು ಅದರಿಂದ ಹೇಗೆ ಬಗೆಹರಿಸಿಕೊಳ್ಳಲು ಸಾಧ್ಯ. ಅಂದಹಾಗೆ ಅವರ ದೃಷ್ಟಿಯಲ್ಲಿ ಪವಿತ್ರ ಖುರ್‌ಆನ್ ಅನ್ನುವುದು ಒಂದು ಕಾದಂಬರಿ ಗ್ರಂಥವಿದ್ದಂತೆ ಅದನ್ನು ಗ್ರಂಥಾಲಯದದಲ್ಲಿ ಶೃಂಗಾರ ಇಟ್ಟಂತೆ ಇಡಬೇಕೆ ಹೊರತು ಅದರಂತೆ ನಡೆದುಕೊಳ್ಳಲು ಅಲ್ಲ. ಯಾವ ವ್ಯಕ್ತಿಗೆ ಪವಿತ್ರ ಖುರ್‌ಆನ್‌ನ ಬೋಧನೆಗಳ ಪ್ರಕಾರ ನಡೆದುಕೊಳ್ಳಲು ಆಗುವುದಿಲ್ಲವೋ ಅಂತಹ ವ್ಯಕ್ತಿ ಇಸ್ಲಾಮಿನಲ್ಲಿ ಏಕೆ ಸೇರಿರುತ್ತಾನೆ? ಇಂತಹ ವ್ಯಕ್ತಿಯೊಬ್ಬನನ್ನು ಇಸ್ಲಾಮಿನ ಶಿಕ್ಷಣವನ್ನು ಬಿಟ್ಟು ಬೇರೆ ಯಾವುದೇ ಧರ್ಮ ಅದರಂತೆ ನಡೆದುಕೊಳ್ಳಲು ಆಗುವಂತಿದ್ದರೆ ಸೇರಬಹುದು. ಕನಿಷ್ಠಮಟ್ಟ ಅವನು ತನ್ನನ್ನು ಸ್ವತಂತ್ರನೆಂದು ಭಾವಿಸಿಕೊಳ್ಳಬಹುದು. ಇಸ್ಲಾಮಿನ ಶಿಕ್ಷಣ ಹಿಡಿಸಿಲ್ಲ ಎಂದಾದರೆ ತನ್ನ ಆತ್ಮನನ್ನು ಏಕೆ ವಂಚಿಸಬೇಕು. ಅದನ್ನು ಏಕೆ ತ್ಯಜಿಸುವುದಿಲ್ಲ?

ನಾನು ನನ್ನ ಜಮಾಅತ್‌ನ ಗಮನ ಇತ್ತ ಸೆಳೆಯಬಯಸುತ್ತೇನೆ. ಅದೇನೆಂದರೆ ನಮ್ಮ ಜಮಾಅತ್‌ನಲ್ಲಿ ಪತಿ ಪತ್ನಿ ಮಧ್ಯೆ ಮೊದಲಿಗಿಂತ ಇಂದು ಹೆಚ್ಚು ಕಾದಾಟ ಕೇಳಿಬರುತ್ತಿದೆ. ಎಲ್ಲಿಯವರೆಗೆ ಜಗಳವಾಡುವ ಪ್ರಶ್ನೆಯಿದೆ, ಅದೇನು ತಪ್ಪಲ್ಲ. ಏಕೆಂದರೆ ಅದು ಮನುಷ್ಯನ ಸಹಜಗುಣವಾಗಿದೆ, ಪತಿ ಪತ್ನಿಯ ಮಧ್ಯೆ ವೈಮನಸ್ಸು ಬರುತ್ತಾ ಇರುತ್ತವೆ, ಆದರೆ ಜಗಳ ಆದ ನಂತರ ಇಸ್ಲಾಮಿನ ಶಿಕ್ಷಣವನ್ನು ಕಡೆಗಣಿಸುವುದು ತುಂಬಾ ವಿಪರ್ಯಾಸದ ವಿಷಯವಾಗಿದೆ. ನಾನು ನೋಡುತ್ತಿದ್ದೇನೆ, ಹೆಚ್ಚಿನವರು ಇಸ್ಲಾಮಿನ ಶಿಕ್ಷಣವನ್ನು ಲೆಕ್ಕಿಸದೆ ಹಿಂಸೆಯ ಮಟ್ಟಕ್ಕೆ ತಲುಪುತ್ತಾರೆ. ಈ ಅವಸ್ಥೆ ನಿಜಕ್ಕೂ ನೋವು ಕೊಡುವಂತಹದ್ದಾಗಿದೆ. ನಮ್ಮ ಮುಂದೆ ಹಝ್ರತ್ ಪೈಗಂಬರ್(ಸ) ಅವರ ಜಿವನ ಶೈಲಿ ಮಾದರಿ ಇದೆ. ನಾವು ನೋಡುತ್ತೇವೆ. ಹಝ್ರತ್ ಪೈಗಂಬರ್(ಸ) ಅವರಿಗೆ ಕೇವಲ ಓರ್ವ ಪತಿ ಮಾತ್ರ ಇರಲಿಲ್ಲ. ಬದಲಿಗೆ ಓರ್ವ ಪ್ರವಾದಿಯು ಆಗಿದ್ದರು. ಅವರು ಸಂತರು ಆಗಿದ್ದರು. ಮತ್ತು ಅವರು ನಾಯಕರಾಗಿದ್ದರು. ಆದರೂ ಸಹ ಈ ವಿಷಯದಲ್ಲಿ ಅವರ ನಡತೆ ಹೇಗಿತ್ತೆಂದರೆ, ಒಮ್ಮೆ ಹಝ್ರತ್ ಪೈಗಂಬರ್(ಸ)ರು ತಮ್ಮ ಓರ್ವ ಪತ್ನಿಗೆ ಒಂದು ರಹಸ್ಯದ ಮಾತನ್ನು ಹೇಳಿದರು, ಮತ್ತು ಯಾರ ಮುಂದೆ ಹೇಳಬಾರದು ಎಂಬ ತಾಕೀತು ಮಾಡಿದರು. ಆದರೆ ಅವರು ತನ್ನ ಗೆಳತಿಯರ ಮುಂದೆ ಅದರಲ್ಲಿ ಹಝ್ರತ್ ಪೈಗಂಬರ್(ಸ) ರ ಇತರ ಪತ್ನಿಯರೂ ಇದ್ದರು, ಈ ಮಾತನ್ನು ಹೇಳಿದರು. ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ಈ ವಿಷಯವನ್ನು ಬಹಿರಂಗಪಡಿಸಿದನು. ನಿನ್ನ ಪತ್ನಿಯು ನೀನು ಹೇಳಿದ ಮಾತನ್ನು ಇತರ ಪತ್ನಿಯರ ಮುಂದೆ ಪ್ರಸ್ತಾಪಿಸಿದ್ದಾರೆ ಎಂದು ಆಗ ಹಝ್ರತ್ ಪೈಗಂಬರ್(ಸ) ಅವರನ್ನು ಎಚ್ಚರಿಸಲು ಮನೆಗೆ ಹೋಗದೆ ಮಸೀದಿಯಲ್ಲೆ ಇರಲು ತೀರ್ಮಾನ ಕೈಗೊಂಡರು. ಹಝ್ರತ್ ಪೈಗಂಬರ್(ಸ) ಮಸೀದಿಯಲ್ಲಿ ಅವರಿಗಾಗಿ ಒಂದು ಡೇರೆ ಹಾಕಲು ಹೇಳಿದರು. ಮತ್ತು ಅವರು(ಸ) ಅಲ್ಲೇ ಇರತೊಡಗಿದರು. ಮಕ್ಕಾದ ನಿವಾಸಿಗಳು ತಮ್ಮ ಪತ್ನಿಯರೊಡನೆ ಸೌಜನ್ಯದ ವರ್ತನೆ ಮಾಡುತ್ತಿರಲಿಲ್ಲ. ಬದಲಿಗೆ ಪಂಜಾಬಿ ಸ್ತ್ರೀಯರ ಹಾಗೆ ಅವರು ಒಂದೇ ಮಾನದಂಡ ನೆಚ್ಚಿಕೊಂಡಿದ್ರು, ಅದೇನೆಂದರೆ ಪತ್ನಿಯರನ್ನು ಬಡಿಗೆಯಿಂದ ಹೊಡೆಯುವುದೇ ಚಿಕಿತ್ಸೆ ಎಂದು ಭಾವಿಸುತ್ತಿದ್ದರು. ಅದೇ ರೀತಿ ಮಕ್ಕದವರು ತಮ್ಮ ಪತ್ನಿಯರೊಡನೆ ಕಠಿಣವಾಗಿ ವರ್ತಿಸುತ್ತಿದ್ದರು. ಅವರ ಪತ್ನಿಯರಿಗೆ ಗಂಡಂದಿರ ಮುಂದೆ ಮಾತನಾಡುವ ಅಥವಾ ಅವರಿಗೆ ಸಲಹೆ ಸೂಚನೆ ನೀಡುವ ಧೈರ್ಯ ಇರುತ್ತಿರಲಿಲ್ಲ. ಮದೀನದಲ್ಲಿ ಮಕ್ಕಕ್ಕಿಂತ ಒಂದಿಷ್ಟು ಸ್ತ್ರೀಯರಿಗೆ ಸ್ವಾತಂತ್ರ್ಯವಿತ್ತು. ಈ ಸ್ವಾತಂತ್ರ್ಯಕ್ಕಿಂತ ಹಝ್ರತ್ ಪೈಗಂಬರ್(ಸ) ಪತ್ನಿಯರಿಗೆ ನೀಡಿದ ಸ್ವಾತಂತ್ರ್ಯವು ಎಷ್ಟೋ ಪಟ್ಟು ಹೆಚ್ಚಾಗಿತ್ತು. ಅಂತೂ ಮದೀನಾದ ಮಹಿಳೆಯರು ಒಮ್ಮೊಮ್ಮೆಯಾದರೂ ತನ್ನ ಗಂಡಂದಿರ ಮುಂದೆ ಮಾತನಾಡುತ್ತಿದ್ದರು. ಆದರೆ ಮಕ್ಕದವರಲ್ಲಿ ಇನ್ನು ಅದೇ ಕಠಿಣತೆ ಬಾಕಿ ಇತ್ತು. ಹಝ್ರತ್ ಪೈಗಂಬರ್(ಸ)ರವರು ಮಸೀದಿಯಲ್ಲಿ ಡೇರೆ ಹೂಡಿಕೊಂಡಾಗ, ಸಹಾಬರಲ್ಲಿ ಅವರು(ಸ) ತಮ್ಮ ಪತ್ನಿಯವರಿಗೆ "ತಲಾಖ್" ನೀಡಿದ್ದಾರೆ ಎಂಬ ಪಿಸುಮಾತುಗಳು ಪ್ರಾರಂಭವಾದವು. ಅಂದಹಾಗೆ ಓರ್ವ ಸಹಾಬಿ ಗಾಬರಿಗೊಂಡು ಹಝ್ರತ್ ಉಮರ್(ರ) ರವರ ಬಳಿ ಬಂದರು. ಹಝ್ರತ್ ಉಮರ್ ಮದೀನದಿಂದ ಎರಡು ಮೂರು ಮೈಲಿನಷ್ಟು ದೂರದಲ್ಲಿ ಒಂದು ಊರಿನಲ್ಲಿ ಇರುತ್ತಿದ್ದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಆ ದಿನಗಳಲ್ಲಿ ನಮ್ಮ ಜೀವನೋಪಾಯಗಳಲ್ಲಿ ಬಹಳ ಕಷ್ಟಗಳಿದ್ದವು. ಆದ್ದರಿಂದ ನಮಗೆ ದಿನಾಲೂ ಹಝ್ರತ್ ಪೈಗಂಬರ್(ಸ) ರವರ ಸಭೆಗೆ ಹಾಜರಾಗಲು ಆಗುತ್ತಿರಲಿಲ್ಲ. ಆದ್ದರಿಂದ ನಾವು ಪಾಳಿಯ ರೂಢಿ ಹಾಕಿಕೊಂಡಿದ್ದೆವು. ಒಬ್ಬನು ಒಂದು ದಿನ ಹೋಗುತ್ತಿದ್ದನು. ಅವನು ದಿನವಿಡೀ ಹಝ್ರತ್ ಪೈಗಂಬರ್(ಸ) ರವರ ಸಭೆಯಲ್ಲಿ ಇರುತ್ತಿದ್ದನು, ಸಂಜೆ ಮರಳಿ ಬಂದು, ಹಝ್ರತ್ ಪೈಗಂಬರ್(ಸ) ರವರ ಸಭೆಯಲ್ಲಿ ಆದ ವಿವರಗಳೆಲ್ಲ ನಮಗೆಲ್ಲರಿಗೂ ತಿಳಿಸುತ್ತಿದ್ದರು. ಮರುದಿನ ಅವನು ತನ್ನ ಕೆಲಸಕಾರ್ಯಗಳಲ್ಲಿ ಇರುತ್ತಿದ್ದನು ಮತ್ತು ಅವರ ಇನ್ನೊಬ್ಬ ಸಂಗಡಿಗ ಪ್ರವಾದಿ (ಸ) ರವರ ಸಭೆಗೆ ಹೋಗುತ್ತಿದ್ದನು. ಅವನು ಸಭೆಗೆ ಹಾಜರಾಗಿ ಎಲ್ಲಾ ವಿವರಗಳನ್ನು ಬಂದು ತಿಳಿಸುತ್ತಿದ್ದನು. ಯಾವ ದಿನ ಈ ಘಟನೆ ನಡೆಯಿತು. ಆ ದಿನ ಹಝ್ರತ್ ಉಮರ್(ರ) ಅವರ ಸಂಗಡಿಗನ ಪಾಳಿ ಇತ್ತು. ಅವರು ಮದೀನಕ್ಕೆ ಮರಳಿ ಬಂದ ಮೇಲೆ ಹಝ್ರತ್ ಉಮರ್(ರ) ಅವರಿಗೆ ಕೇಳಿದರು. ಉಮರ್(ರ)! ಮದೀನದಲ್ಲಿ ಏನು ಘಟನೆ ನಡೆಯಿತು. ನಿನಗೆ ಗೊತ್ತಾ? ಹಝ್ರತ್ ಉಮರ್ ಕೇಳಿದರು. ಏನು ಆಯಿತು, ಅವರು ಹೇಳಿದರು. ಹಝ್ರತ್ ಪೈಗಂಬರ್(ಸ) ರವರು ತಮ್ಮ ಎಲ್ಲಾ ಪತ್ನಿಯರಿಗೆ ತಲಾಖ್ ನೀಡಿದ್ದಾರೆ. ಅವರ ಈ ಮಾತು ಕೇಳಿ ಹಝ್ರತ್ ಉಮರ್(ರ) ಗಾಬರಿಗೊಂಡರು. ಏಕೆಂದರೆ ಪ್ರವಾದಿಯರು ಅವರ ಪುತ್ರಿ ಹಫ್ಸದೊಂದಿಗೆ ವಿವಾಹವಾಗಿದ್ದರು. ಹಝ್ರತ್ ಉಮರ್(ರ) ಮದೀನಕ್ಕೆ ಹೋದರು, ನೇರವಾಗಿ ಹಝ್ರತ್ ಹಫ್ಸಾ(ರ) ಅವರ ಮನೆಗೆ ಹೋದರು. ಅಲ್ಲಿ ಹೋದಾಗ ನೋಡಿದ್ದೇನೆಂದರೆ ಹಝ್ರತ್ ಹಫ್ಸಾ(ರ) ಕುಳಿತುಕೊಂಡು ಅಳುತ್ತಿದ್ದರು. ಹಝ್ರತ್ ಉಮರ್(ರ) ಹೇಳಿದರು. ಮೂರ್ಖಿ! ನಾನು ನಿನಗೆ ಪ್ರವಾದಿಯರೊಡನೆ ಆದರದಿಂದ ಇರಬೇಕು ಎಂದು

ಹೇಳುತ್ತಿರಲಿಲ್ಲವೇ, ನೀನು ಆಯಿಶಾ(ರ)ರ ನಕಲು ಮಾಡಬೇಡ, ಅವರ ಸ್ಥಾನ ಬೇರೆ, ನಿನ್ನ ಸ್ಥಾನ ಬೇರೆಯೇ, ಆದರೆ ನೀವು ನನ್ನ ಮಾತು ಕೇಳಲಿಲ್ಲ, ಇದು ಅದರ ಪರಿಣಾಮವಾಗಿದೆ. ಮತ್ತು ಹಝ್ರತ್ ಹಫ್ಸಾ(ರ)ರೊಡನೆ ಕೇಳಿದರು. ಪ್ರವಾದಿಯರು ತಮ್ಮ ಎಲ್ಲಾ ಪತ್ನಿಯರಿಗೆ ತಲಾಖ್ ನಿಡಿದ್ದಾರೆ ಎಂಬ ಮಾತು ನಿಜವೇ? ಹಝ್ರತ್ ಹಫ್ಸಾ(ರ) ಹೇಳಿದರು. ಇಲ್ಲ ತಲಾಖ್ ನೀಡಲಿಲ್ಲ. ಆದರೆ ಅಸಂತುಷ್ಟರಾಗಿದ್ದಾರೆ. ಹಝ್ರತ್ ಉಮರ್(ರ) ಅಲ್ಲಿಂದ ತೆರಳಿ ಹಝ್ರತ್ ಪೈಗಂಬರ್(ಸ) ರವರ ಸನ್ನಿಧಿಯಲ್ಲಿ ಹಾಜರಾಗಿ ಅಪ್ಪಣೆ ಯಾಚಿಸಿದರು, ಆಗ ಒಳಗೆ ಪ್ರವೇಶಿಸಿದರು. ಹಝ್ರತ್ ಉಮರ್(ರ) ಹೇಳುತ್ತಾರೆ, ನಾವು ಒಳಗೆ ಪ್ರವೇಶ ಮಾಡಿದಾಗ ನೋಡುವುದೇನೆಂದರೆ ಪ್ರವಾದಿಯರು ಚಾಪೆಯ ಮೇಲೆ ಮಲಗಿದ್ದರು ಮತ್ತು ಆ ಚಾಪೆಯು ವರಟ್ಟಾಗಿತ್ತು, ನಾನು ಪ್ರವೇಶಿಸಿದಾಗ ಹಝ್ರತ್ ಪೈಗಂಬರ್(ಸ)ರು ಎದ್ದು ಕುಳಿತುಕೊಂಡರು, ಅವರ ಮೈಮೇಲೆಲ್ಲ ಚಾಪೆಯ ಗುರುತುಗಳಿದ್ದವು, ನಾನು ಹೇಳಿದೆ, ಯಾ ರಸೂಲಲ್ಲಾಹ್(ಸ)!! ಎಲ್ಲಾ ಸೌಕರ್ಯಗಳು ಮತ್ತು ಐಶ್ವರ್ಯಗಳು ಕೈಸರ್ ಅವರಿಗಿದೆ ಮತ್ತು ನಿಮ್ಮ ಯಾವುದೇ ಸೌಕರ್ಯಗಳಿಲ್ಲ. ಏಕೆಂದರೆ ನಿಮ್ಮ ಮೈಮೇಲೆಲ್ಲ ಚಾಪೆಯ ಗುರುತುಗಳು ಬಿದ್ದಿವೆ. ನಿಮ್ಮ ಸ್ವಭಾವದಲ್ಲಿ ಯಾವುದೇ ಕೋಪವಿದ್ದರೆ ಅದು ತೊರೆಯಲಿ ಎಂದು ಈ ಮತನ್ನು ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ. ನನ್ನ ಈ ಮಾತನ್ನು ಆಲಿಸಿ ಹಝ್ರತ್ ಪೈಗಂಬರ್(ಸ)ರು ಮುಗುಳು ನಗೆ ನಕ್ಕರು. ಆಗ ನಾನು ಈ ಸಂದರ್ಭವನ್ನು ಉಚಿತ ಎಂದು ಭಾವಿಸಿ ಹೀಗೆ ಹೇಳಿದೆ ಯಾ ರಸೂಲಲ್ಲಾಹ್(ಸ)!! ನೀವು ತಮ್ಮ ಎಲ್ಲಾ ಪತ್ನಿಯರಿಗೆ ತಲಾಖ್ ನೀಡಿದ್ದೀರಿ ಎಂಬ ವಿಷಯ ನಿಜವೇ? ಅವರು(ಸ) ಹೇಳಿದರು. ಇಲ್ಲ ತಲಾಖ್ ಅಂತು ನೀಡಲಿಲ್ಲ. ಮತ್ತೆ ಹಝ್ರತ್ ಉಮರ್(ರ)ಹೇಳಿದರು. ನಾನು ಹಫ್ಸಾ(ರ)ಳಿಗೆ ಅರ್ಥ ಮಾಡಿಸುತ್ತಲೇ ಬಂದಿದ್ದೇನೆ, ನೀನು ಆಯಿಶಾ(ರ) ಅವರ ನಕಲು ಮಾಡಬೇಡ ಮತ್ತು ನಿಮ್ಮೊಡನೆ ತುಂಬಾ ಆದರದಿಂದ ಇರಬೇಕು ಎಂದು. ಅದೇ ರೀತಿ ಮಾತನ್ನು ಮುಂದುವರಿಸುತ್ತಾ ಹೇಳಿದರು. ಯಾ ರಸೂಲಲ್ಲಾಹ್(ಸ)! ನಾವು ಮಕ್ಕದವರು ನಮ್ಮ ಮುಂದೆ ಪತ್ನಿಯರು ಮಾತೇ ಆಡುತ್ತಿರಲಿಲ್ಲ, ಇದು ನಿಮಗೆ ತಿಳಿಯದ ವಿಷಯವೇನಲ್ಲ, ಒಂದು ದಿವಸ ನನ್ನ ಪತ್ನಿ ಒಂದು ವಿಷಯದಲ್ಲಿ ನನಗೆ ಸಲಹೆ ನೀಡಲು ಮುಂದಾದಳು, ಅದಕ್ಕೆ ನಾನು ಹೇಳಿದೆ, ನನಗೆ ಸಲಹೆ ನೀಡಲು ನಿನ್ನ ಯೋಗ್ಯತೆ ಏನು, ನೀನು ನನಗೆ ಸಲಹೆ ನೀಡುವ ನಿನಗೆ ಧೈರ್ಯವಾದರು ಹೇಗೆ ಬಂತು. ಅಂತೂ ನಮ್ಮ ಮಹಿಳೆಯರಿಗೆ ಮದೀನದ ಮಹಿಳೆಯರು ನಿಧಾನವಾಗಿ ಕೆಡಿಸುತ್ತಿದ್ದಾರೆ. ಒಂದು ದಿನ ನಾನು ಮಾತನಾಡುತ್ತಾ ಇದ್ದೆ, ನನ್ನ ಪತ್ನಿ ಒಂದು ವಿಷಯದಲ್ಲಿ ನನಗೆ ಸಲಹೆ ನೀಡಲು ಪ್ರಯತ್ನಿಸಿದಳು. ನಾನು ಆಕೆಯನ್ನು ತಡೆದೆ. ಆಗ ಆಕೆ ಹೇಳಿದಳು. ಹಝ್ರತ್ ಪೈಗಂಬರ್(ಸ) ರವರ ಮನೆಯಲ್ಲಿ ಅವರ ಪತ್ನಿಯರು ಅವರಿಗೆ ಸಲಹೆ ನೀಡುವುದಾದರೆ, ನನ್ನನ್ನು ತಡೆಯಲು ನಿಮಗೆ ಅಧಿಕಾರವೇನಿದೆ? ಹೀಗೆ ಹಝ್ರತ್ ಉಮರ್(ರ) ಸೂಕ್ಷ್ಮ ರೀತಿಯಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ ನೀಡಿದವರು ನೀವೇ ಎಂಬುದನ್ನು ಬೊಟ್ಟು ಮಾಡಿದರು. ಹಾಗಾಗಿ ನಿಮ್ಮ ಪತ್ನಿಯರಿಂದ ಏನಾದರೂ ತಪ್ಪಾಗಿದ್ದಲ್ಲಿ ಅವರು ಕ್ಷಮೆಗೆ ಅರ್ಹರು. ಇವೆಲ್ಲಾ ಮಾತುಗಳ ಮಧ್ಯೆಯು ಹಝ್ರತ್ ಪೈಗಂಬರ್(ಸ) ಅತ್ಯುತ್ತಮ ರೀತಿಯಲ್ಲಿ ಮಹಿಳೆಯರ ಹಕ್ಕನ್ನು ಸುರಕ್ಷಿತವಾಗಿರಿಸಿದರು. ಅವರು(ಸ) ತಮ್ಮ ಅಂತಿಮ ಭಾಷಣದಲ್ಲಿ ತಾಕೀತು ಮಾಡಿದರು. ಮಹಿಳೆಯರೊಡನೆ ಸೌಜನ್ಯದಿಂದ ವರ್ತಿಸಿರಿ. ತಮ್ಮ ಗುಲಾಮರನ್ನು ತನ್ನ ಸಹೋದರರಂತೆ ಪರಿಗಣಿಸಬೇಕು. ಅವರ ಶಕ್ತಿಗಿಂತ ಮೀರಿದ ಕಾರ್ಯಗಳನ್ನು ತೆಗೆದುಕೊಳ್ಳಬಾರದು.

ಒಟ್ಟಿನಲ್ಲಿ ಇಸ್ಲಾಂ ಧರ್ಮ ಮಹಿಳೆಯರಿಗೆ ನೀಡಿದ ಹಕ್ಕುಗಳಂತೆ ಯಾವ ಧರ್ಮವು ನೀಡಲಿಲ್ಲ. ಆದರೆ, ಮನುಷ್ಯನು ಎಲ್ಲಾ ಒಳಿತು ಕೆಡಕುಗಳಿಂದ ಕೂಡಿದವನಾಗಿದ್ದಾನೆ, ಪತಿ ಹಾಗೂ ಪತ್ನಿಯ ಮಧ್ಯೆ ವೈಮನಸ್ಸು ಬಂದೇ ಬರುತ್ತದೆ, ಯಾವಾಗಲೂ ಒಂದೇ ರೀತಿಯಲ್ಲಿ ಇರುವುದು ಸಾಧ್ಯವಿಲ್ಲ. ಆದರೆ ಈ ವೈಮನಸ್ಸು ಸುಧಾರಿಸಲು ಆಗದಷ್ಟು ಮಟ್ಟಕ್ಕೆ ತಲುಪಿದರೆ ಇಂತಹ ಸಂದರ್ಭದಲ್ಲಿ ಇಸ್ಲಾಂ ಧರ್ಮವು 'ತಲಾಖ್' ಅಥವಾ 'ಖುಲ' ಕೊಡಲು ಅನುಮತಿ ನೀಡುತ್ತದೆ. ಆದರೆ ಅದಕ್ಕೂ ಕೆಲವು ನಿಯಮಗಳನ್ನು ವಿಧಿಸಿದೆ. ಅದನ್ನು ಪಾಲಿಸುವುದು ಪತಿ ಪತ್ನಿ ಮತ್ತು ಖಾಜಿಗಳ ಕರ್ತವ್ಯವಾಗಿದೆ. ಏಕೆಂದರೆ ಅದು ಸರ್ವೇ ಸಾಮಾನ್ಯವಂತೆ ಆಗಬಾರದು. ಹಝ್ರತ್ ಪೈಗಂಬರ್(ಸ) ನುಡಿದರು. **ಇನ್ನ ಅಬ್‌ಗಝುಲ್ ಹಲಾಲಿ ಇಂದಲ್ಲಾಹಿ ಅತ್ತಲಾಖು** ಅಂದರೆ ಧರ್ಮಬದ್ಧ ವಿಷಯದಲ್ಲಿ ಅತ್ಯಂತ ಅನಿಷ್ಟವಾದ ವಿಷಯವೇನೆಂದರೆ, ಅದು ಅಲ್ಲಾಹನ ದೃಷ್ಟಿಯಲ್ಲಿ ತಲಾಖ್ (ವಿಚ್ಛೇದನೆ) ಆಗಿದೆ. ಹೀಗಿರುವಾಗ ಒಬ್ಬ ಸತ್ಯವಿಶ್ವಾಸಿ, ಯಾರ ಹೃದಯದಲ್ಲಿ ಅಲ್ಲಾಹನ ಪ್ರೀತಿ ಇದೆ. ಅವನು ಇದು ಹೇಗೆ ಮಾಡಬಲ್ಲನು. ಧರ್ಮಬದ್ಧವಾದ ಎಲ್ಲಾ ಕಾರ್ಯಗಳು ಮಾಡಲೇಬೇಕೆಂಬುದು ಕಡ್ಡಾಯವಲ್ಲ. ನಿಮ್ಮ ಪೈಕಿ ಎಲ್ಲರೂ ತಿಳಿದವರೆ ಆಗಿದ್ದಾರೆ, ಬನಾರಸ್, ಕೋಲ್ಕತ್ತ, ಚೆನ್ನೈ, ಅಥವಾ ಮುಂಬೈ ಹೋಗುವುದು ಧರ್ಮಬದ್ಧವಾದ ಕಾರ್ಯವಾಗಿದೆ ಆದರೆ ನೀವು ಅಲ್ಲಿ ಹೋಗಿ ಬರುವರು ಎಷ್ಟು ಜನರಿದ್ದಾರೆ? 'ಹಲಾಲ್' ಎಂದ ಕೂಡಲೆ ಅದನ್ನು ಮಾಡಲೇಬೇಕೆಂದು ಕಡ್ಡಾಯವಾಗಿದ್ದರೆ, ಆ ನಗರಗಳಿಗೆ ಹೋಗಲು ನಿಮ್ಮ ಬಳಿ ಹಣವಿಲ್ಲದಿದ್ದರೂ ಆಸ್ತಿಪಾಸ್ತಿ ಮಾರಿಯಾದರೂ ಹೋಗಬೇಕಾಗಿತ್ತು. ಆದರೆ ಅಲ್ಲಿ ಹೋಗದಿರುವುದು ಸೂಚಿಸುವುದೇನೆಂದರೆ ಪ್ರತಿಯೊಂದು "ಹಲಾಲ್" ಕಾರ್ಯ ಮಾಡಲೇಬೇಕೆಂಬ ಕಡ್ಡಾಯ ಎಂದಿರುವುದು, ಸ್ಥಳ, ಸಂದರ್ಭ, ಅವಕಾಶ ನೋಡಬೇಕಾಗುತ್ತದೆ. ಒಂದು ಹಲಾಲ್ ಕಾರ್ಯ ಮಾಡಿದ್ದರಿಂದ ವಿಘ್ನ ಜಗಳ ಉಂಟಾಗುವುದಿದ್ದರೆ, ಅದರಿಂದ ದೂರವಾಗಿರುವುದು ಉತ್ತಮ. ಉದಾಹರಣೆಗೆ ನೀರುಳ್ಳಿ ತಿನ್ನುವುದು ಹಲಾಲ್ ಆಗಿದೆ. ಆದರೆ ನೀರುಳ್ಳಿ ಮಸೀದಿಯಲ್ಲಿ ತಿನ್ನುವುದು ನಿಷೇಧವಾಗಿರುತ್ತದೆ. ಏಕೆಂದರೆ ಅದರ ವಾಸನೆಯಿಂದ ಇತರ ಜನರಿಗೆ ತೊಂದರೆಯಾಗುತ್ತದೆ. ಅದೇ ರೀತಿ ಮನುಷ್ಯನಿಗೆ ಹಸಿರು ಬಣ್ಣದ ವಸ್ತ್ರ ಧರಿಸುವುದು ಅಥವಾ ಆಕಾಶದ ಬಟ್ಟೆ ಧರಿಸುವುದು ಅಥವಾ ಹಳದಿ ಬಣ್ಣದ ಬಟ್ಟೆ ಧರಿಸುವುದು ಹಲಾಲ್ ಆಗಿದೆ. ಒಬ್ಬ ಮಿತ್ರನು ಹಳದಿ ಬಣ್ಣದ ಬಟ್ಟೆ ಖರೀದಿಸಲು ಹೇಳಿದರು. ಅವನು ಹೇಳುತ್ತಾನೆ. ನನಗೆ ಹಳದಿ ಬಣ್ಣ ಇಷ್ಟವಿಲ್ಲ ಎಂದು. ಈಗ ಅವನ ದೃಷ್ಟಿಯಲ್ಲಿ ಅವನ ಇಷ್ಟವಾದ ಬಟ್ಟೆಯೇ ಅವನಿಗೆ ಹಲಾಲ್ ಆಗಿದೆ. ತಿನ್ನುವ ಕುರಿತು ಅಲ್ಲಾಹನ ಆಜ್ಞೆ ಇದೆ. ಹಲಾಲ್ ಹಾಗೂ ಶುದ್ಧವಾದ ವಸ್ತುಗಳನ್ನು ತಿನ್ನಿರಿ ಎಂದು. ಆದರೆ ಕೆಲವರು ಬದನೆಕಾಯಿ ತಿನ್ನುವುದಿಲ್ಲ. ಕೆಲವರು ಕುಂಬಳಕಾಯಿ ತಿನ್ನುವುದಿಲ್ಲ, ಅವರಿಗೆ ನೀವು ಅದನ್ನು ಏಕೆ ತಿನ್ನುವುದಿಲ್ಲ ಎಂದು ಕೇಳಿದರೆ, ಅವರು ಅದು ನಮಗೆ ಇಷ್ಟವಿಲ್ಲ ಎಂಬ ಉತ್ತರ ನೀಡುತ್ತಾರೆ. ಅಥವಾ ಇನ್ನೊಬ್ಬ ವ್ಯಕ್ತಿಗೆ ನೀವು ಕುಂಬಳಕಾಯಿ ಏಕೆ ತಿನ್ನುವುದಿಲ್ಲ? ಅವನು ಹೇಳುತ್ತಾನೆ. ನನ್ನ ಹೆಂಡತಿ ಅದನ್ನು ಇಷ್ಟಪಡುವುದಿಲ್ಲ. ಅದೇ ರೀತಿ ಮನೆ ನಿರ್ಮಿಸುವಾಗ ತಮ್ಮ ಇಷ್ಟದ ಪ್ರಕಾರ ತಾವು ಬಯಸಿದಂತೆ ಮನೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಒಬ್ಬರು ಒಂದು ಅಂತಸ್ತಿನ ಮನೆ ನಿರ್ಮಿಸುತ್ತಾನೆ. ಒಬ್ಬನು ಎರಡು ಅಂತಸ್ತಿನದ್ದು, ಒಬ್ಬನು ಮೂರು ಅಂತಸ್ತಿನದ್ದು, ಒಬ್ಬನು ಮನೆಯಲ್ಲಿ ತೋಟಗಾರಿಕೆ ಇಷ್ಟಪಡುತ್ತಾನೆ. ಮತ್ತೊಬ್ಬನು ಇಷ್ಟಪಡುವುದಿಲ್ಲ. ಈಗ ಇದೆಲ್ಲವು ಹಲಾಲೇ ಆಗಿರುತ್ತದೆ. ಆದರ ಎಲ್ಲಂದರ ಮೇಲೆ ನಡೆದುಕೊಳ್ಳುವುದಿಲ್ಲ. ಇದರ ಅರ್ಥವೇನೆಂದರೆ ಪ್ರತಿಯೊಂದು ಹಲಾಲ್ ವಸ್ತು ಉಪಯೋಗಿಸಲೇಬೇಕು ಎಂದೇನಲ್ಲ. ಆದರೆ ಪತ್ನಿಗೆ 'ತಲಾಖ್' ಕೊಡುವ ವಿಷಯ ಬಂದಾಗ, ತಲಾಖ್ ಕೊಡುವುದು ಹಲಾಲ್ ಆಗಿದೆ ಎಂದು ಏನೂ ಯೋಚಿಸದೆ ತಲಾಖ್ ನೀಡುತ್ತಾರೆ. ಅದಾಗ್ಯೂ, ಕೆಲವು ಹಲಾಲ್ ವಸ್ತುಗಳನ್ನು ಮನುಷ್ಯನು ತನ್ನ ಇಷ್ಟದ ಪ್ರಕಾರ, ಕೆಲವನ್ನು ತನ್ನ ಮಿತ್ರರಿಗೋಸ್ಕರ ಮತ್ತು ಕೆಲವು ಸಮಾಜಕ್ಕಾಗಿ ಬಿಟ್ಟುಬಿಡುತ್ತಾನೆ. ವಾಸ್ತವವೇನೆಂದರೆ ಒಬ್ಬ ಸತ್ಯವಿಶ್ವಾಸಿಯು ಇಂತಹ ಸಂದರ್ಭದಲ್ಲಿ ಅಲ್ಲಾಹನ ಸಂತೃಪ್ತಿಗವಾಗಿ, ವಸ್ತು ಎಂಬುದನ್ನು ಹಲಾಲ್ ಎಂದು ತಿಳಿದು ಸಹ ಬಿಟ್ಟುಬಿಡುತ್ತಾನೆ. ಅಥವಾ ಅಲ್ಲಾಹನಿಗೆ ಇಷ್ಟವಿಲ್ಲ ಎಂದಾಗಲೂ ಬಿಟ್ಟುಬಿಡುತ್ತಾನೆ.

ಆದ್ದರಿಂದ ತಲಾಖ್ ವಿಷಯವನ್ನು ಸರ್ವೇಸಾಮಾನ್ಯಗೊಳಿಸುವುದು ಹಿತವಲ್ಲ, ಬದಲಿಗೆ ತಲಾಖ್‌ನಿಂದ ದೂರವಿರುವುದೇ ಹಿತಕರವಾಗಿದೆ. ಹಲಾಲ್ ಎಂದರೆ ಬೇಕಾದರೆ ಮಾಡಬಹುದು, ಕಾನೂನು ಪ್ರಕಾರ ನಿಷೇಧವಿಲ್ಲ. ಆದರೆ ನೀವು ಇತರರ ಭಾವನೆಗಳಿಗೂ, ಇತರರ ಅನುಕಂಪ ಹಾಗೂ ಇತರರ ಪ್ರೀತಿಯನ್ನೂ ಸಹ ಪರಿಗಣಿಸಬೇಕಾಗುತ್ತದೆ. ಯಾವ ಹಲಾಲ್ ಅನುಸರಿಸುವಾಗ ಇತರರ ಭಾವನೆಗಳಿಗೆ, ಅನುಕಂಪಕ್ಕೆ ಪ್ರೀತಿಗೆ ಧಕ್ಕೆ ಉಂಟಾದರೆ ಅದು ಹಲಾಲ್ ಅಲ್ಲ, ಬದಲು ಒಂದು ರೀತಿಯಲ್ಲಿ ಹಲಾಲ್ ಆಗಿದೆ, ಮತ್ತೊಂದು ರೀತಿಯಲ್ಲಿ ಹರಾಮ್ ಆಗಿರುತ್ತದೆ. ಜನರು ತನ್ನ ಮಿತ್ರರ ಕ್ರೋಧ, ಸಮಾಜದ ಕ್ರೋಧ ಮತ್ತು ಸಮುದಾಯದ ಕ್ರೋಧ'ವನ್ನು ಲೆಕ್ಕಿಸುವುದಾದರೆ, ಅಲ್ಲಾಹನ ಕ್ರೋಧ'ವನ್ನು ಕಡೆಗಣಿಸಬಹುದೇ? ಅಲ್ಲಾಹನ ಕ್ರೋಧ ಇಷ್ಟೊಂದು ನಿಮ್ಮ ದೃಷ್ಟಿಯಲ್ಲಿ ದುರ್ಬಲವಾಗಿದೆ, ಅದನ್ನು ಪರಿಗಣಿಸುವ ಅವಶ್ಯಕತೆ ಇಲ್ಲ? ಲೌಕಿಕ ಹಾಗೂ ಕೀಳುಮಟ್ಟದ ಪ್ರೇಮವುಳ್ಳವರು ತನ್ನ ಪ್ರೇಯಸಿಯ ಸಣ್ಣ ಅತಿ ಸಣ್ಣ ಕ್ರೋಧದಿಂದ ಹೆದರುವುದಾದರೆ ಮತ್ತು ಅದರಿಂದ ದೂರವಿರುವುದಾದರೆ, ಒಬ್ಬ ಸತ್ಯವಿಶ್ವಾಸಿ, ನಂಬಿಕೆಯ ಸ್ವಾದ ಪಡೆದಿರುವನು, ಅಲ್ಲಾಹನ ಕ್ರೋಧ ಲೆಕ್ಕಿಸದಿರಲು ಸಾಧ್ಯವೇ. ಹದೀಸುಗಳಲ್ಲಿ ಬರುತ್ತದೆ. ಒಂದು ಸಂದರ್ಭದಲ್ಲಿ ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಬಕರ್(ರ) ಅವರ ನಡುವೆ ಯಾವುದೇ ಮಾತಿನಲ್ಲಿ ವಿವಾದವಾಯಿತು. ಈ ವಿವಾದವು ವಿಪರೀತಕ್ಕೆ ಹೋಯಿತು. ಹಝ್ರತ್ ಉಮರ್‌ರವರ ಸ್ವಭಾವ ಕಠಿಣವಾಗಿತ್ತು. ಆದ್ದರಿಂದ ಹಝ್ರತ್ ಅಬೂಬಕರ್ ಅಲ್ಲಿಂದ ಹೊರಡುವುದು ಉತ್ತಮ

ಎಂದು ಭಾವಿಸಿ ಅಲ್ಲಿಂದ ಹೊರಡಬಯಸಿದರು, ಆಗ ಹಝ್ರತ್ ಉಮರ್(ರ) ಮುಂದೆ ಬಂದು ಹಝ್ರತ್ ಅಬೂಬಕರ್(ರ) ಅವರ ಅಂಗಿ ಹಿಡಿದುಕೊಂಡರು, ನನ್ನ ಮಾತಿಗೆ ಉತ್ತರಕೊಟ್ಟು ಹೊರಡಿರಿ ಎಂದು ಒತ್ತಾಯಿಸಿದರು. ಹಝ್ರತ್ ಅಬೂಬಕರ್(ರ) ಅದನ್ನು ಬಿಡಿಸಿಕೊಳ್ಳಲು ಹೋದಾಗ ಅವರ ಅಂಗಿ ಹರಿದುಹೋಯಿತು. ಆಗ ಅವರು ಅಲ್ಲಿಂದ ತಮ್ಮ ಮನೆಗೆ ಹೊರಟರು. ಆದರೆ ಹಝುರತ್ ಉಮರ್(ರ) ಅವರಿಗೆ ಸಂಶಯ ಉಂಟಾಯಿತು. ಅವರು ಹಝ್ರತ್ ಪೈಗಂಬರ್(ಸ) ರವರ ಮುಂದೆ ನನ್ನ ಬಗ್ಗೆ ದೂರು ಕೊಡಲು ಹೋಗಿರಬಹುದು ಎಂದು. ಅವರು ಸಹ ಹಿಂದೆಯಿಂದ ಹಝ್ರತ್ ಪೈಗಂಬರ್(ಸ) ರವರ ಸೇವೆಯಲ್ಲಿ, ಆ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಹೊರಟರು, ಆದರೆ ರಸ್ತೆಯಲ್ಲಿ ಅವರು ಹಝ್ರತ್ ಉಮರ್(ರ) ಅವರಿಂದ ಮರೆಯಾದರು. ಹಝ್ರತ್ ಉಮರ್(ರ) ಅವರು ಪ್ರವಾದಿಯರ ಬಳಿ ನನ್ನ ಬಗ್ಗೆ ದೂರು ಕೊಡಲು ಹೋಗಿರುತ್ತಾನೆ ಎಂದು ಭಾವಿಸಿಕೊಂಡರು. ಅವರು ಸಹ ನೇರವಾಗಿ ಹಝ್ರತ್ ಪೈಗಂಬರ್(ಸ) ರವರ ಸೇವೆಯಲ್ಲಿ ಹಾಜರಾದರು. ಅಲ್ಲಿ ಹೋಗಿ ನೋಡಿದರೆ ಹಝ್ರತ್ ಅಬೂಬಕರ್ ಇರಲಿಲ್ಲ. ಅವರು ಇಲ್ಲದ್ದನ್ನು ನೋಡಿ ಅವರಲ್ಲಿ ನಾಚಿಕೆ ಉಂಟಾಯಿತು. ಆದ್ದರಿಂದ ಹೇಳಿದರು. ಯಾ ರಸೂಲಲ್ಲಾಹ್(ಸ)!! ನನ್ನಿಂದ ಒಂದು ತಪ್ಪಾಗಿದೆ, ಅದೇನೆಂದರೆ ನಾನು ಅಬೂಬಕರ್‌ನೊಡನೆ ಕಠಿಣವಾಗಿ ವರ್ತಿಸಿರುತ್ತೇನೆ. ಹಝ್ರತ್ ಅಬೂಬಕರ್(ರ) ಅವರ ತಪ್ಪೇನೂ ಇಲ್ಲ. ನನ್ನದೇ ತಪ್ಪಾಗಿದೆ. ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ) ರವರ ಬಳಿ ಹೋದ ವಿಷಯ ಒಬ್ಬರು ಅಬೂಬಕರ್‌ಗೆ ತಿಳಿಸಿದರು. ಹಝ್ರತ್ ಅಬೂಬಕರ್(ರ) ನಾನು ಸಹ ಸ್ಪಷ್ಟನೆ ನೀಡಲು ಅಲ್ಲಿ ಹೋಗಬೇಕಾಗಿದೆ ಎಂದು ತಿಳಿದರು. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ) ರವರ ಸಭೆಗೆ ತಲುಪಿದಾಗ ಹಝ್ರತ್ ಉಮರ್ (ರ) ಹೇಳುತ್ತಿದ್ದರು. ಯಾ ರಸೂಲಲ್ಲಾಹ್! ನಾನು ಅಬೂಬಕರ್‌ರೊಡನೆ ವಾದವಿವಾದ ಮಾಡಿದ್ದು ತಪ್ಪಾಗಿದೆ, ಅದರಿಂದ ಅವರ ಅಂಗಿ ಹರಿಯಿತು. ಹಝ್ರತ್ ಪೈಗಂಬರ್(ಸ) ರವರು ಈ ಕೇಳಿದ ತಕ್ಷಣ ಅವರ ಮುಖದ ಮೇಲೆ ಕೋಪದ ಭಾವನೆ ಉಂಟಾಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು. ಓ ಜನರೇ! ನಿಮಗೆ ಏನಾಗಿದೆ, ಇಡೀ ಲೋಕವೇ ನನಗೆ ಧಿಕ್ಕರಿಸಿತು ಮತ್ತು ನೀವು ಸಹ ನನಗೆ ವಿರೋಧವಾಗಿದ್ದರು. ಅಂತಹ ಸಮಯದಲ್ಲಿ ಅಬೂಬಕರ್ ಮಾತ್ರ ನನ್ನ ಜೊತೆಯಲ್ಲಿದ್ದರು. ನನ್ನ ಮೇಲೆ ವಿಶ್ವಾಸ ತಂದರು ಮತ್ತು ಎಲ್ಲಾ ರೀತಿಯಿಂದಲೂ ನನಗೆ ಸಹಕರಿಸಿದರು. ಮತ್ತು ದುಃಖದಿಂದ ಹೇಳಿದರು. ಈಗಲೂ ನೀವು ನನಗೆ ಮತ್ತು ಅಬೂಬಕರ್‌ಗೆ ಪೀಡಿಸದೆ ಬಿಡುವುದಿಲ್ಲವೇ? ಹಝ್ರತ್ ಪೈಗಂಬರ್(ಸ) ರವರು ಈ ಮಾತನ್ನು ಹೇಳುತ್ತಿರುವಾಗಲೆ ಅಬೂಬಕರ್ ಪ್ರವೇಶಿಸಿದರು. ಇದಾಗಿದೆ ಸತ್ಯಪ್ರೇಮದ ಲಕ್ಷಣ. ಅವರು ದೂರು ಕೊಡುವ ಬದಲು ಹೇಳಿದರು. ಓ ಅಲ್ಲಾಹನ ಸಂದೇಶವಾಹಕರೇ!! ನನ್ನದೇ ತಪ್ಪು ಉಮರ್(ರ) ಅವರ ತಪ್ಪಲ್ಲ, ಹಝ್ರತ್ ಪೈಗಂಬರ್(ಸ)ರವರ ಮನದಲ್ಲಿ ಕೋಪ ಉಂಟಾಗುವುದನ್ನು ನೋಡಿ, ಓರ್ವ ಸತ್ಯಪ್ರೇಮಿಯ ನಿಮಿತ್ತ ನನ್ನ ಕಡೆಯಿಂದ, ನನ್ನ ಪ್ರವಾದಿಗೆ ಸಂಕಷ್ಟ ಒದಗಿಬರಬಾರದೆಂದು ಭಾವಿಸಿದರು. ಬರುತ್ತಲೇ ಮೊಣಕಾಲೂರಿ ಪ್ರವಾದಿಯರ ಮುಂದೆ ಕುಳಿತುಕೊಂಡರು ಮತ್ತು ಹೇಳಿದರು, ಓ ಅಲ್ಲಾಹನ ಸಂದೇಶವಾಹಕರೇ! ಅವರಿಗೆ ತನ್ನ ನೇತಾರರ ಬಗ್ಗೆ ಎಷ್ಟೊಂದು ಪ್ರೀತಿ ಇತ್ತು. ಸಾಮಾನ್ಯವಾಗಿ ತನ್ನ ಎದುರಾಳಿಯ ಬಗ್ಗೆ ಕೋಪ ಮಾಡಿದ್ದನ್ನು ಕಂಡು ಸಂತೋಷಪಡುತ್ತಾರೆ. ಆದರೆ ಪ್ರವಾದಿಯರಿಗೆ ಕಷ್ಟಕೊಡಬಾರದು ಎಂಬ ನೆಲೆಯಲ್ಲಿ ಹಝ್ರತ್ ಉಮರ್ ಅವರಿಗೆ ಬಳಸಿಕೊಂಡರು. ಅವರು (ಅಬೂಬಕರ್) ಭಾವಿಸಿದರು. ನಾನೇ ಅಪರಾದಿಯಾಗುತ್ತೇನೆ. ಆದರೆ ಪ್ರವಾದಿಯರ ಮನಸ್ಸಿಗೆ ನೋವು ಆಗುವುದನ್ನು ಸಹಿಸಲಾರೆ. ಹೀಗಿರುವಾಗ ಒಬ್ಬ ಸತ್ಯವಿಶ್ವಾಸಿ ದಾಸನು ತನ್ನ ಪ್ರಭು ಅಲ್ಲಾಹನನ್ನು ಸಂತೃಪ್ತಪಡಿಸಲು, ಅಲ್ಲಾಹನ ಅನಿಷ್ಠ ಕೆಲಸವಾದ ತಲಾಖ್‌ನಿಂದ ದೂರವಿರಲು ಏಕೆ ಸಾಧ್ಯವಿಲ್ಲ. ನಿಸ್ಸಂಶಯವಾಗಿಯೂ ನಮಗೆ ಹಝ್ರತ್ ಪೈಗಂಬರ್(ಸ) ರೊಡನೆ ಅತೀವ ಪ್ರೀತಿಯಿದೆ. ನಾವು ಅಲ್ಲಾಹನ ನಂತರ ಯಾರನ್ನು ಈ ಪ್ರಕಾರ ಪ್ರೀತಿಸುವುದಿಲ್ಲ. ಅದರೆ ಪ್ರಭು, ಪ್ರಭುವೇ, ಪ್ರವಾದಿ, ಪ್ರವಾದಿಯೇ, ನಾವು ಬಲ್ಲವರಾಗಿದ್ದೇವೆ. ಪ್ರವಾದಿಯರ ಸ್ಥಾನ ಸರ್ವಶ್ರೇಷ್ಠವಾಗಿದೆ, ಅದು ಯಾವ ಮನುಷ್ಯನಿಗೂ ಲಭ್ಯವಾಗಲು ಸಾಧ್ಯವಿಲ್ಲ. ಆದರೆ ಅದಾಗ್ಯೂ ಹಝ್ರತ್ ಪೈಗಂಬರ್(ಸ) ದಾಸರಾಗಿದ್ದಾರೆ ಮತ್ತು ಅಲ್ಲಾಹನು ಆರಾಧ್ಯರೂ ಆಗಿದ್ದಾರೆ. ಹಝ್ರತ್ ಪೈಗಂಬರ್(ಸ) ಸೃಷ್ಟಿಯಾಗಿದ್ದಾರೆ ಮತ್ತು ಅಲ್ಲಾಹನು ಸೃಷ್ಟಿಕರ್ತನು ಹಝ್ರತ್ ಪೈಗಂಬರ್(ಸ) ಅಲ್ಲಾಹನ ಕೃಪಾಧೀನರಾಗಿದ್ದಾರೆ ಮತ್ತು ಅಲ್ಲಾಹನು ಕರುಣಿಸುವವನಾಗಿದ್ದಾನೆ. ಹಝ್ರತ್ ಪೈಗಂಬರ್(ಸ) ನಿಧನಗೊಳ್ಳುವರು ಮತ್ತು ಅಲ್ಲಾಹನು ಶಾಶ್ವತನು. ಅಲ್ಲಾಹನು ಆದಿಯಿಂದಲೂ ಕೊನೆಯವರೆಗೂ ಶಾಶ್ವತನು. ಹಝ್ರತ್ ಪೈಗಂಬರ್(ಸ) ಅಲ್ಲಾಹನಿಂದ ಬೇಡುವವರಾಗಿದ್ದರು ಮತ್ತು ಅಲ್ಲಾಹನು ಅವರ ಬೇಡಿಕೆಗಳನ್ನು ಪೂರೈಸುವವನಾಗಿದ್ದನು. ಹಝ್ರತ್ ಪೈಗಂಬರ್(ಸ) ದುರ್ಬಲರಾಗಿದ್ದರು ಮತ್ತು ಅಲ್ಲಾಹನು ಸರ್ವಶಕ್ತನು. ಆದ್ದರಿಂದ ಹಝ್ರತ್ ಅಬೂಬಕರ್ ಅವರ ಮನವು ಹಝ್ರತ್ ಪೈಗಂಬರ್(ಸ) ರವರ ದುಃಖ ಕಂಡು ವಿಚಲಿತರಾಗುತ್ತಾರೆ, ಒಬ್ಬ ಸತ್ಯವಿಶ್ವಾಸಿಯು ಹಝ್ರತ್ ಪೈಗಂಬರ್(ಸ) ರವರ ಈ ಹದೀಸನ್ನು **ಇನ್ನ ಅಬ್‌ಗ಼ಝುಲ್ ಹಲಾಲು ಇಂದಲ್ಲಾಹಿ ಅತ್ತಲಾಖು** ಓದಿಯೂ ಹೇಗೆ ಅದನ್ನು ವಿರೋಧಿಸುವ ಧೈರ್ಯ ಮಾಡಲು ಸಾಧ್ಯ. ಶರೀಅತ್ ಹೇಳುತ್ತದೆ. **ಅಬ್‌ಗ಼ಝುಲ್ ಹಲಾಲ್** ಪರಿಗಣಿಸಿ ದೂರ ಇರಿ ಎಂದು. ಪ್ರತಿಯೊಬ್ಬ ಸತ್ಯವಿಸ್ವಾಸಿಯ ಕರ್ತವ್ಯವಾಗಿರುತ್ತದೆ. ಅವರು ಇಂತಹ ಕಾರ್ಯಗಳಿಂದ ದೂರವಿರಲು ಪ್ರಯತ್ನಿಸಬೇಕು. ಮತ್ತು ಈ ಮತನ್ನು ದಾಂಪತ್ಯ ಸಂಬಂಧದಲ್ಲಿ ಬಿರುಕು ಉಂಟಾಗುವುದನ್ನು ತಡೆಯಬೇಕು.

ತಲಾಖ್ ಮಾತು ಖುಲ ಎಂಬುದು ವಾಸ್ತವದಲ್ಲಿ ಒಂದೇ ಅರ್ಥವುಳ್ಳ ಪದವಾಗಿವೆ. ಇದನ್ನು ನೆನಪಿಡಬೇಕು. ಗಂಡನು ಹೆಂಡತಿಯಿಂದ ವಿಚ್ಛೇದನ ಪಡೆಯಬಯಸಿದರೆ 'ತಲಾಖ್" ಆಗಿರುತ್ತದೆ ಮತ್ತು ಹೆಂಡತಿಯು ಗಂಡನಿಂದ ವಿಚ್ಛೇದನ ಪಡೆಯಬಯಸಿದರೆ "ಖುಲ' ಎಂದಾಗುತ್ತದೆ. ಖುಲವು ಸಹ **ಅಬ್‌ಗ಼ಝುಲ್ ಹಲಾಲ್** (ಅನಿಷ್ಟರ ಹಲಾಲ್) ಅಡಿಯಲ್ಲೆ ಬರುತ್ತದೆ. ಎಲ್ಲಿಯವರೆಗೆ ಮಾನವ ಹಕ್ಕಗುಳ ಪ್ರಶ್ನೆಯಿದೆ. ತಲಾಖ್ ಮತ್ತು ಖುಲ (ವಿಚ್ಛೇದನ) ಎರಡನ್ನೂ ಸಹ ಮುಸ್ಲಿಮರು ಮರೆತುಬಿಟ್ಟಿದ್ದರು. ಅದರಿಂದ ಮಹಿಳೆಯು ತುಂಬಾ ಕಷ್ಟವನ್ನು ಅನುಭವಿಸಬೇಕಾಗುತಿತ್ತು. ಅಹ್ಮದಿಯತ್ ಈ ಎರಡೂ ಹಕ್ಕುಗಳನ್ನು ಸ್ಥಾಪಿಸಿತು. ಮತ್ತು ಮಹಿಳೆಯರಿಗೆ ಈ ಸಂಕಷ್ಟದಿಂದ ಸಂರಕ್ಷಿಸಿದರು. ಜೊತೆಯಲ್ಲಿ ಈ ಹದೀಸಿನ ಆಶಯವನ್ನು ಜನರ ಮುಂದೆ ಸರಿಯಾಗಿ ಉಲ್ಲೇಖಿಸಿದರು. ಮತ್ತು ಈ ಎರಡೂ ವಿಧಾನಗಳನ್ನು ಅನುಸರಿಸುವುದು ಅಲ್ಲಾಹನ ದೃಷ್ಟಿಯಲ್ಲಿ **ಅಬ್‌ಗ಼ಝುಲ್ ಹಲಾಲ್** (ಅನಿಷ್ಟರ ಹಲಾಲ್) ಆಗಿದೆ ಎಂದು ಮನದಟ್ಟು ಮಾಡಲಾಯಿತು. ಈ ಹಕ್ಕು ಇತ್ತೀಚೆಗೆ ಚಾಲನೆಗೆ ಬಂದ ಕಾರಣ ನಮ್ಮ ದೇಶದಲ್ಲಿ ಹೊಸದಾಗಿ ಬಂದು ಹಕ್ಕನ್ನು ಹೆಚ್ಚೆಚ್ಚು ಚಾಲನೆಗೆ ತರುವ ಅಭ್ಯಾಸವಿದೆ. ಆದ್ದರಿಂದ ನಮ್ಮ ಜಮಾಅತ್‌ನವರು ಅದನ್ನು ಅನುಸರಿಸುವುದರಲ್ಲಿ ಆತುರ ತೋರಿಸಿದ್ದಾರೆ ಮತ್ತು ಜಮಾಅತ್‌ನ ಒಂದು ಭಾಗ ತಲಾಖ್ ಮತ್ತು ಖುಲನತ್ತ್ ವಾಲಿದೆ. ಅದಾಗ್ಯೂ ಪವಿತ್ರ ಖುರ್‌ಆನ್‌ನ ಆಜ್ಞೆ ಇದೆ, ಪತಿ ಪತ್ನಿಯ ಮಧ್ಯೆ ಜಗಳ ಉಂಟಾದರೆ ಅದನ್ನು ದೂರ ಮಡಲು ತೀರ್ಪುಗಾರನೊಬ್ಬನನ್ನು ನೇಮಿಸಬೇಕು. ಅವರು ಈ ವೈಮನಸ್ಸನ್ನು ದೂರ ಮಾಡುವ ಪ್ರಯತ್ನ ಮಾಡಬೇಕು. ಮತ್ತು ಮೊದಲಿನಂತೆ ಪ್ರೀತಿಯಿಂದ ಜೀವಿಸುವ ಹಾಗೆ ಮಾಡಬೇಕು. ಆದರೆ ಸುಧಾರಣೆಗೊಳ್ಳದ ಹಾಗೆ ಪರಿಸ್ಥಿತಿ ಒದಗಿ ಬಂದರೆ ಅದನ್ನು ಖಾಜಿಗೆ ಒಪ್ಪಿಸಬೇಕು. ಅವನು ನಿರ್ಣಯ ಕೈಗೊಳ್ಳುವನು. ಹೀಗೆ ಸಣ್ಣ ಸಣ್ಣ ಮಾತಿಗೆ ಖುಲ ತಲಾಖ್‌ಗೆ ಬರುವುದು ಖೇದನೀಯ ವಿಷಯವಾಗಿದೆ. ಇದು ಎಂತಹ ಭಯಾನಕವಾದ ಮತ್ತು ಎಂತಹ ಅನಿಷ್ಠಕರ ಕಾರ್ಯವಾಗಿದೆ ಎಂದರೆ, ಅದರಿಂದ ಪ್ರತಿಯೊಬ್ಬ ಸಜ್ಜನನಾದವನು ದ್ವೇಷಿಸಬೇಕಾಗಿದೆ. ಪತಿ ಪತ್ನಿಯ ಏಕತೆಯ ವಿಷಯ ಸಾಧಾರಣ ವಿಷಯವಲ್ಲ. ದಾಂಪತ್ಯ ಸಂಬಂಧ ಹಗುರವಾದ ಮಾತಲ್ಲ. ಆ ಸಂಬಂಧ ಹೇಗಿದೆ ಅಂದರೆ, ಇಂತಹ ಸಂಬಂಧ ಹಗುರವಾದ ಮತಲ್ಲ. ಆ ಸಂಬಂಧ ಹೇಗಿದೆ ಅಂದರೆ, ಇಂತಹ ಸಂಬಂಧ ತಂದೆ ಮಗನೊಡನೆಯ ಇರುವುದಿಲ್ಲ. ಪುರುಷನು ತನ್ನ ದೇಹದ ಆ ಗುಪ್ತಾಂಗ ಅದನ್ನು ಮಾತಪಿತರ ಮುಂದು ತೋರ್ಪಡಿಸುವುದಿಲ್ಲ. ಅದನ್ನು ತನ್ನ ಪತ್ನಿಯ ಮುಂದೆ ಜಾಹೀರುಪಡಿಸುತ್ತಾನೆ. ಅದೇ ರೀತಿ ಓರ್ವ ಹೆಣ್ಣು ಸಹ ತನ್ನ ಮಾತಪಿತರ ಮುಂದೆ ತೋರ್ಪಡಿಸಿದಂತಹ ಗುಪ್ತಾಂಗವನ್ನು ತನ್ನ ಗಂಡನ ಮುಂದೆ ಜಾಹೀರುಪಡಿಸುತ್ತಾಳೆ. ಇಂತಹ ಸಂಬಂಧಗಳ ನಂತರವೂ ಒಬ್ಬನು ತನ್ನ ಪತ್ನಿಗೆ ತಲಾಖ್ ಕೊಡಬಯಸುತ್ತಾನೆ ಅಥವಾ ಓರ್ವ ಮಹಿಳೆ ತನ್ನ ಪತಿಯಿಂದ ವಿಚ್ಛೇದನ ಬಯಸುತ್ತಾಳೆ ಎಂದರೆ, ಇಬ್ಬರು ಸಹ ದಾಂಪತ್ಯದ ರಹಸ್ಯವನ್ನು ತಿಳಿದಿಲ್ಲ ಎಂದೇ ಹೇಳಬೇಕಾಗುತ್ತದೆ. ಅವರ ದೃಷ್ಟಿಯಲ್ಲಿ ಇದೊಂದು ಆಟವಾಗಿ ಬಿಟ್ಟಿದೆ. ಓರ್ವ ಮಹಿಳೆ ಖುಲ ಬಯಸುವಳು ಅಥವಾ ಓರ್ವ ಪುರುಷ ತಲಾಖ್ ಬಯಸುವನು. ಅದರಿಂದ ಬೇರ್ಪಡಲು ಇಚ್ಛಿಸುತ್ತಾ ಅವರಿಬ್ಬರೂ ಇಸ್ಲಾಮಿನ ಶಿಕ್ಷಣವನ್ನು ಒಂದು ಅಪಹಾಸ್ಯವಾಗಿ ಪರಿಗಣಿಸಿದ್ದಾರೆ. ಖುಲ ಬಯಸುವ ಹೆಣ್ಣು ಏಕೆ ಖುಲ ಬಯಸುವಳು? ಇನ್ನೊಬ್ಬ ಪುರುಷನೊಡನೆ ವಿವಾಹವಾಗಲೇ. ಅಂದರೆ ಅದು ಒಂದರ್ಥದಲ್ಲಿ ಆಕೆ ತನ್ನನ್ನು ಮಂಡಿಯಲ್ಲಿ ಮಾರಾಟ ಮಾಡಲೆಂದೇ! ಅದಾಗ್ಯೂ ಇಸ್ಲಾಂ ಆಕೆಯನ್ನು ಬಹಳಷ್ಟು ಮಾನವನ್ನು ಸ್ಥಾಪಿಸಿದೆ. ತಲಾಖ್ ಬಯಸುವ ಪುರುಷನು ಸ್ತ್ರೀಯ ಮಾನವನ್ನು ಹಾಳುಗೆಡವುತ್ತಾನೆ. ನೈತಿಕತೆಯಲ್ಲಿ ಮುಸ್ಲಿಮೇತರರಿಗಿಂತಲೂ ಹಿಂದೆ ಇದೆ ಎಂದು ಸಾಬೀತುಪಡಿಸುವನು. ಏಕೆಂದರೆ ಎಲ್ಲಾ ತರಹದ ಸಮಾಜದಲ್ಲಿ, ಎಲ್ಲಾ ಧರ್ಮಗಳಲ್ಲಿ ಮತ್ತು ಎಲ್ಲಾ ವರ್ಗಗಳಲ್ಲಿ ಅದು ಸುಸಂಸ್ಕೃತರಾಗಲಿ, ಅಸಂಸ್ಕೃತರಾಗಲಿ, ಮಹಿಳೆಯ

ಮರ್ಯಾದೆಯನ್ನು ಎತ್ತಿಹಿಡಿದಿದೆ. ಮತ್ತು ಅವಳ ಪಾವಿತ್ರ್ಯತೆಯನ್ನು ಒಪ್ಪಿಕೊಂಡಿದೆ. ಆದ್ದರಿಂದ ಒಬ್ಬ ಪುರುಷನು ವಿನಾಕಾರಣ ತನ್ನ ಪತ್ನಿಗೆ ತಲಾಖ್ ಕೊಡುವವನಾದರೆ ಅವನು ನೈತಿಕತೆಯಲ್ಲಿ ಮುಸ್ಲಿಮೇತರರಿಗಿಂತಲೂ ಕಡೆ ಎಂದು ಭಾವಿಸಲಾಗುವುದು. ಅದೇ ರೀತಿ ಓರ್ವ ಹೆಣ್ಣು ವಿನಾಕಾರಣ ತನ್ನ ಪತಿಯಿಂದ ಖುಲ (ವಿಚ್ಛೇಧನ) ಬಯಸಿದರೆ, ಅವಳು ತನ್ನ ಮರ್ಯಾದೆ ತಾನಾಗಿ ಪೇಟೆಯಲ್ಲಿ ಹರಾಜು ಮಾಡಿಕೊಂಡಂತಾಗುವುದು, ತನ್ನ ಪಾವಿತ್ರ್ಯತೆ ಮರೆತಂತಾಗುವುದು. ಆದ್ದರಿಂದ ಇಂತಹವರೆಲ್ಲ ತಿಳಿದುಕೊಳ್ಳಲಿ. ಅವರೆಲ್ಲರೂ ಸಮಾಜದ ನೈತಿಕತೆಯನ್ನು ಹಾಳುಗೆಡುವವರಾಗಿದ್ದಾರೆ. ಜಮಾಅತ್ ಕರ್ತವ್ಯವಾಗಿದೆ. ತಲಾಖ್ ಮತ್ತು ಖುಲ (ವಿಚ್ಛೇದನ) ದ ದುಷ್ಪರಿಣಾಮವಾಗಿ ಮನವರಿಕೆ ಮಾಡಿ ಅದನ್ನು ಸರ್ವೇಸಾಮಾನ್ಯ ಆಗದಂತೆ ತಡೆಯಬೇಕು.

ಕೆಲವು ಪ್ರಕರಣಗಳು ನನ್ನ ಬಳಿ ಬಂದಾಗ, ವಿಭಜನೆಗೆ ಜನರು ಎಷ್ಟು ಸಣ್ಣ ವಿಷಯಗಳನ್ನು ಬಳಸುತ್ತಾರೆ ಎಂದು ನನಗೆ ಆಶ್ಚರ್ಯವಾಗುತ್ತದೆ. ಹೋಗುವಾಗ ನನ್ನ ಹೆಂಡತಿ ತನ್ನೊಂದಿಗೆ ಟ್ರಂಕ್ ತೆಗೆದುಕೊಂಡು ಹೋಗಿದ್ದಾಳೆ ಎಂದ ವ್ಯಕ್ತಿ ಹೇಳುತ್ತಾನೆ. ಹೆಂಡತಿ ಅವರು ನನ್ನ ಔಷಧಿಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಅವುಗಳನ್ನು ಹಿಂದಿರುಗಿಸಲಿಲ್ಲ ಎಂದು ಹೇಳುತ್ತಾರೆ. ಇಂತಹ ಕ್ಷುಲ್ಲಕತೆಗಳಿಂದ ಸಂಬಂಧವನ್ನು ಹಾಳು ಮಾಡುವುದು ಬುದ್ಧಿವಂತರ ವ್ಯವಹಾರವಲ್ಲ. ನನ್ನ ಪ್ರಕಾರ ಪತ್ನಿಯಲ್ಲಿ ಏನಾದರೂ ತಪ್ಪಿದ್ದರೆ ನೈತಿಕವಾಗಿ ತಿದ್ದಬೇಕು. ಆದರ ಆಕೆಯನ್ನು ಬಿಟ್ಟು ಹೋಗಲು ಮನಸ್ಸು ಮಾಡಬಾರದು. ಮುಖ್ಯೋಪಾಧ್ಯಯರು ಹುಡುಗರಿಗೆ ಪಾಠ ಮಾಡುತ್ತಾರೆ. ಪಾಠ ನೆನಪಿಲ್ಲದ ಹುಡುಗರಿಗೆ ಹೊರಹಾಕಲಾಗುತ್ತದೆಯೇ? ಅದೇ ರೀತಿ ಮನುಷ್ಯರಲ್ಲಿಯೂ ತಪ್ಪುಗಳಿವೆ, ಲೋಪಗಳಿವೆ, ದೌರ್ಬಲ್ಯಗಳಿವೆ. ಅವುಗಳನ್ನು ಹೋಗಲ, ಆಡಿಸಲು ಪ್ರಯತ್ನಿಸುವುದು ಸತ್ಯವಿಶ್ವಾಸಿಗಳ ಕರ್ತವ್ಯವೇ ಹೊರತು ಅಲ್ಲಾಹನು ಪವಿತ್ರಗೊಳಿಸಿದ ಲಿಂಗವನ್ನು ಪೇಟೆಯಲ್ಲಿ ಮಾರುವ ಲಿಂಗವನ್ನಾಗಿ ಮಾಡಬಾರದು.

ನಾನು ನಿಮಗೆ ಸಲಹೆ ನೀಡುವುದೇನೆಂದರೆ ಅಂತಹ ವಿವಾದಗಳನ್ನು ಬಹಳ ಗಂಭೀರವಾಗಿ ಪರಿಹರಿಸಲು ಪ್ರಯತ್ನಿಸಬೇಕು. ಮತ್ತು ಅಂತಹ ವಿಷಯಗಳಲ್ಲಿ ಬಹಳ ಎಚ್ಚರಿಕೆಯಿಂದ ವರ್ತಿಸಬೇಕು. ಖಾಜಿಗಳು ಸಹ ಇಂತಹ ಪ್ರಕರಣಗಳನ್ನು ಲಘುವಾಗಿ ಪರಿಗಣಿಸುತ್ತಾರೆ. ಮೊಕದ್ದೊಮೆಗಳನ್ನು ದೀರ್ಘಕಾಲಕ್ಕೆ ಮುಂದೂಡಿಕೊಂಡು ಹೋಗುತ್ತಾರೆ. ಇದರಿಂದ ಸುಧಾರಣೆ ಆಗುವ ಬದಲು ಹೃದಯಗಳು ಅನುಮಾನಗಳು ಬರಲು ಪ್ರಾರಂಬವಾಗುತ್ತದೆ. ಅಂತಹ ಸಂದಭರ್ಗಗಳಲ್ಲಿ ಯವುದೇ ಪಕ್ಷದ ವಕೀಲರನ್ನು ಹತ್ತಿರಕ್ಕೆ ಬರಲು ಸಹ ಅನುಮತಿಸಬಾರದು. ಖಾಜಿಯು ತಂದೆಯಾಗಲು ಪ್ರಯತ್ನಿಸಬೇಕು. ಹುಡುಗನನ್ನು ಅವನ ಮಗ, ಮತ್ತು ಹುಡುಗಿಯನ್ನು ತನ್ನ ಮಗಳು ಎಂದು ಪರಿಗಣಿಸಬೇಕು ಎಂದು ನಾನು ಖಾಜಿಗಳಿಗೆ ಸೂಚಿಸುತ್ತೇನೆ. ತಂದೆಯು ತನ್ನ ಮಕ್ಕಳಿಗೆ ವಿವರಿಸುವ ರೀತಿಯಲ್ಲಿಯೇ ಅವುಗಳನ್ನು ವಿವರಿಸಿ ಮತ್ತು ಷರಿಯತ್ ಸಮಸ್ಯೆಗಳನ್ನು ತಿಳಿಸಿ, ಅವರಿಗೆ ವಿಚ್ಛೇದನೆಯ ದುಷ್ಪರಿಣಾಮಗಳನ್ನು ಮನದಟ್ಟು ಮಾಡಿಕೊಡಿ, ಅದರ ಹರಡುವಿಕೆಯಿಂದ ರಾಷ್ಟ್ರದ ನೈತಿಕತೆಯು ಕುಸಿಯುತ್ತದೆ. ಅವರು ದೊಡ್ಡವರಾದ ಮೇಲೆ ಮಕ್ಕಳನ್ನು ಹೊಂದುವರು, ನನ್ನ ಪೋಷಕರು ಕ್ಷುಲ್ಲಕ ವಿಷಯಕ್ಕೆ ಬೇರ್ಪಟ್ಟರು, ಇದರಿಂದ ಅವರು ಯಾವ ಉತ್ತಮ ಉದಾಹರಣೆಯನ್ನು ಪಡೆಯುತ್ತಾನೆ ಮತ್ತು ಅಂತಹ ಮಕ್ಕಳು ಹೇಗೆ ಬೆಳೆಯುತ್ತಾರೆ. ಆದ್ದರಿಂದ ಈ ವಿಷಯಗಳು ನೈತಿಕತೆಯನ್ನು ಸುಂದರಗೊಳಿಸುವಂತಹದ್ದಲ್ಲ. ಬದಲು ನೈತಿಕತೆಯನ್ನು ಭ್ರಷ್ಟಗೊಳಿಸುವುದು. ಜಮಾಅತ್ ಇದರ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬೇಕು. ಇದು ಪ್ರಮುಖ ವಿಷಯಗಳಿಂದ ಹೆಚ್ಚು. ಅಂತಹ ವಿಷಯವನ್ನು ಖಾಜಿಗಳ ಮುಂದೆ ಮಂಡಿಸಿದಾಗ, ಅವರು ಅಲ್ಲಾಹನ ಅಸಮಾಧಾನವನ್ನು ಉಂಟುಮಾಡುವ ನಿರ್ಧಾರವನ್ನು ತೆಗೆದುಕೊಳ್ಳದಂತಿರಲು ಭಯಭೀತರಾಗಿರಬೇಕು ಮತ್ತು ವಿಷಯದ ಎಲ್ಲಾ ಅಂಶಗಳನ್ನು ಪರಿಗಣಿಸಿದ ನಂತರ ನಿರ್ಧಾರ ಕೈಗೊಳ್ಳಬೇಕು. ಇಂತಹ ಪ್ರಕರಣಗಳಲ್ಲಿ ವ್ಯಕ್ತಿಯ ತಂದೆ ತಾಯಿಯಾಗಲಿ, ಹೆಂಡತಿಯ ತಾಯಿ ತಂದೆಯಾಗಲಿ ಅಡ್ಡ ಬರಲು ಪ್ರಯತ್ನ ಮಾಡಬಾರದು. ಖಾಜಿಯ ಮೇಲೆ ಪೂರ್ಣ ವಿಶ್ವಾಸ ಹೊಂದಬೇಕು. ನಿರ್ಣಯದಲ್ಲಿ ಏನಾದರೂ ಲೋಪ ಕಂಡುಬಂದರೆ ಬರೆದು ತಿಳಿಸಬಹುದು, ನಾವು ಅದನ್ನು ಪರಿಶೀಲಿಸಬಹುದು. ಹೀಗೆ ಖಾಜಿಯರಿಗೂ ನಿಧಾನವಾಗಿ ಸಮಸ್ಯೆ ಅರಿವಾಗುತ್ತದೆ.

ವಿವಾಹದ ನಂತರ ತಂದೆ ತಾಯಿಯರ ಹಕ್ಕುಗಳು ಅಂತ್ಯವಾಗುವುದಿಲ್ಲ. ಬದಲಿಗೆ ವಿವಾಹದ ನಂತರವು ಸಂತಾನದ ಮೇಲೆ ತಂದೆ ತಾಯಿಗಳ ಹಕ್ಕಿರುತ್ತವೆ. ಪತ್ನಿಯು ಒಬ್ಬಳೇ ಆಕೆಯ ತಾಯಿಗೆ ಏಕೈಕ ಪುತ್ರಿಯಾಗಿದ್ದರೆ, ಮತ್ತು ಅವಳ ಹೊರತು ತಾಯಿಯನ್ನು ನೋಡಿಕೊಳ್ಳುವರು ಯಾರೂ ಇಲ್ಲ ಎಂದಾರೆ ಅಂತಹ ಸಂದರ್ಭದಲ್ಲಿ ಅಳಿಯನ ಕರ್ತವ್ಯವೇನೆಂದರೆ ಅವನು ತನ್ನ ಪತ್ನಿಗೆ ಆಕೆಯ ಸೇವೆ ಮಾಡಲು ಅವಕಾಶ ನೀಡಬೇಕು. ಆಕೆಯನ್ನು ತನ್ನ ಜೊತೆಗೆ ಇರಿಸಿದರೆ, ಅವರ ಖರ್ಚು ತಾನೆ ವಹಿಸಬೇಕು. ಅದೇ ರೀತಿಯಲ್ಲಿ ಹುಡುಗನ ತಂದೆತಾಯಿಯರು ವೃದ್ಧ ಅವಸ್ಥೆಯಲ್ಲಿದ್ದರೆ, ಅವರ ಸೇವೆ ಮಾಡುವುದು ಸಹ ಹುಡುಗಿಯ ಕರ್ತವ್ಯವಾಗಿದೆ. ಅವರೊಡನೆ ಸೌಜನ್ಯದಿಂದ ವರ್ತಿಸಬೇಕು, ಸೇವೆ ಮಾಡಬೇಕು. ಇದು ಇಬ್ಬರ ಹೊಣೆಗಾರಿಕೆಗಳಾಗಿವೆ. ಕೆಲವರು ಇಂತಹ ಸಂದರ್ಭಗಳಲ್ಲಿ ಹಣಕಾಸಿನ ತೊಂದರೆಯ ಬಗ್ಗೆ ಹೇಳುತ್ತಾರೆ. ಆದರೆ ಇದು ನನ್ನ ದೃಷ್ಟಿಯಲ್ಲಿ ಹಿತಕರವಲ್ಲ. ನನ್ನ ಅನುಭವವಿದೆ. ಬಡವರ ಮನೆಯಲ್ಲಿಯೇ ಮಕ್ಕಳು ಜಾಸ್ತಿ ಇರುವುದು ಆದರೂ ಅವರು ಜೀವಿಸುತ್ತಿಲ್ಲವೇ? ಧ್ಯಾನಕ್ಕಾಗಿ ನನ್ನ ಬಳಿಗೆ ಬಂದ ಬಡವರಲ್ಲಿ ಹೆಚ್ಚಿನವರು ಆರು, ಏಳರಿಂದ ಎಂಟು ಅಥವಾ ಒಂಭತ್ತು ಮಕ್ಕಳನ್ನು ಹೊಂದಿರುವ ಪುರುಷರು ಅರ್ಜಿ ಸಲ್ಲಿಸಿದವರು ಎಂಟು ಅಥವಾ ಒಂಬತ್ತು ಮಕ್ಕಳು ಇದ್ದಾರೆ ಎಂದು ನನಗೆ ಆಶ್ಚರ್ಯವಾಯಿತು. ಈ ಜನರು ಉತ್ಪ್ರೇಕ್ಷೆ ಮಾಡುತ್ತಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಆದರೆ ನಾನು ತನಿಖೆ ನಡೆಸಿದಾಗ ಅದು ನಿಜವಾಯಿತು. ಈಗ ಈ ಜನರು ಎಂಟು, ಎಂಟು, ಒಂಬತ್ತು, ಒಂಬತ್ತು ಮಕ್ಕಳನ್ನು ಹೊಂದಲು ಮತ್ತು ಅವರು ಸಾಕಲು ಹೆದರುವುದಿಲ್ಲ, ಹಾಗಾದರೆ ನಿಮ್ಮ ಹೆತ್ತವರ ಸೇವೆ ಮಾಡಲು ನೀವು ಏಕೆ ಹೆದರುತ್ತೀರಿ. ಒಂದಿಬ್ಬರು ಗಂಡಸರ ಹೊರೆ ಹೊರುವುದು ಕಷ್ಟವಲ್ಲ. ಷರತ್ತೇನೆಂದರೆ ಅದನ್ನು ಉದ್ದೇಶಿಸಿರಬೇಕು. ನೀವು ನಿಮ್ಮ ಪತ್ನಿಯ ಹೆತ್ತವರಿಗೆ ಸೇವೆ ಸಲ್ಲಿಸಿದರೆ ಮತ್ತು ಅವರನ್ನು ದಯೆಯಿಂದ ನಡೆಸಿಕೊಂಡರೆ ನಿಮ್ಮ ಪತ್ನಿ ನಿಮಗೆ ಹೃದಯದಿಂದ ನಿಷ್ಠಳಾಗಿರುತ್ತಾಳೆ ಮತ್ತು ಮೊದಲಿಗೆ ನಿಮ್ಮನ್ನು ಹೆಚ್ಚಾಗಿ ಪ್ರೀತಿಸುತ್ತಾಳೆ, ಆದರೆ ನೀವು ಅವರ ಹೆತ್ತವರನ್ನು ಇಟ್ಟುಕೊಂಡರೆ ಅವರನ್ನು ಲಘುವಾಗಿ ತೆಗೆದುಕೊಳ್ಳಬೇಡಿ ಎಂದೂ ಯಾವಾಗಲೂ ನೆನಪಿಡಿ. ಬದಲಿಗೆ ಅವರನ್ನು ನಿಮ್ಮ ಮುಖ್ಯಸ್ಥರೆಂದು ಪರಿಗಣಿಸಿ. ಅವರನ್ನು ಸೇವಕರಂತೆ ನಡೆಸಿಕೊಳ್ಳಬೇಡಿ. ಕೆಲವರು ತಮ್ಮ ಹೆತ್ತವರ ಅಥವಾ ಅವರ ಹೆಂಡತಿಯ ಪೋಷಕರನ್ನು ಅವರ ಸ್ಥಳಕ್ಕೆ ಕರೆದೊಯ್ದುದನ್ನು ನಾನು ನೋಡಿದ್ದೇನೆ. ಆದರೆ ಅವರು ತಮ್ಮ ಕೆಲಸವನ್ನು ಮಾಡುತ್ತಾರೆ ಎಂದು ನಿರೀಕ್ಷಿಸುತ್ತಾರೆ. ಇದು ಸರಿಯಲ್ಲ.

ಹುಡುಗಿಯ ತಂದೆ ಮತ್ತು ತಾಯಿಗೆ ಹತ್ತಿರ ಬರಬೇಡಿ ಎಂದು ಹುಡುಗರ ಪೋಷಕರು ಹುಡುಗಿಗೆ ಹೇಳುವುದು ಮತ್ತು ಹುಡುಗನ ಪೋಷಕರು ಹುಡುಗಿಯ ಪೋಷಕರ ಹತ್ತಿರ ಬರಬೇಡಿ ಎಂದು ಹುಡುಗನಿಗೆ ಹೇಳುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಅವರ ಸೂಚನೆಗಳ ಪ್ರಕಾರ ಹುಡುಗರು ಮತ್ತು ಹುಡುಗಿಯರು ಇಬ್ಬರೂ ನಡೆದುಕೊಳ್ಳುತ್ತಾರೆ. ಹಾಗಾಗಿ ಅವರ ನಡುವೆ ಜಗಳ ಉಂಟಾಗುತ್ತದೆ. ನನ್ನ ಪೋಷಕರನ್ನು ಅವಮಾನಿಕಸುತ್ತಾರೆ ಎಂದು ಹುಡುಗ ಹೇಳುತ್ತಾನೆ. ನನ್ನ ಹೆತ್ತವರನ್ನು ಗೌರವಿಸುವಿದಲ್ಲ ಎಂದು ಹುಡುಗಿ ಹೇಳುತ್ತಾಳೆ. ತಮ್ಮ ಹುಡುಗರಿಗೆ ಮತ್ತು ಹುಡುಗಿಯರಿಗೆ ಈ ಸೂಚನೆಯನ್ನು ನೀಡುವ ಎಲ್ಲಾ ಪೋಷಕರು ತಮ್ಮ ಮಕ್ಕಳ ಹಿತೈಷಿಗಳಲ್ಲ. ಬದಲಿಗೆ ಕೆಟ್ಟ ಶತ್ರುಗಳಾಗಿದ್ದಾರೆ. ನನ್ನ ದೃಷ್ಟಿಯಲ್ಲಿ ಇಂತಹವರು ಪೈಶಾಚಿಕರಾಗಿದ್ದಾರೆ. ಏಕೆಂದರೆ ಸೈತಾನನ ಕೆಲಸವು ವಿಭಜನೆ ಮಾಡುವುದಾಗಿದೆ. ಅವನು ವಿಭಜನೆಯನ್ನು ಪ್ರೀತಿಸುತ್ತಾನೆ. ಅಂತಹವರು ನೆನಪಿಟ್ಟುಕೊಳ್ಳಬೇಕು, ಅವರನ್ನೂ ಬೇರೆಯವರ ಹುಡುಗ ಅಥವಾ ಹುಡುಗಿ ಗೌರವಿಸುವುದಿಲ್ಲ. ಪೋಷಕರು ಇಂತಹ ಅಸಂಬದ್ಧ ಸಲಹೆಗಳನ್ನು ನೀಡಿದಾಗ ಸಂಬಂಧವನ್ನು ಹೇಗೆ ಉಳಿಸಿಕೊಳ್ಳಬಹುದು? ಹಾಗಾಗಿ ಹುಡುಗ ಮತ್ತು ಹುಡುಗಿಯ ಜೀವನವನ್ನು ಹಾಳುಮಾಡುವಲ್ಲಿ ದೊಡ್ಡ ಭಾಗವೆಂದರೆ ಅವರ ಪೋಷಕರು, ಪೋಷಕರ ಹತ್ತಿರ ಬರಲು ಬಿಡಬಾರದು ಎಂದು ಪೋಷಕರು ಕಲಿಸಿದ ಕಾರಣ, ಮದುವೆಯ ನಂತರ, ಪತಿ ಮತ್ತು ಪತ್ನಿಯ ನಡುವೆ ಉದ್ವಿಗ್ನತೆ ಉಂಟಾಗುತ್ತದೆ ಮತ್ತು ಕೆಲವೊಮ್ಮೆ ಈ ವಿಭಜನೆ ಪ್ರತ್ಯೇಕತೆ ಅಥವಾ ವಿಚ್ಛೇದನದ ತಿರುವು ತೆಗೆದುಕೊಳ್ಳುತ್ತದೆ. ಅವರಲ್ಲಿ ಒಬ್ಬರು ಸೋಲಿಸಲ್ಪಟರೆ ಮತ್ತು ಇನ್ನೊಬ್ಬರು ಮೇಲುಗೈ ಸಾಧಿಸಿದರೆ, ಮೇಲುಗೈ ಸಾಧಿಸುವವನು. ಇನ್ನೊಬ್ಬರು ಪೊಷಕರಿಗೆ ಉತ್ತರಿಸುತ್ತಾನೆ. ಅದಾಗ್ಯೂ ಇದು ನಾಚಿಕೆಗೇಡಿನ ಸಂಗತಿಯಾಗಿದೆ. ಮತ್ತು ನನ್ನ ಅಭಿಪ್ರಾಯದಲ್ಲಿ ಈ ವಿಧಾನವು ತುಂಬಾ ಕ್ರೂರವಾಗಿದೆ. ಪತ್ನಿ ತನ್ನ ಪತಿಯ ಮೇಲೆ ಮೇಲುಗೈ ಸಾಧಿಸುತ್ತಾಳೆ. ಮತ್ತು ಅವನು ತನ್ನ ಹೆತ್ತವರೊಂದಿಗಿನ ಸಂಬಂಧವನ್ನು ಮುರಿದು ಅವರ ಸೇವೆಯಿಂದ ವಿಮುಖನಾಗುತ್ತಾನೆ. ಆಗ ದೇವರ ಶಾಪ ಆ ಹುಡುಗನ ಮೇಲೆ ಇರುತ್ತದೆ. ಆದರೆ ಅದೇ ಸಮಯದಲ್ಲಿ ದೇವರ ಶಾಪ ಈ ಹುಡುಗಿಯ ಮೇಲೂ ಇರುತ್ತದೆ. ಏಕೆಂದರೆ ಅವನು ತನ್ನ ಹೆತ್ತವರನ್ನು ಕತ್ತರಿಸುವಂತೆ ಒತ್ತಾಯಿಸಿದಳು. ಹುಡುಗಿ ತನ್ನ ಹೆತ್ತವರನ್ನು ತೊರೆದರೆ ಹುಡುಗಿಯ ಮೇಲೆ ದೇವರ ಶಾಪ ಇರುತ್ತದೆ. ಅದೇ ಸಮಯದಲ್ಲಿ ಹುಡುಗನ ಮೇಲೂ

ದೇವರ ಶಾಪ ಇರುತ್ತದೆ. ಏಕೆಂದರೆ ಅವನು ಆಕೆಯನ್ನು ಒತ್ತಾಯಿಸಿದನು. ಆದ್ದರಿಂದ ಹುಡುಗಿಯ ಒತ್ತಾಯದಿಂದ ಹುಡುಗನು ತನ್ನ ಹೆತ್ತವರನ್ನು ತೊರೆದರೆ, ಹುಡುಗಿಯ ಮೇಲೆ ದೇವರ ಶಾಪ ಇರುತ್ತದೆ. ಅದೇ ಸಮಯದಲ್ಲಿ ಹುಡುಗನ ಮೇಲೂ ದೇವರ ಶಾಪ ಇರುತ್ತದೆ. ಏಕೆಂದರೆ ಅವನು ಅವಳ ಒತ್ತಾಯದಿಂದಾಗಿ ತನ್ನ ಹೆತ್ತವರನ್ನು ತೊರೆದನು. ಅದೇ ರೀತಿ ಹುಡುಗನು ಹಡುಗಿಗೆ ಅವಳ ಹೆತ್ತವರನ್ನೂ ತೊರೆಯಲು ಹೇಳಿದರೆ, ಅದೇ ರೀತಿಯಲ್ಲಿ ಇಬ್ಬರೂ ದೇವರ ಶಾಪಕ್ಕೆ ಗುರಿಯಾಗುತ್ತಾಳೆ. ಒಟ್ಟಾರೆಯಾಗಿ ಈ ವಿಷಯ ನಾಲ್ಕು ಕಡೆಯಿಂದ ದೇವರ ಶಾಪದಿಂದ ಆವರಿಸಲ್ಪಟ್ಟಿದೆ. ಅದರಿಂದ ಸುರಕ್ಷಿತವಾಗಿರುವುದು ಸತ್ಯವಿಶ್ವಾಸಿಯ ಕರ್ತವ್ಯವಾಗಿದೆ.

ನಮ್ಮ ಉಲಮಾಅಗಳು (ವಿದ್ವಾಂಸರು) ಈ ವಿಷಯಗಳನ್ನು ಹಗಲಿರುಳು ಜನರಿಗೆ ವಿವರಿಸಬೇಕು ಮತ್ತು ಜನರಿಗೆ ವಿಚ್ಛೇದನ ಮತ್ತು ಪ್ರತ್ಯೇಕತೆ ಬಹಳ ಅನಪೇಕ್ಷಿತ ವಿಷಯಗಳೆಂದು ತಿಳಿದಿರುವಂತೆ ಮನವರಿಕೆ ಮಾಡಿಕೊಡಬೇಕು. ಸುಧಾರಣೆಗೆ ಕೊನೆಯ ಅಸ್ತ್ರವಾಗಿ ತಲಾಖ್, ಖುಲ, ಬಳಸುವಂತಾಗಬೇಕು. ಖಾಜಿಗಳು ಸಹ ತಂದೆಯಾಗಿ ರಾಜಿ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಮತ್ತು ಯಾವುದೇ ಪಕ್ಷದ ವಕೀಲರು ಮಧ್ಯ ಪ್ರವೇಶಿಸಲು ಅವರು ನೀಡಬಾರದು ಮತ್ತು ವಿವಾದವನ್ನು ಸಹಾನುಭೂತಿಯಿಂದ ಮತ್ತು ಪ್ರೀತಿಯಿಂದ ಇತ್ಯರ್ಥಪಡಿಸಲು ಪ್ರಯತ್ನಿಸಬೇಕು. ಕೆಲವೊಮ್ಮೆ ಪರಿಸ್ಥಿತಿಯು ತುಂಬಾ ಕೆಟ್ಟದಾಗಿರುತ್ತದೆ, ಬಗೆಹರಿಸುವ ಯಾವ ಮಾರ್ಗವು ಕಂಡುಬರುವುದಿಲ್ಲ. ಆದರೆ ಪ್ರಾಮಾಣಿಕ ಉದ್ದೇಶವಿದ್ದರೆ ಅಲ್ಲಾಹನು ತನ್ನ ಅನುಗ್ರಹದಿಂದ ಈ ಸಂದರ್ಭಗಳನ್ನು ಸರಿಪಡಿಸುತ್ತಾನೆ. ಒಮ್ಮೆ ಅದೇ ರೀತಿಯ ಪತಿ ಮತ್ತು ಪತ್ನಿಯ ವಿವಾದ ನನ್ನ ಬಳಿ ಬಂದಿತು. ಅವರಿಬ್ಬರನ್ನು ಕರೆಸಿ ಅವರಿಗೆ ನಾನು ಬಹಳ ಪ್ರೀತಿಯಿಂದ ಹೇಳಿದೆ, ಆದರೆ ಹುಡುಗ ಹೇಳಿದ್ದೇನೆಂದರೆ: ನಾವು ಯವ ಕಾರಣಕ್ಕೂ ಅವಳನ್ನು ಇಟ್ಟುಕೊಳ್ಳಲು ತಯಾರಿಲ್ಲ. ಏಕೆಂದರೆ ಅವಳು ತನ್ನ ಸಹೋದರನಿಗೆ ಅವಮಾನಿಸಿದ್ದಾಳೆ. ಹುಡುಗಿ ಹೇಳಿದಳು: ನಾನು ಅವರ ಮುಖ ಸಹ ನೋಡಲು ಬಯಸುವುದಿಲ್ಲ. ಏಕೆಂದರೆ ಅವನು ನನ್ನ ಹೆತ್ತವರನ್ನು ಅವಮಾನಿಸಿದ್ದಾನೆ. ನಾನು ಅವರನ್ನು ಸರಿಪಡಿಸಲು ತುಂಬಾ ಪ್ರಯತ್ನಿಸಿದೆ. ಅದರ ಯಾವ ಪ್ರಭಾವವು ಬೀರಲಿಲ್ಲ. ಅವರು ಮೈತ್ರಿಗೆ ಒಪ್ಪಲಿಲ್ಲ. ನಾನು ಅವರನ್ನು ಬೀಳ್ಕೊಟ್ಟೆ. ಆಗ ನಮಾಝಿನ ಸಮಯವಾಗಿತ್ತು. ನಾನು ನಮಾಝ್ ಮಾಡಲು ಹೊರಟೆ. ನಮಾಝಿನಲ್ಲಿ ಅವರ ಹಟ ಕಂಡು ಬಹಳ ದುಃಖಿತನಾದೆ ಮತ್ತು ಅಲ್ಲಾಹನೊಡನೆ ಪ್ರಾರ್ಥಿಸಿದೆ, ಓ ಅಲ್ಲಾಹ್‌ನೇ, ನಮ್ಮ ಜಮಾಅತಿಗೆ ಏನಾಗಿದೆ, ಸಣ್ಣ ಸಣ್ಣ ವಿಷಯಗಳಿಗೆ ಎಷ್ಟೊಂದು ಹಟ ಮಾಡುತ್ತಿದ್ದಾರೆ, ಮರು ದಿನವೇ, ಆ ಹುಡುಗಿ ನನ್ನ ಬಳಿ ಬಂದರು ಮತ್ತು ಅವಳು ನಗುತ್ತಿದ್ದಳು. ಅವಳು ನಗುನಗುತ್ತಾ ನನಗೆ ಅಸ್ಸಲಾಮು ಅಲೈಕುಂ ಎಂದು ಹೇಳಿದಳು. ನಾನು ಹೇಳಿದೆ ಏನು ವಿಷಯ? ಅವಳು ಹೇಳಿದಳು. ಅವರು ನನ್ನನ್ನು ಕರೆಯಲಿಕ್ಕೆ ಬಂದಿದ್ದರು. ನಾನು ಬಂದುಬಿಟ್ಟಿದ್ದೇನೆ. ಹೀಗೆ ಇದಾದ ನಂತರ ಅವರಲ್ಲಿ ಪ್ರೀತಿ ಉಂಟಾಯಿತು. ಈಗ ಅವರಿಗೆ ತುಂಬಾ ಮಕ್ಕಳಿವೆ.

ಆದ್ದರಿಂದ ಖಾಜಿಯರ ಕರ್ತವ್ಯವೇನೆಂದರೆ ತಂದೆಯಾಗಿ ಪ್ರಕರಣಗಳನ್ನು ಬಗೆಹರಿಸಲು ಪ್ರಯತ್ನ ಮಾಡಬೇಕು. ಹುಡುಗಿಯ ಪತಿಯನ್ನ ತನ್ನ ಮಗ ಎಂದು ಭಾವಿಸಬೇಕು ಮತ್ತು ಹುಡುಗಿಯನ್ನು ತನ್ನ ಮಗಳೆಂದು ಭಾವಿಸಬೇಕು. ಈ ಸಮಯ ನನ್ನ ಮಗಳು ತಪ್ಪು ಮಾಡುತ್ತಿದ್ದಾರೆ. ನಾನು ಏನು ಮಾಡಬಹುದಾಗಿತ್ತು. ಯಾವ ನೋವು ತನ್ನ ಮಕ್ಕಳ ಪ್ರೀತಿ ಇರುತ್ತದೆಯೋ ಅದೇ ಪ್ರಕಾರ ಇತರರಿಗೋಸ್ಕರವು ಇರಬೇಕು. ಖಾಜಿಯರ ಮನದಲ್ಲಿ ನೋವು ಇದ್ದರೆ ಇತರರ ಮನದಲ್ಲೂ ನೋವು ಉಂಟಾಗುವುದು. ಪತಿ ಮತ್ತು ಪತ್ನಿಯ ನಡುವಿನ ವಿವಾದಗಳು ವ್ಯವಹಾರಗಳ ವಿವಾದಗಳು ಅಲ್ಲ. ಖಾಜಿ ಮ್ಯಾಜಿಸ್ಟ್ರೇಟ್ ಆಗಿ ನಿರ್ಧರಿಸಲು ಕುಳಿತುಕೊಳ್ಳುತ್ತಾನೆ. ಆದರೆ ಇದು ಸಮುದಾಯದ ನೈತಿಕತೆಯ ಪ್ರಶ್ನೆಯಾಗಿದೆ. ಆದ್ದರಿಂದ ಖಾಜಿಗಳು ಯಾವುದೇ ರೀತಿಯಲ್ಲಿ ಮಾನವ ನೈತಿಕತೆಯನ್ನು ಹಾಳು ಮಾಡದಂತೆ ನೋಡಿಕೊಳ್ಳಬೇಕು. ಅವನು ನಿರ್ಧರಿಸಲು ಪ್ರಾರಂಭಿಸಿದಾಗ, ಅವನು ನನ್ನ ಮಗಳ ಅಥವಾ ನನ್ನ ಮಗನ ಜೀವನವನ್ನು ವ್ಯರ್ಥ ಮಾಡುವ ಪ್ರಶ್ನೆಯಾಗಿ ಪರಿಗಣಿಸಬೇಕು. ಕೆಲವೊಮ್ಮೆ ವಿಚ್ಛೇದನ ಮತ್ತು ಖುಲವನ್ನು ಸಹ ಅನುಮತಿಸಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ನೈತಿಕತೆಯ ಅವನತಿಯ ಸಾಧ್ಯತೆ ಕಡಿಮೆ ಇರುತ್ತದೆ. ಅಂತಹ ಸಂದರ್ಭದಲ್ಲಿ ಅಲ್ಲಾಹನ ಅಸಮಾಧಾನ ಯಾವುದೇ ಅಂಶವು ಇರುವುದಿಲ್ಲ ಎಂದು ಭಾವಿಸಬಹುದುದಾಗಿದೆ."

**(ಅಲ್ ಫಝಲ್ 25 ಜುಲೈ 1946)**

------------****------------

*(ಪುಟ ಸಂಖ್ಯೆ 18ರ ಉಳಿದ ಭಾಗ)*

ರಿಂದ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ವರೆಗಿನ ಆಧ್ಯಾತ್ಮಿಕ ಜಮಾಅತ್‌ಗಳಿಗೆ ಸರ್ವಶಕ್ತನಾದ ಅಲ್ಲಾಹನು ಹಾಕಿಕೊಟ್ಟ ಮಾರ್ಗವು ನಮಗೂ ಒಂದೇ ಆಗಿದೆ. ಸರ್ವಶಕ್ತನಾದ ಅಲ್ಲಾಹನು ಇಬ್ರಾಹೀಮ್(ಅ) ರ ಜಮಾಅತ್ತಿಗಾಗಲಿ, ಹಝ್ರತ್ ಮೂಸ(ಅ)ರ ಸಮುದಾಯಕ್ಕಾಗಲಿ, ಈಸಾ ಮಸೀಹರ(ಅ) ರ ಸಮುದಾಯಕ್ಕಾಗಲಿ, ಪ್ರವಾದಿ ಮುಹಮ್ಮದ್ (ಅ) ರ ಸಮುದಾಯಕ್ಕಾಗಲಿ ಶತ್ರುವಾಗಿರಲಿಲ್ಲ ಮತ್ತು ನಮಗೆ ಸಂಬಂಧಿಕನಲ್ಲ. ಆ ಜನರು ಬಿದ್ದ ಅದೇ ಕುಲುಮೆಗಳಲ್ಲಿ ನೀವು ಬೀಳುವವರೆಗೆ, ಮತ್ತು ಅವರು ಅನುಭವಿಸಿದ ಕಷ್ಟಗಳನ್ನು ನೀವು ಅನುಭವಿಸುವವರೆಗೆ, ನೀವು ಅವುಗಳನ್ನು ಗರಗಸ ಮಾಡಿದ ಅದೇ ಗರಗಸಗಳಿಂದ ಗರಗಸವಾಗುವವರೆಗೆ, ನೀವು ಎಂದಿಗೂ ಯಶಸ್ಸನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಮರಣ ಮತ್ತು ಸರ್ವಶಕ್ತನಾದ ಅಲ್ಲಾಹನಿಗಾಗಿ ಮಾತ್ರ ಮರಣ ಹೊಂದುವುದರಲ್ಲಿ ಜೀವವಿದೆ.

ಹುಝೂರ್(ರ)ರ ಈ ಭಾಷಣ ಸುಮಾರು ಒಂದು ಗಂಟೆ ಕಾಲ ನಡೆಯಿತು. ಇದು ಅವರದೇ ಮಾತುಗಳಲ್ಲಿ ಸಾರಾಂಶವಾಗಿದೆ.

**(ವಿನೀತ: ಬಶೀರ್ ಅಹ್ಮದ್, ಮುಬಲ್ಲಿಗ್, ದೆಹಲಿ)**

**(ಅಕ್ಟೋಬರ್ 4, 1946 ರ ದಿನಪತ್ರಿಕೆ ಅಲ್-ಫಝಲ್ ಖಾದಿಯಾನ್ ದಾರುಲ್ ಅಮಾನ್)**


## ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತಹ್ರೀಕೆ ಜದೀದ್, ಅಂಜುಮನ್ ವಖ್ಫೆ ಜದೀದ್ ಖಾದಿಯಾನ್ ಮತ್ತು ಉಪಸಂಸ್ಥೆಗಳಲ್ಲಿ ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು.

ಮಾಲಿ (ತೋಟಗಾರ) / ಕೇರ್‌ಟೇಕರ್ / ಕಾವಲುಗಾರ / ಅಡುಗೆಗಾರ / ರೊಟ್ಟಿ ಮಾಡುವವ /ಮಸ್ಜಿದ್ ಸೇವಕಗೆ ನಾಲ್ಕನೇ ಗ್ರೇಡ್‌ಗೆ (ಶರತ್ತುಗಳು) ಅವಶ್ಯಕತೆಗಳು

**ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 40 ವರ್ಷಗಳಿಗಿಂತ ಹೆಚ್ಚಿರಬೇಕು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು.

(2) ಅಭ್ಯರ್ಥಿಯ ಯಾವುದೇ ಶೈಕ್ಷಣಿಕ ಅವಶ್ಯಕತೆಗಳಿಲ್ಲ.

(3) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದು.

(4) ಕಾರ್ಮಿಕರ ನೇಮಕಾತಿಗಾಗಿ ಕೇಂದ್ರ ಸಮಿತಿಯು ಸಂದರ್ಶನದಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ತೆಗೆದುಕೊಳ್ಳಲಾಗುತ್ತದೆ.

(5) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ.

(6) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ/ಅವಳ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ.

(7) ಖಾದಿಯಾನ್‌ಗೆ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.

**ಗಮನಿಸಿ: ಸಂದರ್ಶನದ ದಿನಾಂಕವನ್ನು ನಂತರ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516
ಮೊಬೈಲ್: 9682627592, 9888232530.
ಕಛೇರಿ: 01872-501130 E-Mail : diwan@qadian.in



**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**

**https://akhbarbadr.in/Kannada/#gsc.tab=0**

# ಹಝ್ರತ್ ಮುಸ್ಲೆಹ್ ಮೌಊದ್(ರ) ರವರ ಮಹಾನ್ ಸಾಧನೆ
# ಜಮಾಅತ್ತಿನ ವ್ಯವಸ್ಥೆಗಳು ಮತ್ತು ಉಪ-ಸಂಘಟನೆಗಳ ಸ್ಥಾಪನೆ ಮತ್ತು ಅವುಗಳ ಅನುಗ್ರಹಗಳು

ಈ ಭಾಷಣವನ್ನು "ಸವಾನೆಹ್ ಫಝ್ಲೆ ಉಮರ್" (ಫಝ್ಲೆ ಉಮರ್ ಅವರ ಜೀವನ ಚರಿತ್ರೆ) ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ, ಅದರ ಐದು ಸಂಪುಟಗಳು ನಮ್ಮ ವೆಬ್‌ಸೈಟ್ ಅಲ್-ಇಸ್ಲಾಂನಲ್ಲಿ ಲಭ್ಯವಿದೆ. ಮೊದಲ ಎರಡು ಸಂಪುಟಗಳ ಲೇಖಕರು ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್(ರಹ್) ಅವರಾಗಿದ್ದಾರೆ, ನಂತರ ಅವರು ಖಿಲಾಫತ್ ಪೀಠವನ್ನು ಅಲಂಕರಿಸಿದರು. ಹೀಗೆ, ಈ ಭಾಷಣದಲ್ಲಿ ವ್ಯಕ್ತಪಡಿಸಲಾದ ಆಲೋಚನೆಗಳು, ವಿಚಾರಗಳು ಮತ್ತು ಮಾತುಗಳು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರನ್ನು ಬಹಳ ಹತ್ತಿರದಿಂದ ನೋಡಿದ ಮಹಾನ್ ವ್ಯಕ್ತಿತ್ವದ್ದಾಗಿದೆ ಮತ್ತು ಅವರ(ರ) ವ್ಯಕ್ತಿತ್ವ ಹಾಗೂ ಅವರ ಮಹಾತ್ಕಾರ್ಯಗಳ ಇಂತಹ ಸುಂದರ ಮತ್ತು ಉತ್ತಮವಾದ ಚಿತ್ರಣವನ್ನು ಚಿತ್ರಿಸಲು ಯಾರಿಂದಲೂ ಸಾಧ್ಯವಿಲ್ಲ.

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ 52 ವರ್ಷಗಳ ಕಾಲ ಖಿಲಾಫತ್ ಪೀಠವನ್ನು ಅಲಂಕರಿಸಿದ್ದರು. ಈ ಅವಧಿಯಲ್ಲಿ, ಅವರು ಇಸ್ಲಾಂ ಮತ್ತು ಅಹ್ಮದಿಯ್ಯತ್‌ಗೆ ಉತ್ತಮ ಸೇವೆ ಸಲ್ಲಿಸಿದರು ಮತ್ತು ಪ್ರವಾದಿಯ ಲಕ್ಷಣವಾಗಿರುವಂತಹ ಅತ್ಯುತ್ತಮ ಕಾರ್ಯಗಳನ್ನು ಸಾಧಿಸಿದರು. ಸರ್ವಶಕ್ತನಾದ ಅಲ್ಲಾಹನು ನಿಮಗೆ ಪ್ರವಾದಿಯ ಹೆಸರನ್ನು ನೀಡದಿದ್ದರೂ, ಅವನು ನಿಮಗೆ ಪ್ರವಾದಿಯ ಕಾರ್ಯವನ್ನು ವಹಿಸಿಕೊಟ್ಟನು. ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ:

"ನಾನು ಖಲೀಫ ಅಲ್ಲ ಬದಲಿಗೆ ವಾಗ್ದಾತ್ತ ಖಲೀಫನಾಗಿದ್ದೇನೆ. ನಾನು ನಿಯೋಜಿತನಲ್ಲ ಆದರೆ ನನ್ನ ಧ್ವನಿಯು ಸರ್ವಶಕ್ತನಾದ ಅಲ್ಲಾಹನ ಧ್ವನಿಯಾಗಿದ್ದು, ಸರ್ವಶಕ್ತನಾದ ಅಲ್ಲಾಹನು ಈ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಮೂಲಕ ತಿಳಿಸಿದ್ದಾನೆ. ಈ ಖಲೀಫತ್‌ನ ಸ್ಥಾನವು ಮಾಮುರಿಯತ್ (ನಿಯೋಜಿತ) ಮತ್ತು ಖಿಲಾಫತ್ ನಡುವೆ ಇದೆ ಮತ್ತು ಈ ಅವಕಾಶವು ಅಹ್ಮದಿಯಾ ಜಮಾಅತ್ ವ್ಯರ್ಥವಾಗಿ ಹೋಗಲು ಅವಕಾಶ ನೀಡುವುದಿಲ್ಲ ಮತ್ತು ನಂತರ ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ ಸಫಲವಾಗಿ ತಿರುಗುತ್ತದೆ. ಪ್ರವಾದಿಯವರು ಪ್ರತಿದಿನ ಬರುವುದಿಲ್ಲ ಎಂಬುದು ಎಷ್ಟು ಸತ್ಯವೋ, ಅದೇ ರೀತಿ ವಾಗ್ದಾತ್ತ ಖಲೀಫರು ಪ್ರತಿದಿನ ಬರುವುದಿಲ್ಲ ಎಂಬುದೂ ಸತ್ಯವಾಗಿದೆ." (ಸವಾನೆಹ್ ಫಝ್ಲೆ ಉಮರ್ ಸಂಪುಟ-4, ಪುಟ-508, ಫಝ್ಲೆ ಉಮರ್ ಫೌಂಡೇಷನ್)

ನಿಮ್ಮ(ರ) ಆಗಮನವನ್ನು ತನ್ನ ಆಗಮನವೆಂದು ವಿವರಿಸುತ್ತಾ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದನು:

**ಕಅನ್ನಲ್ಲಾಹ ನಝಲ ಮಿನಸ್ಸಮಾಯಿ**

ಅಂದರೆ ಅವರ ಬರುವಿಕೆಯು ದೇವರು ಸ್ವತಃ ಆಕಾಶದಿಂದ ಇಳಿದಂತೆಯೇ ಇದೆ. ಇದು ಸರ್ವಶಕ್ತನಾದ ಅಲ್ಲಾಹನ ಮಹತ್ತರವಾದ ಸಹಾಯ ಮತ್ತು ಬೆಂಬಲದ ಸೂಚನೆಯಾಗಿತ್ತು. ಈ ಸ್ಥಳದಲ್ಲಿ ನಿಂತು ಗಾಂಭೀರ್ಯದಿಂದ ಆಲೋಚಿಸುವುದು ಯೋಗ್ಯವಾಗಿದೆ ಅಂದರೆ ಯಾರ ಆಗಮನವನ್ನು ಅಲ್ಲಾಹನು ತನ್ನ ಆಗಮನವೆಂದು ಘೋಷಿಸಿದ್ದಾನೊ ಆ ವ್ಯಕ್ತಿಯ ಘನತೆ ಹಾಗೂ ಆ ವ್ಯಕ್ತಿಯು ಎಂತಹ ಸ್ಥಾನಮಾನದ ವ್ಯಕ್ತಿಯಾಗಿರುತ್ತಾನೆ ಎಂದು ಪರಿಗಣಿಸಲಾಗುತ್ತದೆ. ನಿಸ್ಸಂದೇಹವಾಗಿ, ಅವರ ಅಸ್ತಿತ್ವವು ಸಾಮಾನ್ಯ ಅಸ್ತಿತ್ವವಾಗಿರಲಿಲ್ಲ ಬದಲಿಗೆ "ತಾವು ಶತಮಾನಗಳಲ್ಲಿ ಒಮ್ಮೆ ಮಾತ್ರವಲ್ಲದೆ ಸಾವಿರಾರು ವರ್ಷಗಳಲ್ಲಿ ಒಮ್ಮೆ ಮಾನವೀಯತೆಯ ದಿಗಂತದ ಮೇಲೆ ಏರುತ್ತಿರುವ ಆದಮ್‌ರ ಪ್ರಖ್ಯಾತ ಸಂತತಿಗಳಲ್ಲಿ ಒಬ್ಬರಾಗಿದ್ದಿರಿ ಮತ್ತು ಅವರ ದಿವ್ಯಪ್ರಕಾಶವು ಒಂದು ಪೀಳಿಗೆಯ ಮೇಲೆ ಮಾತ್ರವಲ್ಲದೆ ಇಪ್ಪತ್ತು ಮಾನವ ತಲೆಮಾರುಗಳ ಮೇಲೆ ಪ್ರಕಾಶಮಯವಾಗುತ್ತಲೇ ಇರುತ್ತದೆ."

ಆತ್ಮೀಯ ಓದುಗರೇ! ನೀವು ಖಿಲಾಫತ್ ಪೀಠವನ್ನು ಅಲಂಕರಿಸಿಕೊಳ್ಳಲು ಸಾಧ್ಯವಾದ ತಕ್ಷಣ, ನೀವು ಮೊದಲು ಎದುರಿಸಬೇಕಾದದ್ದು ಖಿಲಾಫತ್ ಅನ್ನು ನಿರಾಕರಿಸುವ ಪ್ರಲೋಭನೆಯಾಗಿತ್ತು. ಜಮಾಅತ್ ವ್ಯವಸ್ಥೆಯ ಪ್ರಮುಖ ಹುದ್ದೆಗಳನ್ನು ಇನ್ನೂ ಖಿಲಾಫತ್ ಅನ್ನು ನಿರಾಕರಿಸಿದವರು ಆಕ್ರಮಿಸಿಕೊಂಡಿದ್ದರು. ಪ್ರೆಸ್‌ನ (ಮುದ್ರಣಯಂತ್ರ) ಹೆಚ್ಚಿನ ಭಾಗವು ಅವರ ಕೈಯಲ್ಲಿತ್ತು. ಅವರ ಬಳಿ ಹಣದ ಕೀಲಿಗಳು ಇದ್ದವು. ಮತ್ತು ಅಂತಹ ಪ್ರಸಿದ್ಧ ಮತ್ತು ತೋರಿಕೆಯಲ್ಲಿ ಮಹಾನ್ ವ್ಯಕ್ತಿಗಳು ಅವರೊಂದಿಗೆ ಸಮಾನ ಮನಸ್ಸಿನವರಾಗಿದ್ದರು, ಅವರ ಪ್ರಭಾವ ಸಮುದಾಯದ ಮೇಲೆ ಆಳವಾದ ಮತ್ತು ವ್ಯಾಪಕವಾಗಿತ್ತು. ಜಮಾಅತ್ತಿನ ಎಲ್ಲಾ ಸಂವಹನ ಮತ್ತು ಪ್ರಕಟಣೆಯ ಸಾಧನಗಳನ್ನು ಬಳಸಿಕೊಂಡು, ಅವರು ಭಾರತದಾದ್ಯಂತ ಖಿಲಾಫತ್ ವ್ಯವಸ್ಥೆಯನ್ನು ನಿರಾಕರಿಸಲು ಅತ್ಯಂತ ಅಪಾಯಕಾರಿ ಮತ್ತು ವಿಷಕಾರಿ ಪ್ರಚಾರ ಅಭಿಯಾನವನ್ನು ತ್ವರಿತವಾಗಿ ಪ್ರಾರಂಭಿಸಿದರು.

ಆತ್ಮೀಯ ಓದುಗರೇ! ನಂತರ ಅನೇಕ ಪರೀಕ್ಷೆಗಳು ಬಂದರೂ, ದೃಢಸಂಕಲ್ಪದ ಪರೀಕ್ಷೆಗಳಲ್ಲಿ ಇದು ನಿಸ್ಸಂದೇಹವಾಗಿ ಒಂದು ವಿಶೇಷ ಪರೀಕ್ಷೆಯಾಗಿತ್ತು. ಸರ್ವಶಕ್ತನಾದ ಅಲ್ಲಾಹನು ತನ್ನ ವಿಶೇಷ ಅನುಗ್ರಹ ಮತ್ತು ಕರುಣೆಯಿಂದ ಪ್ರತಿಯೊಂದು ಕಷ್ಟದ ಸಮಯದಲ್ಲೂ ನಿಮ್ಮನ್ನು ಬೆಂಬಲಿಸಿದನು, ಮತ್ತು ನೀವು ನಿಮ್ಮ ಜಮಾಅತ್ ಅನ್ನು ಅತ್ಯಂತ ಅಪಾಯಕಾರಿ ಕಣಿವೆಗಳಿಂದ ದೊಡ್ಡ ಯಶಸ್ಸು ಮತ್ತು ಸಾಧನೆಯೊಂದಿಗೆ ರಕ್ಷಿಸಿದರು, ವಿಜಯ ಮತ್ತು ಬೆಂಬಲದ ಹೊಸ ಎತ್ತರಗಳತ್ತ ಸಾಗುತ್ತಿದ್ದರು.

ಆತ್ಮೀಯ ಕೇಳುಗರೇ! ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಮೊದಲ ಮತ್ತು ಶ್ರೇಷ್ಠ ಸಂಘಟನಾ ಸಾಧನೆಯೆಂದರೆ ಅವರು ಚದುರಿದ ಜಮಾಅತ್ ಅನ್ನು ಒಂದೇ ಸೂರಿನಡಿ ತ್ವರಿತವಾಗಿ ಒಟ್ಟುಗೂಡಿಸಿದರು. ಚದುರಿದ ಎಲೆಗಳನ್ನು ಒಟ್ಟುಗೂಡಿಸಿ ಬಲವಾದ ಸರಪಳಿಯಲ್ಲಿ ಕಟ್ಟಲಾಯಿತು. **ವಲಯುಬದ್ದಿಲನ್ನಲಹುಮ್ ಮಿಮ್ ಬಅ್‌ದಿ ಖೌಫಿಹಿಮ್ ಅಮ್‌ನಾ**. ಎಂಬ ವಾಗ್ದಾನವು ಮತ್ತೊಮ್ಮೆ ಈಡೇರಿತು. ಮತ್ತೊಮ್ಮೆ, ಇಸ್ಲಾಂನ ಜೀವನ, ಅದರ ಸಮೃದ್ಧಿ ಮತ್ತು ಅದರ ಶಾಂತಿಯು ಖಿಲಾಫತ್ ವ್ಯವಸ್ಥೆಯೊಂದಿಗೆ ಶಾಶ್ವತವಾಗಿ ಸಂಬಂಧ ಹೊಂದಿದೆ ಎಂಬ ಸತ್ಯಾಂಶವನ್ನು ಬಹಿರಂಗಪಡಿಸಲಾಯಿತು.

ಓರ್ವ ವಾಗ್ದಾತ್ತ ಸುಧಾರಕರಾಗಿ ನಿಮ್ಮ ಎಲ್ಲಾ ಸಾಧನೆಗಳನ್ನು ನಾವು ಅವಲೋಕಿಸಿದರೆ, ನಿಮ್ಮ ಈ ಸಾಧನೆಯು ನಿಸ್ಸಂದೇಹವಾಗಿ ವಿಶಿಷ್ಟವಾದ ವೈಭವ ಮತ್ತು ಹೃದಯಸ್ಪರ್ಶಿ ತೇಜಸ್ಸಿನಿಂದ ಕಣ್ಣನ್ನು ಆಕರ್ಷಿಸುತ್ತದೆ, ಏಕೆಂದರೆ ನೀವು ಖಿಲಾಫತ್‌ನ ಶ್ರೇಷ್ಠತೆ ಮತ್ತು ಮಹತ್ವವನ್ನು ಅಹ್ಮದೀಯರ ಹೃದಯಗಳಲ್ಲಿ ಶಾಶ್ವತವಾಗಿ ಸ್ಪಷ್ಟಪಡಿಸಿದ್ದೀರಿ. ಭಿನ್ನಾಭಿಪ್ರಾಯ ಮತ್ತು ವಿಭಜನೆಯ ತತ್ವಶಾಸ್ತ್ರ ಮತ್ತು ಪ್ರೇರಣೆಗಳನ್ನು ಜಮಾಅತ್‌ಗೆ ಪದೇ ಪದೇ ಎಷ್ಟು ಸ್ಪಷ್ಟತೆಯೊಂದಿಗೆ ಪ್ರಸ್ತುತಪಡಿಸಲಾಯಿತು ಎಂದರೆ, ಖಿಲಾಫತ್ ವ್ಯವಸ್ಥೆಯನ್ನು ಹಾಳುಮಾಡಲು ಯಾವುದೇ ಚಳುವಳಿ ಹುಟ್ಟಿಕೊಂಡಾಗಲೆಲ್ಲಾ, ಯಾವುದೇ ರೂಪದಲ್ಲಿ, ಜಮಾಅತ್ ಅದನ್ನು ಹಿಂಜರಿಕೆಯಿಲ್ಲದೆ ಗುರುತಿಸಿತು ಮತ್ತು ಬಲವಾಗಿ ತಿರಸ್ಕರಿಸಿತು.

ಅಹ್ಮದಿಯಾ ಜಮಾಅತ್ತಿನ ಇಮಾಮರಾಗಿ ಅವರು ಖಿಲಾಫತ್ ಕಾಲಘಟ್ಟದ ಆರಂಭದಿಂದಲೇ ಇಸ್ಲಾಮಿನ ಖಿಲಾಫತೆ ರಾಶಿದ (ಪ್ರವಾದಿ ಮುಹಮ್ಮದ್(ಸ)ರ ಖಲೀಫರ ಕಾಲ) ಎದುರಿಸಿದ ಅದೇ ಬೆದರಿಕೆಗಳನ್ನು ಖಿಲಾಫತೆ ಅಹ್ಮದಿಯಾವೂ ಕೂಡ ಎದುರಿಸಿದರೆ, ಜಮಾಅತ್ ಆ ಬೆದರಿಕೆಗಳನ್ನು ಯಶಸ್ವಿಯಾಗಿ ಎದುರಿಸಲು ಸಾಧ್ಯವಾಗುವ ರೀತಿಯಲ್ಲಿ ಜಮಾಅತ್‌ನ ವ್ಯವಸ್ಥೆಯನ್ನು ಬಲಪಡಿಸುವತ್ತ ವಿಶೇಶ ಗಮನ ನೀಡುತ್ತಿದ್ದರು. ಇದಲ್ಲದೆ, ರಾಷ್ಟ್ರಗಳ ಪ್ರಗತಿ ಮತ್ತು ಅವನತಿಯ ಕಾರಣಗಳನ್ನು ಅವಲೋಕಿಸುತ್ತಾ, ವಿಭಜನೆಗಳಿಂದ ಮುಕ್ತವಾಗಿರುವ ಮತ್ತು ಯಾವಾಗಲೂ ಅಖಂಡವಾಗಿ ಉಳಿಯುವ ಸಮುದಾಯಕ್ಕೆ ನಿಜವಾದ ಮತ್ತು ಸಕ್ರಿಯ ಜೀವನವನ್ನು ಖಾತರಿಪಡಿಸುವ ಎಲ್ಲಾ ವಿಧಾನಗಳನ್ನು ಅಳವಡಿಸಿಕೊಳ್ಳಲು ಅವರು ಬಯಸಿದ್ದರು. ಜಮಾಅತ್ ವ್ಯವಸ್ಥೆಯನ್ನು ರೂಪಿಸುವ ಪ್ರಕ್ರಿಯೆಯಲ್ಲಿ ನೀವು ಅಳವಡಿಸಿಕೊಂಡ ವಿಧಾನಗಳು ಮತ್ತು ನೀವು ರೂಪಿಸಿದ ತಂತ್ರಗಳು ಒಬ್ಬ ಇತಿಹಾಸಕಾರ ಮತ್ತು ಚಿಂತಕ ಎರಡೂ ಆಗಿದ್ದ ವ್ಯಕ್ತಿಗೆ ಮಾತ್ರ ಸಾಧ್ಯ. ಜ್ಞಾನವುಳ್ಳವನು ಮತ್ತು ಪ್ರಾಯೋಗಿಕನೂ ಆಗಿರಬೇಕು. ಮಾನವ ಸ್ವಭಾವದ ಪರಿಚಯವೂ ಅವನಿಗಿರಬೇಕು ಮತ್ತು ವಿವಿಧ ಮಾನವ ವರ್ಗಗಳ ಮನಸ್ಥಿತಿಗಳನ್ನು ಸೂಕ್ಷ್ಮವಾಗಿ ಗಮನಿಸುವವನಾಗಿರಬೇಕು ಮತ್ತು ಇದೆಲ್ಲದರ ಜೊತೆಗೆ, ಅನುಭವಿ ಆಧ್ಯಾತ್ಮಿಕ ಜೀವಿಯಾಗಿರಬೇಕು. ಈ ಎಲ್ಲಾ ಪರಿಪೂರ್ಣತೆಗಳು ನಿಮ್ಮಲ್ಲಿ ಇದ್ದವು, ಮತ್ತು ಅವುಗಳ ಸಂಯೋಜನೆಯು ಇಂದು ಅಹ್ಮದಿಯಾ ಜಮಾಅತ್ ರೂಪದಲ್ಲಿ ಜಗತ್ತಿಗೆ ಒಂದು ಅನುಕರಣೀಯ ವ್ಯವಸ್ಥೆಯಾಗಿ ಪ್ರಸ್ತುತಪಡಿಸಬಹುದಾದ ವ್ಯವಸ್ಥೆಯನ್ನು ಸೃಷ್ಟಿಸಿತು.

ಇಡೀ ವ್ಯವಸ್ಥೆಯ ಸರ್ವೋಚ್ಚ ಅಧಿಕಾರವು ಖಲೀಫರ ಮೇಲಿದೆ ಎಂಬುದನ್ನು ನೆನಪಿನಲ್ಲಿಡಬೇಕು. ಮತ್ತು ಜಾಗತಿಕ ಜಮಾಅತ್‌ನ ಶಾಖೆಗಳು ಹಳ್ಳಿಗಳು ಮತ್ತು ನಗರಗಳಿಂದ ಜಿಲ್ಲೆಗಳು, ಪ್ರಾಂತ್ಯಗಳು ಮತ್ತು ದೇಶಗಳಿಗೆ ಹರಡಿವೆ. ಇವೆಲ್ಲವೂ ಜಪಮಾಲೆಯ ಮಣಿಗಳಂತೆ ಬಲವಾದ ಮತ್ತು ಸುಸಂಬದ್ಧವಾದ ದಾರದಲ್ಲಿ ಸಂಪರ್ಕ ಹೊಂದಿವೆ. ಮೂರು ಅಥವಾ ಹೆಚ್ಚಿನ ಅಹ್ಮದೀಯರು ಇರುವಲ್ಲೆಲ್ಲಾ, ಒಂದು ಔಪಚಾರಿಕ ಜಮಾಅತ್

ಅನ್ನು ಸ್ಥಾಪಿಸಲಾಗುತ್ತದೆ ಮತ್ತು ಸಂದರ್ಭಗಳನ್ನು ಅವಲಂಬಿಸಿ, ನಾಮನಿರ್ದೇಶನ ಅಥವಾ ಚುನಾವಣೆಯ ಮೂಲಕ ಅಧ್ಯಕ್ಷರನ್ನು ನೇಮಿಸಲಾಗುತ್ತದೆ. ಪ್ರಮುಖ ಜಮಾಅತ್‌ಗಳಲ್ಲಿ ಅಮೀರ್ (ಅಮಾರತ್) ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಅರ್ಥದಲ್ಲಿ, ಪ್ರತಿಯೊಂದು ಸ್ಥಳೀಯ ಜಮಾಅತ್ ತನ್ನ ಅತ್ಯುನ್ನತ ಅಧಿಕಾರಿಯಾಗಿ ಸದರ್ ಅಥವಾ ಅಮೀರ್ ಹೊಂದಿರುತ್ತದೆ. ನಂತರ, ಪ್ರತಿ ಜಿಲ್ಲೆ ಅಥವಾ ಪ್ರಾಂತ್ಯದ ಜಮಾಅತ್‌ಗಳಿಗೆ ಒಬ್ಬ ಅಮೀರ್ ಅನ್ನು ನೇಮಿಸಲಾಗುತ್ತದೆ. ನಂತರ, ಇದರ ಮೇಲೆ, ಇಡೀ ದೇಶಕ್ಕೆ ಒಬ್ಬ ರಾಷ್ಟ್ರೀಯ ಅಮೀರ್ ಇರುತ್ತಾನೆ. ಇದಲ್ಲದೆ, ಜಮಾಅತ್ ವ್ಯವಸ್ಥೆಯ ವಿವಿಧ ಇಲಾಖೆಗಳನ್ನು ಸ್ಥಾಪಿಸಲಾಗುತ್ತದೆ ಮತ್ತು ಅವುಗಳ ಮೇಲ್ವಿಚಾರಕರನ್ನು ಸೆಕ್ರೇಟರಿಗಳು (ಕಾರ್ಯದರ್ಶಿಗಳು) ಎಂದು ಕರೆಯಲಾಗುತ್ತದೆ, ಉದಾಹರಣೆಗೆ ಸೆಕ್ರೇಟರಿ ಮಾಲ್ (ಹಣಕಾಸು ಕಾರ್ಯದರ್ಶಿ), ಸೆಕ್ರೇಟರಿ ತಅ್‌ಲೀಮ್ (ಶಿಕ್ಷಣ ಕಾರ್ಯದರ್ಶಿ), ಸೆಕ್ರೇಟರಿ ಜಾಯೆದಾದ್ (ಆಸ್ತಿ ಕಾರ್ಯದರ್ಶಿ), ಸೆಕ್ರೇಟರಿ ಝಿಯಾಫತ್ ಇತ್ಯಾದಿ. ಈ ಎಲ್ಲಾ ಹುದ್ದೆದಾರರನ್ನು ಚುನಾವಣೆಯ ಮೂಲಕ ಅಥವಾ ಕೆಲವು ಸಂದರ್ಭಗಳಲ್ಲಿ ನಾಮನಿರ್ದೇಶನದ ಮೂಲಕ ನೇಮಿಸಲಾಗುತ್ತದೆ. ಅವರೆಲ್ಲರು ಪ್ರಾಮಾಣಿಕತೆಯ ಆಧಾರದ ಮೇಲೆ ಸಂಪೂರ್ಣವಾಗಿ ಸ್ವಯಂಪ್ರೇರಣೆಯಿಂದ ತ್ಯಾಗದ ಮನೋಭಾವದಿಂದ ಬಹಳ ಸಂತೋಷದಿಂದ ಸೇವೆ ಸಲ್ಲಿಸುತ್ತಾರೆ. ಈ ಸ್ಥಳೀಯ, ಜಿಲ್ಲಾ, ಪ್ರಾಂತೀಯ ಮತ್ತು ರಾಷ್ಟ್ರೀಯ ಹುದ್ದೆದಾರರ ಜೊತೆಗೆ, ಈ ಕೆಳಗಿನ ಪ್ರಮುಖ ಸಂಸ್ಥೆಗಳು ಖಲೀಫರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತವೆ.

**ಸದರ್ ಅಂಜುಮನ್ ಅಹ್ಮದಿಯಾ:**

ಇದು ಜಮಾಅತ್ತಿನ ಅತಿದೊಡ್ಡ ಮತ್ತು ಪ್ರಮುಖ ಸಂಸ್ಥೆಯಾಗಿದ್ದು, ಇದನ್ನು ಅಹ್ಮದಿಯಾ ಸಮುದಾಯದ ಸ್ಥಾಪಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ಜೀವಿತಾವಧಿಯಲ್ಲಿ ಸ್ಥಾಪಿಸಿದರು. ಆರಂಭದಲ್ಲಿ, ಇದು ಈ ರೂಪವನ್ನು ಹೊಂದಿರಲಿಲ್ಲ, ಆದರೆ ವಿವಿಧ ಹಂತಗಳನ್ನು ದಾಟಿದ ನಂತರ, ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರ ಕಾಲದಲ್ಲಿ ಅದು ಕ್ರಮೇಣ ಈಗಿನ ರೂಪವನ್ನು ಪಡೆದುಕೊಂಡಿತು. ಜಮಾಅತ್ತಿನ ಕಡ್ಡಾಯ ಚಂದಗಳ ನಿರ್ವಹಣೆ ಮತ್ತು ನಿಬಂಧನೆ ಮತ್ತು ಎಲ್ಲಾ ತರಬೇತಿ, ಶೈಕ್ಷಣಿಕ, ತಬ್ಲೀಗಿ ಮತ್ತು ಮಾನವ ಸೇವೆಯ ಕಾರ್ಯಗಳ ಮೇಲ್ವಿಚಾರಣೆಯನ್ನು ಈ ಸಂಘಕ್ಕೆ ವಹಿಸಲಾಗಿದೆ. ಎಲ್ಲಾ ಸ್ಥಳೀಯ, ಜಿಲ್ಲಾ ಮತ್ತು ಪ್ರಾಂತೀಯ ಅಮಾರತ್ ವ್ಯವಸ್ಥೆಗಳು ಈ ಸಂಘದ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತವೆ. ಈ ಸಂಘದ ಅಡಿಯಲ್ಲಿ ಹಲವಾರು ಕಚೇರಿಗಳು ಮತ್ತು ಇಲಾಖೆಗಳಿವೆ. ಪ್ರತಿಯೊಂದು ಇಲಾಖೆಯ ಉನ್ನತ ಅಧಿಕಾರಿಯನ್ನು "ನಾಝಿರ್" ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ನಾಝಿರ್ ತಅ್‌ಲೀಮ್, ನಾಝಿರ್ ಇಸ್ಲಾಹ್ ವ ಇರ್ಷಾದ್, ನಾಝಿರ್ ನಶ್ರೊ ಇಶಾಅತ್, ನಾಝಿರ್ ಬೈತುಲ್ ಮಾಲ್ ಆಮದ್ ವ ಖರ್ಚ್, ನಾಝಿರ್ ಉಮೂರೆ ಆಮ್ಮ ಇತ್ಯಾದಿ. ಮತ್ತು ಇಡೀ ಅಂಜುಮನ್‌ನ ಮೇಲ್ವಿಚಾರಕನನ್ನು "ನಾಝಿರ್ ಅಅ್‌ಲಾ" ಎಂದು ಕರೆಯಲಾಗುತ್ತದೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ದಿನನಿತ್ಯದ ಆಡಳಿತಾತ್ಮಕ ವಿಷಯಗಳಲ್ಲಿ ಮೇಲ್ವಿಚಾರಕರನ್ನು ಕರೆಸಿ ಅವರಿಗೆ ನೇರ ಸೂಚನೆಗಳನ್ನು ನೀಡುತ್ತಿದ್ದರು ಮತ್ತು ಅವರ ಕೆಲಸವನ್ನು ಸ್ವತಃ ಮೇಲ್ವಿಚಾರಣೆ ಮಾಡುತ್ತಿದ್ದರು. ಇದಲ್ಲದೆ, ಅವರು ಕೆಲವೊಮ್ಮೆ ಸಾರ್ವಜನಿಕ ಭಾಷಣಗಳಲ್ಲಿಯೂ ಜಮಾಅತ್ ಕೂಡ ಜಮಾಅತ್ತಿನ ವ್ಯವಸ್ಥೆಯ ಬಗ್ಗೆ ಅರಿವು ಮೂಡಿಸುವ ರೀತಿಯಲ್ಲಿ ಮತ್ತು ಭವಿಷ್ಯದಲ್ಲಿ ಜಮಾಅತ್ತಿಗೆ ತರಬೇತಿ ಹೊಂದಿರುವ ಕಾರ್ಯಕರ್ತರು ಲಭಿಸುವ ರೀತಿಯಲ್ಲಿ ಅವರು ನಾಝಿರ್‌ಗಳನ್ನು ಮಾರ್ಗದರ್ಶನ ನೀಡುತ್ತಿದ್ದರು.

ಆಡಳಿತದ ಮುಖ್ಯಸ್ಥರಾಗಿ, ಅವರು ತತ್ವಬದ್ಧ ಮತ್ತು ಆಗಾಗ್ಗೆ ವಿವರವಾದ ಮಾರ್ಗದರ್ಶನವನ್ನು ನೀಡುತ್ತಿದ್ದರೂ, ಅವರು ಕಾಲಕಾಲಕ್ಕೆ ಕೆಲಸವನ್ನು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿದ್ದರು, ಮತ್ತು ಕೆಲವೊಮ್ಮೆ ತೀವ್ರತೆಯಿಂದ ಮತ್ತು ಕೆಲವೊಮ್ಮೆ ಸೌಮ್ಯತೆಯಿಂದ, ಕೆಲವೊಮ್ಮೆ ದೃಢವಾದ ಹಿಡಿತದಿಂದ ಮತ್ತು ಕೆಲವೊಮ್ಮೆ ಹೃದಯಸ್ಪರ್ಶಿ ಕ್ಷಮೆಯೊಂದಿಗೆ, ಅವರು ಆಡಳಿತಗಾರರು ಮತ್ತು ಕಾರ್ಮಿಕರಿಗೆ ಮಾರ್ಗದರ್ಶನ ನೀಡಿದರು. ಕ್ಷಮೆಯ ಸಮಯದಲ್ಲಿ, ನಿಮ್ಮ ಕ್ಷಮಿಸುವ ಶೈಲಿ ತುಂಬಾ ಪ್ರೀತಿಪಾತ್ರವಾಗಿತ್ತು ಮತ್ತು ನೀವು ಅನೇಕ ನಿರ್ಲಕ್ಷ್ಯಗಳಿಗೆ ಕಣ್ಣು ಮುಚ್ಚಿಕೊಳ್ಳುತ್ತಿದ್ದರು ಮತ್ತು ಬಂಧನದ ಸಮಯದಲ್ಲಿ, ನೀವು ಆಡಳಿತಾತ್ಮಕ ದೌರ್ಬಲ್ಯಗಳನ್ನು ಬಹಳ ಸೂಕ್ಷ್ಮವಾಗಿ ಗುರುತಿಸುತ್ತಿದ್ದರು. ಸಾಮಾನ್ಯ ಕಾರ್ಯಕರ್ತರಿಗೆ ನಿಗದಿತ ದೈನಂದಿನ ಕಚೇರಿ ಸಮಯವಿದ್ದರೂ, ಜಮಾಅತ್ತಿನ ಪ್ರಮುಖ ಅಗತ್ಯಗಳ ಸಮಯದಲ್ಲಿ, ನೀವು ಎಂದಿಗೂ ಕಚೇರಿ ಸಮಯವನ್ನು ಪರಿಗಣಿಸಲಿಲ್ಲ ಮತ್ತು ಪ್ರತಿಯೊಬ್ಬ ಕಾರ್ಯಕರ್ತನಿಂದ ದಿನದ 24 ಗಂಟೆಗಳ ಕಾಲ ಹಾಜರಾಗಬೇಕು ಎಂದು ನಿರೀಕ್ಷಿಸಿದರೆ ಆತನು 24 ಗಂಟೆಗಳ ಕಾಲವು ಜಮಾಅತ್ತಿನ ಸೇವೆಗೆ ಸಿದ್ಧನಾಗಿರಬೇಕು ಎಂದು ನಿರೀಕ್ಷಿಸುತ್ತಿದ್ದರು. ನಿಮ್ಮ ಮಟ್ಟಿಗೆ ಹೇಳುವುದಾದರೆ, ಕಚೇರಿ ಸಮಯ ಎಷ್ಟೇ ಇರಲಿ ಮತ್ತು ಹಗಲು ರಾತ್ರಿಗಳ ಪರಿಭ್ರಮಣೆ ಎಷ್ಟೇ ಇರಲಿ, ನೀವು ಸಾಧ್ಯವಾದಷ್ಟು ಸಮಯವನ್ನು ಜಮಾಅತ್ತಿನ ಕೆಲಸಕ್ಕೆ ಮೀಸಲಿಡುತ್ತಿದ್ದರು. ದಿನಕ್ಕೆ ಸುಮಾರು ಹದಿನಾರು ಗಂಟೆಗಳ ಕಾಲ ಕೆಲಸ ಮಾಡುವುದು ನಿಮ್ಮ ಸಾಮಾನ್ಯ ದಿನಚರಿಯಾಗಿತ್ತು. ನಿಮ್ಮ ಅಧೀನ ಕರ್ಯಕರ್ತರುಗಳಿಂದ ನೀವು ಅದೇ ಕಠಿಣ ಪರಿಶ್ರಮವನ್ನು ನಿರೀಕ್ಷಿಸಿದ್ದರು. ಆದ್ದರಿಂದ, ಜಮಾಅತ್ತಿನ ಹಿತಾಸಕ್ತಿಗೆ ಅಗತ್ಯವಿದ್ದಾಗಲೆಲ್ಲಾ, ಸಮಯವನ್ನು ಲೆಕ್ಕಿಸದೆ, ಅವರು ಸಂಬಂಧಿತ ಅಧಿಕಾರಿಗಳಿಗೆ ನೆನಪಿಸುತ್ತಿದ್ದರು ಮತ್ತು ಅಗತ್ಯವಿದ್ದಲ್ಲಿ, ಕೆಲವು ಪ್ರಮುಖ ಕರ್ತವ್ಯಗಳನ್ನು ನಿರ್ವಹಿಸಲು ಇಡೀ ಕಚೇರಿಯನ್ನು ತೆರೆದಿಡಲು ಸೂಚಿಸುತ್ತಿದ್ದರು. ಅಂತಹ ಸಂದರ್ಭಗಳಲ್ಲಿ, ಕೆಲವೊಮ್ಮೆ ಕಚೇರಿಗಳು ದಿನದ 24 ಗಂಟೆಗಳ ಕಾಲ ತೆರೆದಿರುತ್ತಿದ್ದವು, ಮತ್ತು ಕೆಲವೊಮ್ಮೆ ಈ ಪ್ರಕ್ರಿಯೆಯು ಸಂದರ್ಭಗಳಿಗೆ ಅನುಗುಣವಾಗಿ ದಿನಗಳು, ವಾರಗಳು ಅಥವಾ ತಿಂಗಳುಗಳವರೆಗೆ ಮುಂದುವರಿಯುತ್ತಿತ್ತು. ಕಾರ್ಯಕರ್ತರನ್ನು ಒಬ್ಬೊಬ್ಬರನ್ನು ಕರ್ತವ್ಯಗಳಿಗೆ ನಿಯೋಜಿಸಲಾಗುತ್ತಿತ್ತು, ಆದರೆ ಸಾಮಾನ್ಯವಾಗಿ, ನಾಝಿರ್‌ಗಳು ಎಲ್ಲಾ ಸಮಯದಲ್ಲೂ ಹಾಜರಿರಬೇಕು ಎಂದು ನಿರೀಕ್ಷಿಸಲಾಗಿತ್ತು. ಆದ್ದರಿಂದ, ಕೆಲವೊಮ್ಮೆ ನಾಝಿರ್‌ಗಳು ತಮ್ಮ ವಸತಿಯನ್ನು ಕಚೇರಿಗಳಲ್ಲಿಯೇ ಮಾಡುತ್ತಿದ್ದರು ಮತ್ತು ಪರಿಸ್ಥಿತಿ ಸಾಮಾನ್ಯ ಸ್ಥಿತಿಗೆ ಬರುವವರೆಗೂ ಅವರು ತಮ್ಮ ಮನೆಗಳ ಬಗ್ಗೆ ಯೋಚಿಸುತ್ತಿರಲಿಲ್ಲ.

**ತೆಹ್ರೀಕೆ ಜದೀದ್ ಅಂಜುಮನ್ ಅಹ್ಮದಿಯಾ:**

ಹಝ್ರತ್ ಮುಸ್ಲೆಹ್ ಮೌಊದ್(ರ.ಅ) 1934 ರಲ್ಲಿ ವಿದೇಶಗಳಲ್ಲಿ ಇಸ್ಲಾಂ ಧರ್ಮವನ್ನು ಬೋಧಿಸುವ ಮತ್ತು ಹರಡುವ ಉದ್ದೇಶಕ್ಕಾಗಿ "ತೆಹ್ರೀಕೆ ಜದೀದ್" ಎಂಬ ಹೊಸ ಹಣಕಾಸು ಅಭಿಯಾನವನ್ನು ಪ್ರಾರಂಭಿಸಿದರು. ಈ ಅಭಿಯಾನದ ಚಂದಗಳಿಂದ ಸಂಗ್ರಹಿಸಿದ ನಿಧಿಯನ್ನು, ವಾಖಿಫೀನೆ ಝಿಂದಗೀನ್ ಇತ್ಯದಿಗಳ ವ್ಯವಸ್ಥೆ ಮತ್ತು ವಿದೇಶಗಳಲ್ಲಿ ತಬ್ಲೀಘಿ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡಲು "ಅಂಜುಮನ್ ತೆಹ್ರೀಕ್ ಜದೀದ್" ಅನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಅಡಿಯಲ್ಲಿ ವಿವಿಧ ಇಲಾಖೆಗಳನ್ನು ಸಹ ಸ್ಥಾಪಿಸಲಾಗಿದೆ. ಪ್ರತಿಯೊಂದೂ ಇಲಾಖೆಗೆ ಒಬ್ಬ ವ್ಯಕ್ತಿ ಉಸ್ತುವಾರಿ ವಹಿಸಿರುತ್ತಾರೆ ಅವರನ್ನು "ವಕೀಲ್" ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ವಕೀಲ್ ಅತ್ತಅ್‌ಲೀಮ್, ವಕೀಲ್ ಅತ್ತಬ್ಶೀರ್, ವಕೀಲ್ ಅಲ್-ಮಾಲ್ ಇತ್ಯಾದಿ, ಮತ್ತು ಈ ಸಂಸ್ಥೆಯ ಮುಖ್ಯ ಮೇಲ್ವಿಚಾರಕರನ್ನು "ವಕೀಲ್ ಅಲ್-ಅಅ್‌ಲಾ" ಎಂದು ಕರೆಯಲಾಗುತ್ತದೆ.

ಆತ್ಮೀಯ ಓದುಗರೇ! ತೆಹ್ರೀಕ್-ಎ-ಜದೀದ್ ಬಗ್ಗೆ ಉಲ್ಲೇಖಿಸುವುದರ ಜೊತೆಗೆ, ಮಜ್ಲಿಸ್-ಎ-ಅಹ್ರಾರ್ ಬಗ್ಗೆ ಸಂಕ್ಷಿಪ್ತ ಉಲ್ಲೇಖವೂ ಸೂಕ್ತವೆನಿಸುತ್ತದೆ.

1934 ರಲ್ಲಿ ಅಹ್ರಾರ್‌ರು ಜಮಾಅತ್ ಅನ್ನು ಬಲವಾಗಿ ವಿರೋಧಿಸಿತು ಮತ್ತು ಭಾರತದಾದ್ಯಂತ ಮುಸ್ಲಿಮರನ್ನು ಪ್ರಚೋದಿಸಿತು ಮತ್ತು ಜಮಾಅತ್ ವಿರುದ್ಧ ತೀವ್ರವಾದ ದಂಗೆಯನ್ನು ಪ್ರಚೋದಿಸಿತು. ಮಜ್ಲಿಸ್ ಅಹ್ರಾರ್ ಘೋಷಿಸಿದ್ದು:

* ನಾವು ಒಂದು ವರ್ಷಕ್ಕೆ ಪ್ರತಿಜ್ಞೆ ಮಾಡುವುದೇನೆಂದರೆ: ನಾವು ಚಮಾರ್‌ಗಳು, ಹಿಂದೂಗಳು, ಸಿಖ್ಖರು ಅಥವಾ ಕ್ರಿಶ್ಚಿಯನ್ನರಿಗೆ ಬೋಧಿಸುವುದಿಲ್ಲ, ಅಥವಾ ಅವರ ಬಳಿಗೆ ಹೋಗುವುದಿಲ್ಲ, ಆದರೆ ಮಿರ್ಝಾಯಿವಾದವನ್ನು ಮಾತ್ರ ನಿರ್ಮೂಲನೆ ಮಾಡುತ್ತೇವೆ.

ಅಹ್ರಾರಿಗಳು ಜಮಾಅತ್ ವಿರುದ್ಧ ಎಂತಹ ಆಧಾರರಹಿತ ಆರೋಪಗಳನ್ನು ಮಾಡಿದರು ಎಂದರೆ ಅವರು ಸಾಮಾನ್ಯ ಮುಸ್ಲಿಮರನ್ನು ಮೋಸಗೊಳಿಸಲು ಅಹ್ಮದಿಯಾ ಜಮಾಅತ್ ಇಸ್ಲಾಂ ಮತ್ತು ದೇಶಕ್ಕೆ ಒಳ್ಳೆಯವರಲ್ಲ ಎಂದು ಹೇಳತೊಡಗಿದರು. ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಎಲ್ಲಾ ಪ್ರಶ್ನೆಗಳಿಗೆ ಬಹಳ ತಾಳ್ಮೆಯಿಂದ, ಧೈರ್ಯದಿಂದ, ದೃಢನಿಶ್ಚಯದಿಂದ ಮತ್ತು ಸ್ವಾತಂತ್ರ್ಯವಾಗಿ ಅವರ ಆ ಎಲ್ಲಾ ಆಧಾರರಹಿತ ಆರೋಪಗಳಿಗೆ ಪ್ರತಿಕ್ರಿಯಿಸಿದರು ಮತ್ತು ಸತ್ಯವನ್ನು ಸುಳ್ಳಿನಿಂದ ಪ್ರತ್ಯೇಕಿಸಲು ಅವರನ್ನು ಮುಬಾಹಿಲಕ್ಕೆ (ಚರ್ಚೆ) ಕರೆದರು, ಆದರೆ ಅವರು ಪಲಾಯನ ಮಾಡಲು ಆಯ್ಕೆ ಮಾಡಿಕೊಂಡರು.

ಅಹ್ರಾರಿಗಳು ಮುಬಾಹಲಾದಿಂದ ತಪ್ಪಿಸಿಕೊಳ್ಳುವುದು ಎಷ್ಟು ಸ್ಪಷ್ಟವಾಗಿತ್ತು ಮತ್ತು ಎದ್ದುಕಾಣುವಂತಿತ್ತು ಎಂದರೆ ಅದು ಅವರ ನೋಯುತ್ತಿರುವ ಸ್ಥಳವಾಯಿತು, ಇದನ್ನು ಪ್ರಸಿದ್ಧ ಪತ್ರಕರ್ತರೊಬ್ಬರು ಲೇವಡಿ ಮಾಡುತ್ತಾ ಹೀಗೆ ಬರೆದಿದ್ದಾರೆ:

**"ನಾನು ಮಿರ್ಝಾ ಬಶೀರುದ್ದೀನ್ ಮಹಮೂದ್ ಅಲ್ಲ, ಅವರಿಂದ ಮುಬಾಹಲಾದ ಬಗ್ಗೆ ಕೇಳಿದ ನಂತರ ಅಹ್ರಾರ್ ನಾಯಕರ ದೇಹದಲ್ಲಿ ನಡುಕ ಉಂಟಾಗುತ್ತದೆ."**

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಜಮಾಅತ್ ಅನ್ನು ಸಮಾಧಾನಪಡಿಸಿದರು ಮತ್ತು ಹೇಳಿದರು:

**"ನೀವು ಅಹ್ರಾರಿಗಳ ಪ್ರಲೋಭನೆಗೆ ಹೆದರಬೇಡಿ. ಅವರ ಸೋಲು ಸಮೀಪಿಸುತ್ತಿರುವುದನ್ನು ನಾನು ನೋಡುತ್ತೇನೆ."**

ಒಂದೆಡೆ, ಮಜ್ಲಿಸ್-ಎ-ಅಹ್ರಾರ್ ಜಮಾಅತ್ ಅನ್ನು ಅಳಿಸಿಹಾಕುವುದಾಗಿ ಹೇಳಿಕೊಳ್ಳುತ್ತಿದ್ದರೆ, ಮತ್ತೊಂದೆಡೆ, ಇಸ್ಲಾಂನ ಪ್ರತಿಪಾದಕ ತನ್ನ ಸಂಪೂರ್ಣ ಜೀವನ ಮತ್ತು ಸಂಪತ್ತನ್ನು ಇಸ್ಲಾಂ ಅನ್ನು ಭೂಮಿಯ ತುದಿಗಳಿಗೆ ಹರಡಲು ಮುಡಿಪಾಗಿಟ್ಟಿದ್ದರು. ತೆಹ್ರೀಕೆ ಜದೀದ್‌ನ ಈ ಯಶಸ್ಸಿನ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದರು:-

"ಈ ಅವಧಿಯಲ್ಲಿ, ನಮ್ಮ ಮುಬಲ್ಲಿಗೀನರು ತೆಹ್ರೀಕೆ ಜದೀದ್ ಅಭಿಯಾನದಡಿಯಲ್ಲಿ ಜಪಾನ್‌ಗೆ ಹೋದರು. ತೆಹರೀಕೆ ಜದೀದ್‌ನ ಅಡಿಯಲ್ಲಿ ಅವರು ಚೀನಾದಲ್ಲಿ ತಬ್ಲೀಗ್ ಮಾಡಲು ಹೋದರು. ತೆಹ್ರೀಕೆ ಜದೀದ್ ಅಭಿಯಾನದಡಿಯಲ್ಲಿ, ಅವರು ಸ್ಮಾರ್ಟರ್ ಮತ್ತು ಜಾವಾದಲ್ಲಿ ತಬ್ಲೀಗ್ ಮಾಡಲು ಹೋದರು. ಈ ಅಭಿಯಾನದಡಿಯಲ್ಲಿ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಅವರು ಸ್ಪೇನ್, ಇಟಲಿ, ಹಂಗೇರಿ, ಪೋಲೆಂಡ್, ಅಲ್ಬೇನಿಯಾ, ಯುಗೊಸ್ಲಾವಿಯಾ ಮತ್ತು ಅಮೆರಿಕಾಗೆ ಹೋದರು. ಅವರು ಆಫ್ರಿಕಾದ ಕೆಲವು ಕರಾವಳಿಗಳಲ್ಲಿಯೂ ತಬ್ಲೀಗ್ ಮಾಡಿದರು. ಈ ಅಭಿಯಾನದಡಿಯಲ್ಲಿ ಮುಬಲ್ಲಿಗ್‌ಗಳಿದ್ದರು, ಮತ್ತು ಈ ಮುಬಲ್ಲಿಗರ ಮೂಲಕ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಸಾವಿರಾರು ಜನರು ಅಹ್ಮದಿಯಾ ಜಮಾಅತ್ ಅನ್ನು ಪ್ರವೇಶಿಸಿದರು. (ಅಲ್-ಫಝಲ್, ನವೆಂಬರ್ 28, 1944) ಮತ್ತು ಇಂದು, ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಅಹ್ಮದಿಯತ್ತಿನ ಸಸಿಯನ್ನು ಇನ್ನೂರಕ್ಕೂ ಹೆಚ್ಚು ದೇಶಗಳಲ್ಲಿ ನೆಡಲಾಗಿದೆ.

ಹಝ್ರತ್ ಮುಸ್ಲೆಹ್ ಮೌಊದ್[ರ] ಭವಿಷ್ಯ ನುಡಿದಂತೆ, ಅಹ್ರಾರ್‌ಗಳು ನಂತರ ಬಹಳ ಅಪಮಾನ ಮತ್ತು ಅವಮಾನಕ್ಕೊಳಗಾದರು. ಎಲ್ಲರೂ ಒಮ್ಮತದಿಂದ ಅವರನ್ನು ಇಸ್ಲಾಂ ಧರ್ಮದ ದೇಶದ್ರೋಹಿಗಳು ಎಂದು ಘೋಷಿಸಿದರು. ಅವರ ಬಗ್ಗೆ ಅವರ ಸ್ವಂತ ಜನರು ಬರೆದ ಎರಡು ಪದ್ಯಗಳು ಇಲ್ಲಿವೆ: (ಆ ಪದ್ಯದ ಅನುವಾದ ಹೀಗಿದೆ)

ಅಲ್ಲಾಹನ ಕಾನೂನಿನ ಮಾನ್ಯತೆಯಿಂದ ಅಸಹ್ಯಗೊಂಡಿದ್ದಾರೆ

ಇಸ್ಲಾಂ, ಈಮಾನ್ ಮತ್ತು ಉಪಕಾರದಿಂದ (ಇಹ್‌ಸಾನ್‌ನಿಂದ) ಅಸಹ್ಯಗೊಂಡಿದ್ದಾರೆ.

ಪ್ರವಾದಿಯವರ ಗೌರವದ ರಕ್ಷಕನ ಬಗ್ಗೆ ಅಸಹ್ಯಗೊಂಡಿದ್ದಾರೆ.

ಅವಿಶ್ವಾಸಿಗಳೊಂದಿಗೆ ಸ್ನೇಹ ಬೆಳೆಸುವುದು, ಮುಸ್ಲಿಮರನ್ನು ದ್ವೇಷಿಸುವವರಾಗಿದ್ದಾರೆ

ಮತ್ತು ಇದಲ್ಲದೆ ಅವರು ಇಸ್ಲಾಮಿನ ಅಹ್ರಾರ್‌ಗಳು (ಸ್ವತಂತ್ರ ಹೋರಾಟಗಾರರು) ಎಂಬ ಪ್ರತಿಪಾದನೆ ಇದು.

ಅಹ್ರಾರ್ ಎಲ್ಲಿದ್ದಾರೆ? ಇವರು ಇಸ್ಲಾಂ ಧರ್ಮದ ದ್ರೋಹಿಗಳಾಗಿದ್ದಾರೆ.

ಪಂಜಾಬ್‌ನ ಅಹ್ರಾರ್ ಇಸ್ಲಾಂನ ದ್ರೋಹಿಗಳು

ಈ ದುರದೃಷ್ಟಕರ ಜನರು ಅರಬ್ ನಾಗರಿಕತೆಗೆ ಅಪರಿಚಿತರು.

ಅವರು ಸರ್ವಶಕ್ತನಾದ ಅಲ್ಲಾಹನ ಕ್ರೋಧಕ್ಕೆ ಹೆದರುವುದಿಲ್ಲ.

ಹೇಗಾದರೂ ಮಾಡಿ ಸರ್ಕಾರಿ ಮಂತ್ರಿಗಿರಿ ಪಡೆಯಬೇಕು.

ಅವರಿಗೆ ಮದೀನಾ ಸರ್ಕಾರದ (ಅಂದರೆ ಪ್ರವಾದಿ ಮುಹಮ್ಮದ್(ಸ)) ಬಗ್ಗೆ ಕಾಳಜಿ ಇಲ್ಲ.

ಪಂಜಾಬ್‌ನ ಅಹ್ರಾರ್-ಎ-ಇಸ್ಲಾಂನ ದ್ರೋಹಿಗಳು

**ಅಂಜುಮನ್ ಅಹ್ಮದಿಯಾ ವಕ್ಫೆ ಜದೀದ್:**

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್[ರ] ರವರ ಒಂದು ಮಹಾನ್ ಸಾಧನೆಯೆಂದರೆ 'ವಕ್ಫ್-ಎ-ಜದೀದ್'ನ ಸ್ಥಾಪನೆಯಾಗಿದೆ. ಆರಂಭದಲ್ಲಿ, ಈ ಅಭಿಯಾನವು ಉಪಖಂಡಕ್ಕೆ ಮಾತ್ರ ಸೀಮಿತವಾಗಿತ್ತು, ಆದರೆ ನಂತರ ಹಝ್ರತ್ ಖಲೀಫತುಲ್ ಮಸೀಹ್ ರಾಬಿ[ರಹ್] ಇದನ್ನು ಇಡೀ ಜಗತ್ತಿಗೆ ವಿಸ್ತರಿಸಿದರು. ವಕ್ಫ್-ಎ-ಜದೀದ್ ಅನ್ನು ಸ್ಥಾಪಿಸುವ ಮುಖ್ಯ ಉದ್ದೇಶವೆಂದರೆ ಗ್ರಾಮ ಜಮಾಅತ್‌ಗಳಿಗೆ ತರಬೇತಿ ನೀಡುವುದು ಮತ್ತು ಅವರ ಸುಧಾರಿಸುವುದಾಗಿತ್ತು, ಇದರಿಂದ ಅವರು ತಮ್ಮ ಮುಖವನ್ನು ಅವನತಿಯಿಂದ ಅಭಿವೃದ್ಧಿಯ ಕಡೆಗೆ ತರುಗಿಸುವುದಾಗಿತ್ತು. ಅದರ ಅತ್ಯಂತ ಸಿಹಿ ಫಲಗಳು ಬಹಿರಂಗಗೊಂಡಿದವು. ಸಂಕ್ಷಿಪ್ತವಾಗಿ ಹೇಳುವುದಾದರೆ, ಧಾರ್ಮಿಕ ಶಿಕ್ಷಣ ಮತ್ತು ತರಬೇತಿ, ಹಾಗೂ ಪವಿತ್ರ ಖುರ್‌ಆನ್‌ನ ಕಲಿಕೆ ಮತ್ತು ಬೋಧನೆಯ ಕೆಲಸವನ್ನು ಮುಅಲ್ಲಿಮೀನರು ಮತ್ತು ಮುಬಲ್ಲಿಗೀನರ ಮೂಲಕ ಪ್ರಾರಂಭಿಸಲಾಯಿತು, ಇದರಿಂದಾಗಿ ಇಡೀ ಜಮಾಅತ್ ಬಹಳ ಬಲಿಷ್ಠ, ಒಗ್ಗಟ್ಟು, ಸಂಘಟಿತವಾಯಿತು. ಈ ಅಭಿಯಾನದಿಂದ ಸಂಗ್ರಹಿಸಿದ ಚಂದವನ್ನು ನಿರ್ವಹಿಸಲು ಮತ್ತು ಶಿಕ್ಷಣ ಮತ್ತು ತರಬೇತಿಗಾಗಿ ನೇಮಕಗೊಂಡ ಮುಅಲ್ಲಿಮೀನರನ್ನು ಮೇಲ್ವಿಚಾರಣೆ ಮಾಡಲು "ವಕ್ಫ್-ಎ-ಜದೀದ್ ಅಂಜುಮನ್" ಎಂಬ ಪ್ರತ್ಯೇಕ ಸಂಘವನ್ನು ಸ್ಥಾಪಿಸಲಾಯಿತು. ಈ ಸಂಘದ ಅಡಿಯಲ್ಲಿ ವಿವಿಧ ಇಲಾಖೆಗಳನ್ನು ಸ್ಥಾಪಿಸಲಾಗಿದೆ ಮತ್ತು ಪ್ರತಿಯೊಂದು ಇಲಾಖೆಯನ್ನು "ನಾಝಿಮ್" ಎಂದು ಕರೆಯಲಾಗುತ್ತದೆ.

**ನಿಝಾಮೆ ಅಮಾರತ್:**

ಸದರ್ ಅಂಜುಮನ್ ಅಹ್ಮದಿಯಾದ ವ್ಯವಸ್ಥೆಯು ಪೂರ್ಣಗೊಳ್ಳುವಿಕೆಯೊಂದಿಗೆ, ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಅವರು ಎಲ್ಲೆಡೆ ನಿಯಮಿತ ಅಮಾರತ್ (ನಾಯಕತ್ವ)ದ ವ್ಯವಸ್ಥೆಯನ್ನು ಪರಿಚಯಿಸಿದರು ಮತ್ತು ಜಮಾಅತ್ ವ್ಯವಸ್ಥೆಯಲ್ಲಿ ಅಮೀರ್‌ಗೆ ವಿಧೇಯತೆಯ ಮನೋಭಾವವನ್ನು ಬಹಳ ಪ್ರಯತ್ನ ಮತ್ತು ಕಠಿಣ ಪರಿಶ್ರಮದಿಂದ ಮುಂದುವರಿಸಿದರು. ಹುಝೂರ್[ರ] ಅವರು ಇಸ್ಲಾಂ ಸ್ಥಾಪಿಸಿದ ಅಮಾರತ್ ಪರಿಕಲ್ಪನೆಯ ಬಗ್ಗೆ ಸಂಪೂರ್ಣವಾಗಿ ತಿಳಿದಿದ್ದರು ಮತ್ತು ಅದರ ಪ್ರತಿಯೊಂದು ಅಂಶವನ್ನು ಸೂಕ್ಷ್ಮವಾಗಿ ಗಮನಿಸಿದ್ದರು. ಅವರು ಈ ವಿಷಯದ ಬಗ್ಗೆ ಜಮಾಅತ್‌ಗೆ ಅಮೂಲ್ಯವಾದ ಸಲಹೆಯನ್ನು ನೀಡಿದರು ಮತ್ತು ಜಮಾಅತ್‌ನ ಸ್ನೇಹಿತರ ಮನಸ್ಸಿನಲ್ಲಿ ಅಮಾರತ್‌ನ ಸ್ಥಾನವನ್ನು ತುಂಬಲು ಪ್ರಯತ್ನಿಸಿದರು.

**ಮಜ್ಲಿಸೆ ಶೂರಾ ಅಥವಾ ಮಜ್ಲಿಸೆ ಮುಶಾವಿರತ್:**

1922 ರಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ರು ಮೊದಲ ಬಾರಿಗೆ ನಿಯಮಿತ ವಾರ್ಷಿಕ ಮಜ್ಲಿಸ್-ಎ-ಮುಶಾವಿರತ್ (ಸಮಾಲೋಚನಾ ಸಭೆಗಳ) ವ್ಯವಸ್ಥೆಯನ್ನು ಸ್ಥಾಪಿಸಿದರು. 1922 ರ ಮಜ್ಲಿಸ್-ಎ-ಮುಶಾವಿರತ್ (ಸಮಾಲೋಚನಾ ಮಂಡಳಿ) ಜಮಾಅತ್‌ನ ಇತಿಹಾಸದಲ್ಲಿ ವಿಶೇಷ ಮಹತ್ವವನ್ನು ಹೊಂದಿದೆ, ವಿಶೇಷವಾಗಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಅವರ ಉದ್ಘಾಟನಾ ಭಾಷಣದಲ್ಲಿ ಅವರು ಮಜ್ಲಿಸ್-ಎ-ಮುಶಾವಿರತ್‌ನ ಗುರಿಗಳು ಮತ್ತು ಉದ್ದೇಶಗಳ ಮೇಲೆ ಬೆಳಕು ಚೆಲ್ಲಿದರು. ಇಸ್ಲಾಮಿನ ಸಮಾಲೋಚನೆ ವಿಧಾನ, ಶೂರಾದ ಶಿಷ್ಟಾಚಾರ, ಮತದಾರರ ಕರ್ತವ್ಯಗಳು, ಕಾರ್ಯಸೂಚಿಯನ್ನು ವಿವರಿಸುವ ಶೂರ, ಮತ್ತು ಅವರು ಚರ್ಚಿಸುವ ವಿಧಾನ ಮತ್ತು ಶೂರಾದ ನಿರ್ಧಾರಗಳು ಮತ್ತು ಅದರ ಸ್ಥಾನಮಾನವನ್ನು ವಿವರಿಸಿದರು. ನಿಮ್ಮ ಈ ಉದ್ಘಾಟನಾ ಭಾಷಣವು ನಿಸ್ಸಂದೇಹವಾಗಿ ಅಹ್ಮದಿಯಾ ಜಮಾಅತ್‌ನ ಶೂರಾ ವ್ಯವಸ್ಥೆಗೆ ಒಂದು ಚಾರ್ಟರ್ ಆಗಿ ಕಾರ್ಯನಿರ್ವಹಿಸುತ್ತದೆ. 1922 ರಿಂದ 1965 ರವರೆಗೆ, ಈ ಸಂಸ್ಥೆಯು ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ರವರ ನೇರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ಅಭಿವೃದ್ಧಿ ಹೊಂದುತ್ತಲೇ ಇತ್ತು. ಇಂದು ನಾವು ನೋಡುತ್ತಿರುವ ಈ ಸಮಾಲೋಚನೆಯ ಪ್ರತಿಯೊಂದು ಅಂಶವು ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಅವರ ಪಾತ್ರ ಮತ್ತು ವ್ಯಕ್ತಿತ್ವದ ಮುದ್ರೆಯನ್ನು ಹೊಂದಿದೆ, ಮತ್ತು ಅವರ ವರ್ಷಗಳ ತೀವ್ರ ಶ್ರಮ, ಶ್ರದ್ಧೆಯ ಮೇಲ್ವಿಚಾರಣೆ ಮತ್ತು ಪ್ರಾಮಾಣಿಕ ದುಆಗಳು ಅದನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಆತ್ಮೀಯ ಓದುಗರೇ! ಉಪ-ಸಂಸ್ಥೆಗಳ ಸ್ಥಾಪನೆಯು ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ರವರ ಮಹಾನ್ ಸಂಘಟನಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಅವರು ಇಡೀ ಜಮಾಅತ್ ಅನ್ನು ಒಟ್ಟಿಗೆ ಸೇರಿಸಲು, ಉಳಿಸಿಕೊಳ್ಳಲು ಉಪ-ಸಂಸ್ಥೆಗಳನ್ನು ಸ್ಥಾಪಿಸಿದರು. ಅವುಗಳನ್ನು ಪರಸ್ಪರ ಸಂಪರ್ಕಿಸಲು ಮತ್ತು ಅವುಗಳನ್ನು ಕ್ರಿಯಾತ್ಮಕವಾಗಿ ರೂಪಿಸಲು ಉಪಸಂಸ್ಥೆಗಳನ್ನು ಸ್ಥಾಪಿಸಿದರು. ಅವರು 1923 ರಲ್ಲಿ ಲಜ್ನಾ ಇಮಾಅಲ್ಲಾಹ್, 1935 ರಲ್ಲಿ ಖುದ್ದಾಮುಲ್-ಅಹ್ಮದಿಯಾ ಮತ್ತು 1940 ರಲ್ಲಿ ಮಜ್ಲಿಸ್ ಅನ್ಸಾರುಲ್ಲಾಹ್ ಅನ್ನು ಸ್ಥಾಪಿಸಿದರು.

ಮೊದಲನೆಯದಾಗಿ, ನಾನು ಲಜ್ನಾ ಇಮಾಅಲ್ಲಾಹ್ ಬಗ್ಗೆ ಸಂಕ್ಷಿಪ್ತವಾಗಿ ಉಲ್ಲೇಖಿಸುತ್ತೇನೆ. ನಿಮ್ಮ ನಾಯಕತ್ವದಲ್ಲಿ ಅಹ್ಮದಿ ಮಹಿಳೆಯರು ಸಾಧಿಸಿರುವ ಪ್ರಗತಿಯ ವಿವರಗಳು ಇಸ್ಲಾಮಿನ ಜನರಿಗೆ ತುಂಬಾ ಆಸಕ್ತಿದಾಯಕ ಮತ್ತು ಪ್ರೋತ್ಸಾಹದಾಯಕವಾಗಿವೆ. ಮಹಿಳೆಯರಿಗಾಗಿ ವಿಶೇಷ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ಜಾಮಿಯಾ ನುಸ್ರತ್ ಮೂಲಕ ಕಾಲೇಜು ಮಟ್ಟದ ಉನ್ನತ ಶಿಕ್ಷಣವನ್ನು ಒದಗಿಸುವುದು, ಇದರಲ್ಲಿ ಧಾರ್ಮಿಕ ತರಬೇತಿಯ ಅಂಶವು ಬಹಳ ಪ್ರಮುಖವಾಗಿತ್ತು. ನಂತರ, ಲಜ್ನಾ ಇಮಾಅಲ್ಲಾಹ್ ಸಂಘಟನೆಯ ಮೂಲಕ, ವಿವಿಧ ಕರಕುಶಲ ಕಲೆಗಳಲ್ಲಿ ತರಬೇತಿ ನೀಡುವುದು, ಮಹಿಳೆಯರಿಗೆ ಪ್ರತ್ಯೇಕ ಕ್ರೀಡೆಗಳನ್ನು

ಆಯೋಜಿಸುವುದು, ಅವರಲ್ಲಿ ಚರ್ಚೆಗಳು ಮತ್ತು ಭಾಷಣಗಳ ಅಭಿರುಚಿಯನ್ನು ಹುಟ್ಟುಹಾಕುವುದು, ಪ್ರಬಂಧ ಬರೆಯುವತ್ತ ಅವರ ಗಮನ ಸೆಳೆಯುವುದು, ಅವರಿಗಾಗಿ ಪ್ರತ್ಯೇಕ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಪ್ರಕಟಿಸುವುದು ಮತ್ತು ಸಭೆಗಳನ್ನು ನಡೆಸುವುದು. ಮಹಿಳಾ ಭಾಷಣಕಾರರು ಮಹಿಳೆಯರನ್ನೇ ಉದ್ದೇಶಿಸಿ ಮಾತನಾಡುವ ಪ್ರತ್ಯೇಕ ಜಲ್ಸ ಸಾಲಾನದಲ್ಲಿ ಮಹಿಳಾ ಸಭೆಗಳು. ಬಡ ಅಹ್ಮದಿ ಹುಡುಗಿ ಕೂಡ ಕನಿಷ್ಠ ಮೂಲಭೂತ ಶಿಕ್ಷಣದಿಂದ ವಂಚಿತವಾಗದಂತೆ ಎಲ್ಲಾ ರೀತಿಯ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ನಿಮ್ಮ ಐವತ್ತೆರಡು ವರ್ಷಗಳ ಖಿಲಾಫತ್ ಕಾಲಾವಧಿಯಲ್ಲಿ, ನೀವು ಭಾರತದ ಹಿಂದುಳಿದ ಮಹಿಳೆಯರನ್ನು ಕೀಳು ಸ್ಥಾನದಿಂದ ಎಷ್ಟು ಉನ್ನತ ಸ್ಥಾನಕ್ಕೆ ಏರಿಸಿದ್ದಾರೆ ಎಂದರೆ ಇಸ್ಲಾಂನ ಶ್ರೇಷ್ಠತೆಯ ಮಾದರಿಯಾಗಿ ಜಗತ್ತಿಗೆ ಯಾರನ್ನು ಪ್ರಸ್ತುತಪಡಿಸಬಹುದು ಮತ್ತು ಕೆಲವು ವಿಷಯಗಳಲ್ಲಿ ಅವರು ವಿಶ್ವದ ಅತ್ಯಂತ ಅಭಿವೃದ್ಧಿ ಹೊಂದಿದ ಮತ್ತು ಮುಕ್ತ ದೇಶಗಳಲ್ಲಿ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಅಹ್ಮದಿಯಾ ಮುಸ್ಲಿಮರ ಅಂತರರಾಷ್ಟ್ರೀಯ ಸಂಘಟನೆಯಾದ ಲಜ್ನಾ ಇಮಾಅಲ್ಲಾಹ್ ನಿಮ್ಮ ಮಹಾನ್ ನಾಯಕತ್ವದಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿದೆ. ಈ ಸಂಘಟನೆಯ ಅತ್ಯುತ್ತಮ ಕಾರ್ಯಕ್ಷಮತೆಯಿಂದ ಇತರರು ಸಹ ಪ್ರಭಾವಿತರಾಗದೆ ಇರಲು ಸಾಧ್ಯವಿಲ್ಲ:

ಡಿಸೆಂಬರ್ 28, 1926 ರಂದು "ತನ್‌ಝೀಮ್" ಪತ್ರಿಕೆ ಹೀಗೆ ಬರೆಯುತ್ತದೆ:-

"ಲಜ್ನಾ ಇಮಾಅಲ್ಲಾಹ್ ಖಾದಿಯಾನ್ ಎಂಬುದು ಅಹ್ಮದಿಯಾ ಮಹಿಳಾ ಸಂಘದ ಹೆಸರಾಗಿದೆ. ಈ ಸಂಘದ ಅಡಿಯಲ್ಲಿ ಎಲ್ಲೆಡೆ ಮಹಿಳಾ ಸುಧಾರಣಾ ಮಂಡಳಿಗಳನ್ನು ಸ್ಥಾಪಿಸಲಾಗಿದೆ. ಮತ್ತು ಈ ರೀತಿಯಾಗಿ, ಪುರುಷರು ಪ್ರಾರಂಭಿಸುವ ಪ್ರತಿಯೊಂದು ಚಳುವಳಿಯೂ ಮಹಿಳೆಯರ ಬೆಂಬಲದೊಂದಿಗೆ ಯಶಸ್ವಿಯಾಗುತ್ತದೆ. ಈ ಸಂಘವು ಪ್ರಾಯೋಗಿಕವಾಗಿ ಎಲ್ಲಾ ಮಹಿಳೆಯರನ್ನು ಜಮಅತ್ತಿನ ಉದ್ದೇಶಗಳೊಂದಿಗೆ ಸಂಯೋಜಿಸಿದೆ. ಪುರುಷರಿಗಿಂತ ಮಹಿಳೆಯರ ನಂಬಿಕೆ ಹೆಚ್ಚು ಪ್ರಾಮಾಣಿಕ ಮತ್ತು ಸ್ಥಿರವಾಗಿರುತ್ತದೆ. ಪುರುಷರಿಗಿಂತ ಮಹಿಳೆಯರು ಧಾರ್ಮಿಕ ಉತ್ಸಾಹವನ್ನು ಹೆಚ್ಚು ಉಳಿಸಿಕೊಳ್ಳಬಹುದು. ಲಜ್ನಾ ಇಮಾಅಲ್ಲಾಹದ ಚಟುವಟಿಕೆಗಳು ಪತ್ರಿಕೆಗಳಲ್ಲಿ ಎಷ್ಟರ ಮಟ್ಟಿಗೆ ಪ್ರಕಟವಾಗುತ್ತಿವೆ ಎಂದರೆ, ಅಹ್ಮದೀಯರ ಭವಿಷ್ಯದ ಪೀಳಿಗೆಗಳು ಪ್ರಸ್ತುತ ಪೀಳಿಗೆಗಿಂತ ಬಲಿಷ್ಠ ಮತ್ತು ಉತ್ಸಾಹಭರಿತವಾಗಿರುತ್ತವೆ ಎಂಬುದನ್ನು ತೋರಿಸುತ್ತದೆ. ಮತ್ತು ಕಾಲ ಕಳೆದಂತೆ ನೈಸರ್ಗಿಕ ತಾಜಾತನ ಮತ್ತು ಹಸಿರನ್ನು ಕಳೆದುಕೊಳ್ಳುತ್ತಿದ್ದ ಈ ಹುಲ್ಲುಹಾಸನ್ನು ಅಹ್ಮದಿ ಮಹಿಳೆಯರು ತಾಜಾವಾಗಿಡುತ್ತಾರೆ."

("ತನ್‌ಝೀಮ್" ಪತ್ರಿಕೆ ಅಮೃತಸರ, ಡಿಸೆಂಬರ್ 28, 1926)

ಅದೇ ರೀತಿ, ಲಜ್ನಾ ಅವರ ಮಾಸಿಕ ಪತ್ರಿಕೆಯಾದ "ಮಿಸ್‌ಬಾಹ್" ಓದಿದ ನಂತರ ಒಂದು ಆರ್ಯ ಸಮಾಜದ ಪತ್ರಿಕೆ "ತೇಜ್" ನ ಸಂಪಾದಕರು ಹೀಗೆ ಬರೆದಿದ್ದಾರೆ:

"ಈ ಪತ್ರಿಕೆ ಪ್ರತಿಯೊಬ್ಬ ಆರ್ಯ ಸಮಾಜವಾದಿಯೂ ಓದಲು ಅರ್ಹವಾಗಿದೆ ಎಂದು ನಾನು ಭಾವಿಸುತ್ತೇನೆ. ಇದನ್ನು ಅಧ್ಯಯನ ಮಾಡುವುದರಿಂದ, ಅಹ್ಮದಿ ಮಹಿಳೆಯರ ಬಗ್ಗೆ ಅವರಲ್ಲಿರುವ ತಪ್ಪು ಕಲ್ಪನೆ, ಅಂದರೆ ಅವರು ಮುಸುಕುಗಳ ಹಿಂದೆ ಮುಚ್ಚಲ್ಪಟ್ಟಿರುತ್ತಾರೆ ಆದ ಕಾರಣ ಅವರಿಗೆ ಏನನ್ನೂ ಮಾಎಲು ಸಾಧ್ಯವಾಗದ ಕಾರಣ ಅವರು ತಕ್ಷಣವೇ ದೂರವಾಗುತ್ತಾರೆ ಮತ್ತು ಅವರ ಧಾರ್ಮಿಕ ಪ್ರಾಮಾಣಿಕತೆ ಮತ್ತು ತಬ್ಲೀಗಿನ ಉತ್ಸಾಹದ ಪ್ರಮಾಣವು ಅವರಿಗೆ ತಿಳಿಯುತ್ತದೆ. ಮಹಿಳಾ ಸಮಾಜಗಳನ್ನು ಸ್ಥಾಪಿಸುವುದರಲ್ಲಿ ನಾವು ತೃಪ್ತರಾಗಿದ್ದೇವೆ, ಆದರೆ ಎಲ್ಲೆಡೆ ಅಹ್ಮದಿ ಮಹಿಳೆಯರ ನಿಯಮಿತ ಸಂಘಗಳಿವೆ ಮತ್ತು ಅವರು ಮಾಡುತ್ತಿರುವ ಕೆಲಸವು ನಮ್ಮ ಮಹಿಳಾ ಸಮಾಜಗಳು ಮಾಡುತ್ತಿರುವ ಕೆಲಸಕ್ಕೆ ಹೋಲಿಸಿದರೆ ಸಂಪೂರ್ಣವಾಗಿ ಅವಾಸ್ತವಿಕವಾಗಿದೆ ಎಂದು ನಾವು ತಿಳಿದುಕೊಳ್ಳಬೇಕು. 'ಮಿಸ್‌ಬಾಹ್' ಪತ್ರಿಕೆಯನ್ನು ನೋಡುವ ಮೂಲಕ, ಭಾರತ, ಆಫ್ರಿಕಾ, ಅರೇಬಿಯಾ, ಈಜಿಪ್ಟ್, ಯುರೋಪ್ ಮತ್ತು ಅಮೆರಿಕಾದಲ್ಲಿ ಅಹ್ಮದಿ ಮಹಿಳೆಯರು ಹೇಗೆ ಮತ್ತು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದ್ದಾರೆಂದು ನಾವು ನೋಡುತ್ತೇವೆ. ಅವರ ಧಾರ್ಮಿಕ ಪ್ರಜ್ಞೆಯು ಎಷ್ಟು ಶ್ಲಾಘನೀಯವೆಂದರೆ ನಾವು ನಾಚಿಕೆಪಡಬೇಕು. ಕೆಲವು ವರ್ಷಗಳ ಹಿಂದೆ, ಅವರ ಅಮೀರ್ ಮಸೀದಿಗೆ ಐವತ್ತು ಸಾವಿರ ರೂಪಾಯಿಗಳನ್ನು ಕೇಳಿದರು ಮತ್ತು ಈ ಮೊತ್ತವನ್ನು ಮಹಿಳೆಯರಿಂದ ಬರುವ ಚಂದಗಳಿಂದ ಮಾತ್ರ ಪೂರೈಸಬೇಕೆಂಬ ಷರತ್ತನ್ನು ವಿಧಿಸಿದರು. ಹಾಗಾಗಿ, ಹದಿನೈದು ದಿನಗಳ ಅಲ್ಪಾವಧಿಯಲ್ಲಿ, ಆ ಮಹಿಳೆಯರು ಐವತ್ತು ಸಾವಿರದ ಬದಲು ಐವತ್ತೈದು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದರು."

**ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ:**

ಈ ಮಜ್ಲಿಸ್ ಅನ್ನು 1938 ರಲ್ಲಿ ಸ್ಥಾಪಿಸಲಾಯಿತು. ಮಜ್ಲಿಸ್‌ನ ಕೆಲಸವನ್ನು ಪರಿಣಾಮಕಾರಿಯಾಗಿ ನಡೆಸಲು, ಈ ಸಂಸ್ಥೆಯನ್ನು ವಿವಿಧ ವಿಭಾಗಗಳಾಗಿ ವಿಂಗಡಿಸಲಾಗಿದೆ. ಉದಾಹರಣೆಗೆ, ಎತೆಮಾದ್, ತಜ್ನೀದ್ (ನೇಮಕಾತಿ), ಮಾಲ್ (ಸಂಪತ್ತು), ತಅ್‌ಲೀಮ್ (ಶಿಕ್ಷಣ), ತರಬೇತಿ, ಇಸ್ಲಾಹ್ ವ ಇರ್ಷಾದ್ (ಸುಧಾರಣೆ ಮತ್ತು ಮಾರ್ಗದರ್ಶನ), ತೆಹ್ರೀಕೆ ಜದೀದ್, ಮಾನವ ಸೇವೆ, ದೈಹಿಕ ಆರೋಗ್ಯ, ವಖಾರೆ ಅಮಲ್, ಕೈಗಾರಿಕೆ ಮತ್ತು ವ್ಯಾಪಾರ, ಇಶಾಅತ್ (ಪ್ರಕಟಣೆ), ಅತ್‌ಫಾಲ್ (ಮಕ್ಕಳ ವಿಭಾಗ). ಎತೆಮಾದ್ ವಿಭಾಗದ ಉಸ್ತುವಾರಿ ಹೊಂದಿರುವ ವ್ಯಕ್ತಿಯನ್ನು ಮುತಮಿದ್ ಎಂದು ಕರೆಯಲಾಗುತ್ತದೆ ಮತ್ತು ಇತರ ಪ್ರತಿಯೊಂದು ಇಲಾಖೆಯ ಉಸ್ತುವಾರಿ ಹೊಂದಿರುವ ವ್ಯಕ್ತಿಯನ್ನು ಮುಹ್‌ತಮಿಮೀನ್ ಎಂದು ಕರೆಯಲಾಗುತ್ತದೆ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಕಾಲಕಾಲಕ್ಕೆ ಈ ಕ್ಷೇತ್ರಗಳಲ್ಲಿ ತಮ್ಮ ಖುದ್ದಾಮರಿಗೆ ಬಹಳ ಉಪಯುಕ್ತ ಸೂಚನೆಗಳನ್ನು ನೀಡುತ್ತಿದ್ದರು. ಹುಝೂರ್(ರ) ಅವರ ಆ ಉದಾತ್ತ ಸೂಚನೆಗಳನ್ನು "ಮಶ್‌ಅಲೆ ರಾಹ್" ಎಂಬ ದಪ್ಪ ಪುಸ್ತಕದ ರೂಪದಲ್ಲಿ ಪ್ರಕಟಿಸಲಾಗಿದೆ.

**ಮಜ್ಲಿಸ್ ಅತ್‌ಫಾಲುಲ್ ಅಹ್ಮದಿಯಾ:**

ಜುಲೈ 1940 ರಲ್ಲಿ, ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಅವರಿಗೆ 8 ರಿಂದ 15 ವರ್ಷದೊಳಗಿನ ಮಕ್ಕಳನ್ನು ಸುಸಂಘಟಿಸಲು ಆಜ್ಞಾಪಿಸಿದರು ಮತ್ತು ಅತ್‌ಫಾಲುಲ್ ಅಹ್ಮದಿಯಾ ಎಂಬ ಹೆಸರಿನಲ್ಲಿ ಅವರಿಗಾಗಿ ಒಂದು ಸಂಘವನ್ನು ಸ್ಥಾಪಿಸಲು ಆದೇಶಿಸಿದರು. ಏಕೆಂದರೆ ಈ ಮಕ್ಕಳು ಮೂಲ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ನರ್ಸರಿಯಾಗಿದೆ. ಮುಂದೆ ಭವಿಷ್ಯದಲ್ಲಿ ಇದೇ ಮಕ್ಕಳು ಜಮಾಅತ್ತಿನ ಕೆಲಸವನ್ನು ವಹಿಸಿಕೊಳ್ಳುವವರಾಗುತ್ತಾರೆ ಆದ್ದರಿಂದ, ಅವರಿಗೆ ಆರಂಭದಿಂದಲೇ ತರಬೇತಿ ನೀಡಬೇಕು.

**ಮಜ್ಲಿಸ್ ಅನ್ಸಾರುಲ್ಲಾಹ್:**

1940 ರಲ್ಲಿ, ಹುಝೂರ್(ರ) ಮಜ್ಲಿಸ್ ಅನ್ಸಾರುಲ್ಲಾವನ್ನು ಸ್ಥಾಪಿಸಿದರು ಮತ್ತು ಅವರು ಹೇಳಿದರು: ಮಜ್ಲಿಸ್ ಅನ್ಸಾರುಲ್ಲಾವನ್ನು ಸ್ಥಾಪಿಸುವ ಉದ್ದೇಶವೆಂದರೆ ಜೀವನದ ಆ ಭಾಗದಲ್ಲಿ ಒಬ್ಬ ವ್ಯಕ್ತಿಯು ತನ್ನ ಕಾರ್ಯಗಳಲ್ಲಿ ಸೋಮಾರಿಯಾಗುತ್ತಾನೆ, ಅವನು ಧಾರ್ಮಿಕ ವಿಷಯಗಳಲ್ಲಿ ಸೋಮಾರಿಯಾಗಿರಬಾರದು ಮತ್ತು ಅವನು ತನ್ನನ್ನು ನಿಷ್ಪ್ರಯೋಜಕ ಮತ್ತು ತನ್ನನ್ನು ಅವಮಾನತುಗೊಳಿಸಲಾದ ಅನುತ್ಪಾದಕ ಅಂಗ ಎಂದು ಭಾವಿಸಬಾರದು.

ಈ ಸಂಘಗಳು ಸಾಂಸ್ಥಿಕ ಮತ್ತು ತರಬೇತಿ ವಿಷಯಗಳಲ್ಲಿ ಬಹಳ ಉಪಯುಕ್ತ ಸೇವೆಗಳನ್ನು ಒದಗಿಸಲು ಸಮರ್ಥವಾಗಿವೆ, ಅದರೊಂದಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಅವುಗಳ ದಾಖಲೆಯು ಅಸೂಯಾರ್ಹವಾಗಿದೆ. ಈ ಸಂಘಟನೆಗಳ ಯಶಸ್ಸು ಮತ್ತು ಅವುಗಳ ಅದ್ಭುತ ಫಲಿತಾಂಶಗಳು ಎಷ್ಟು ಸ್ಪಷ್ಟವಾದ ಸಂಗತಿಗಳೆಂದರೆ, ಹೊರಗಿನವರು ಸಹ ಪ್ರಭಾವಿತರಾಗದೆ ಇರಲು ಸಾಧ್ಯವಾಗಲಿಲ್ಲ. ಹೀಗಾಗಿ, ಅಹ್ಮದಿಯಾ ಜಮಾಅತ್‌ಗೆ ವಿರೋಧ ವ್ಯಕ್ತಪಡಿಸಿದ್ದಕ್ಕಾಗಿ ಕುಖ್ಯಾತವಾಗಿರುವ ಮಜ್ಲಿಸ್-ಎ-ಅಹ್ರಾರ್‌ನ ವಕ್ತಾರ "ಝಮ್‌ಜಮ್" ಈ ಅಪೇಕ್ಷಣೀಯ ಸಂಘಟನೆಯ ಜಮಾಅತ್ ಬಗ್ಗೆ ಉಲ್ಲೇಖಿಸುತ್ತಾ, ಅವರು ವಿಷಾದ ಮತ್ತು ದುಃಖದಿಂದ ಬರೆಯುತ್ತಾರೆ:

"ನಮ್ಮಲ್ಲಿ ಯಾವ ಸಂಘಟನೆಯೇ ಇಲ್ಲ ಮತ್ತು ಅವರು ಸಂಸ್ಥೆಗಳೊಳಗೆ ಸಂಘಟನೆಗಳನ್ನು ಹೊಂದಿರುವವರಾಗಿದ್ದಾರೆ. ನಾವು ಚದುರಿಹೋಗಿದ್ದೇವೆ ಮತ್ತು ತೊಂದರೆಗೊಳಗಾಗಿದ್ದೇವೆ, ಮತ್ತು ಅವರು ವೃತ್ತದಿಂದ ವೃತ್ತಕ್ಕೆ ಸೀಮಿತರಾಗಿದ್ದಾರೆ ಮತ್ತು ಸುತ್ತುವರೆದಿದ್ದಾರೆ, ಬಲವಾದ ಮತ್ತು ಸಂಘಟಿತರಾಗಿದ್ದಾರೆ. ಅಹ್ಮದಿಯ್ಯತ್ ಒಂದು ವೃತ್ತವಾಗಿದೆ, ಇದರಲ್ಲಿ ಪ್ರತಿಯೊಬ್ಬ ಅಹ್ಮದಿ, ಯುವಕರು ಮತ್ತು ವೃದ್ಧರು, ಪುರುಷರು ಮತ್ತು ಮಹಿಳೆಯರು, ಮಗು ಮತ್ತು ವೃದ್ಧರು ಪ್ರತಿಯೊಬ್ಬರು "ನಬುವ್ವತ್"ನ ಕೇಂದ್ರದ ಮೇಲೆ ಕೇಂದ್ರೀಕೃತರಾಗಿದ್ದಾರೆ ಮತ್ತು ಒಂದಾಗುತ್ತಾರೆ. ಆದರೆ ಸಂಘಟನೆಯ ಅಗತ್ಯತೆ ಮತ್ತು ಅದರ ಅನುಗ್ರಹಗಳ ಜ್ಞಾನ ಮತ್ತು ಅರಿವು ಈ ಸಮಗ್ರ ಮತ್ತು ನಿರ್ಬಂಧಿತ ಸಂಘಟನೆ ಸಾಕಾಗುವುದಿಲ್ಲ ಎಂದು ನೋಡಬೇಕು. ಈ ವಿಶಾಲ ವೃತ್ತದೊಳಗೆ, ಅನೇಕ ಸಣ್ಣ ವಲಯಗಳನ್ನು ರಚಿಸಲಾಗಿದೆ ಮತ್ತು ಪ್ರತಿಯೊಬ್ಬ ವ್ಯಕ್ತಿಯನ್ನು ಅವನು ಚಲಿಸಲು ಸಾಧ್ಯವಿಲ್ಲ. ಮಹಿಳೆಯರಿಗಾಗಿ ಶಾಶ್ವತ ಸಂಘ ಲಜ್ನಾ ಇಮಾಅಲ್ಲಾಹ್ ಎಂಬ ಶಾಶ್ವತ ವ್ಯವಸ್ಥೆ ಇದೆ. ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಿ ಇದರ ಪ್ರತ್ಯೇಕ ವಾರ್ಷಿಕ ಸಮ್ಮೇಳನವನ್ನು ಆಯೋಜಿಸಲಾಗುತ್ತದೆ. ಖುದ್ದಾಮುಲ್-ಅಹ್ಮದಿಯಾ ಯುವಕರಿಗೆ ಪ್ರತ್ಯೇಕ

ವ್ಯವಸ್ಥೆಯಾಗಿದೆ. ಹದಿನೈದರಿಂದ ನಲವತ್ತು ವರ್ಷದೊಳಗಿನ ಪ್ರತಿಯೊಬ್ಬ ಅಹ್ಮದಿಯು ಈ ಸಂಘಟನೆಗೆ ಸೇರಬೇಕು.

